
ಅಕ್ಟೋಬರ್ ೧೯೭೮ ಸಂಪುಟ :

ಬಸವ ಶಕೆ ೮೭೨ ಸಂಚಿಕೆ :

M. Shivalingayya
Basava Gangothri

ಕಲ್ಯಾಣ ಕಿರಣ



ಕಲ್ಯಾಣ ಕಿರಣ

ಮಾಸಪತ್ರಿಕೆ

ಸಂಪುಟ : ೪ ಅಕ್ಟೋಬರ್ ೧೯೭೮
ಸಂಚಿಕೆ : ೬ ಬಸವ ಶಕೆ ೮೭೨

ಬಿಡಿ ಸಂಚಿಕೆ ವಾರ್ಷಿಕ ಚಂದಾ
ಒಂದು ರೂಪಾಯಿ ಹನ್ನೆರಡು ರೂಪಾಯಿ

ಈ ಬೆಳಕಿನಲ್ಲಿ ಸುಳಿದಾಡಿದಾಗ ?

೧.	ನುಡಿ-ನೈವೇದ್ಯ	ಮಾತಾಜಿ	೧
೨.	ನಿಮ್ಮ ಅನಿಸಿಕೆ	ಓದುಗರು	೨
೩.	ಮಾತೃ ಹರಕೆ	ಮಾತಾಜಿ	೩
೪.	ವಚನ ನವನೀತ	ಸ್ವಾಮಿ ಲಿಂಗಾನಂದರು	೧೨
೫.	ಸಮಸ್ಯೆ ? ಸಮಾಧಾನ !	ಸಮಾಧಾನಿ	೧೬
೬.	ಮೂರು ಪದಗಳ ಮಾಲೆ	ಶಿವರಾಜ ಬೀದರ್	೨೧
೭.	ಮಹಾತ್ಮಾ ಗಾಂಧಿಯನ್ನು ಕುರಿತು	ಸಂಗ್ರಹ : ಟಿ. ಎಂ. ಪಾಟೀಲ	೨೨
೮.	ಮಾಂಸಾಹಾರ ಅವೈಜ್ಞಾನಿಕವೆ ?	ಅನುವಾದ : ಟಿ. ಎ. ದಾಸಪ್ಪ	೨೫
೯.	ಬೋಳು ಬಸವನ ಬೊಂತೆ	ಪಿ. ಬಸವಣ್ಣ	೨೮
೧೦.	ಅನು ಒಲಿದಂತೆ ಹಾಡುವೆ	ಮಾತಾಜಿ	೩೦
೧೧.	ಬಸವ ಗಂಗೋತ್ರಿ ಯೋಜನೆಗಳು	ಮಾತಾಜಿ	೪೧
೧೨.	ಈ ತಿಂಗಳ ಮಂಗಳ ಮೂರ್ತಿ	ಗೋ.ರು.ಚ.	೫೦
೧೩.	ಕಾರ್ಯಕ್ರಮಗಳ ವಿವರಣೆ	ಶಿ. ಚಂದ್ರಕಂಠಿ	


ಮುಖಪುಟ : ಜ್ಞಾನಪೀಠ ಪ್ರಶಸ್ತಿ ವಿಜೇತ ಕೆ. ಡಾ॥ ಶಿವರಾಮ ಕಾರಂತರು
ಮುಖಪುಟದ ಚಿತ್ರ ಕೃಪೆ : ಪಿ. ರಾಮಚಂದ್ರ ಹೇರ್ಳೆ
ಹಿಂಬದಿಯ ಹೊದಿಕೆ : ಪೂಜ್ಯಶ್ರೀ ಜಗದ್ಗುರು ಮಾತಾಜಿಯವರು ತಾ॥ 9-9-78 ರಂದು
ದಾವಣಗೆರೆಯ ನಾಟ್ಯಗಣಪತಿ ಉತ್ಸವ ಕಾರ್ಯಕ್ರಮದಲ್ಲಿ

ಕಲ್ಯಾಣ ಕಿರಣ

ರಾಷ್ಟ್ರಪಿತನಿಗೆ **ನುಡಿ-ನೈವೇದ್ಯ**

ಯುಗಪುರುಷ, ಶಾಂತಿದೂತ, ಕ್ರಾಂತಿಕಾರಿ, ದಲಿತಪ್ರೀತ
ಎಂದು ಮುಂತಾಗಿ ಹಾಡಿ ಹೊಗಳುತ್ತಿಹೆವಲ್ಲಾ ಗಾಂಧಿತಾತಾ :
ಇದರಿಂದ ನಿಜಕ್ಕೂ ಆಗದೇ ನಿನ್ನಾತ್ಮ ಶಾಂತ ?
ವರುಷಕ್ಕೊಮ್ಮೆ ತಪ್ಪದೆ ನಿನ್ನ ಹಬ್ಬವನು ಮಾಡುವೆವು:
ಅಂದೆಲ್ಲ ಹರುಷದಿಂ ಹಾಡಿ ಹರಸುವೆವು.
ಇದಕ್ಕಿಂತ ಹೆಚ್ಚೇನು ಮಾಡಬೇಕು ನಾವು ?
ವೈಭವದ ಮಂಟಪದಿ ಭಾವಚಿತ್ರವನಿರಿಸಿ
ಹೂವು-ವಿದ್ಯುದ್ದೀಪಗಳ ಅಲಂಕಾರ ಮಾಡಿ,
ಪಂಚತಾರಾ ಹೋಟೆಲುಗಳಿಗೆ ನಿನ್ನಯಾ ಹೆಸರಿಟ್ಟು
ಮುಗಿಲಿಗೇರಿದ ಶೋಷಕರ ಭವನಗಳಿಗೆ ಗಾಂಧೀಕುಟೀರವೆಂದೇ ಅನ್ನುವೆವು.
ವೀರ್ಯವಂತ ತ್ಯಾಗಿಗಳಿಂದ ನಿರ್ಮಿಸಬಯಸಿದ್ದೆ ನಾಡಮಂದಿರವ
ನರಸತ್ತವರು, ಶೋಷಕರು, ಸಮಯಸಾಧಕರಿಂದ ಕಟ್ಟಿಹೆವಾವೀ ನಾಡನ್ನು.
ಜೀವನ ಶಿಕ್ಷಣವ ನೀಡಿ ರಾಷ್ಟ್ರರಕ್ಷಕರ ರೂಪಿಸಬಯಸಿದ್ದೆ ನೀನು,
ಸ್ವಾರ್ಥಸಾಧಕರ ತಂಡ ಬೆಳೆಸಿ ನರಭಕ್ಷಕರ ನಿರ್ಮಿಸಿಹೆವಾವು.
ನೀನು ಕಟೆಯ ಬಯಸಿದ್ದು ನಂದಿಯನು;
ನಾವು ಕಟೆದು ಪ್ರತಿಷ್ಠಾಪಿಸಿದ್ದು ಹಂದಿಯನು.
ನೋಡಿ ನೀನು ಬಹು ಆನಂದ ಪಡಬೇಕು,
ನೊಂದರೆ ಮಾತ್ರ ನಿನಗಿಂತ ಬೇರಿಲ್ಲ ಹುಚ್ಚ.
ಗೋಡ್ಸೆಯಲ್ಲ ನಿನ್ನನ್ನು ನಿಜಕ್ಕು ಕೊಂದವನು,
ಹೊಟ್ಟೆ ಬೆನ್ನಿಗಂಟಿದವರ ಮುಂದೆ ನಿನ್ನ ಹೆಸರ್ಹೇಳಿ
ಅಧಿಕಾರ ಗಿಟ್ಟಿಸಿ, ಅಟ್ಟಹಾಸದ ನಗೆ ಚೆಲ್ಲುವ
ನಿನ್ನನುನಾಯಿಗಳೆಂದು, ಕ್ಷಮಿಸು,
ಅನುಯಾಯಿಗಳೆಂದು ಬಿರುದು ಪಡೆದವರು,
ಸತ್-ಚಿತ್-ಆನಂದ ಮೌಲ್ಯಗಳ ಧ್ಯೇಯ ಮರೆದವರು.

—ಜಗದ್ಗುರು ಮಾತೆ ಮಹಾದೇವಿ



ಪೂಜ್ಯ ಮಾತಾಜಿ,

ಕಲ್ಯಾಣ ಕಿರಣದ ಆಗಸ್ಟ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಮುಖಪುಟದ ಇಡಿಯ ಚಿತ್ರ, ಹಿಂಭಾಗದ ಪೂಜ್ಯ ಅರವಿಂದರ ಚಿತ್ರ ತುಂಬಾ ಸಮರ್ಪಕವಾಗಿವೆ. ಅಲ್ಲದೆ ನಿಮ್ಮ ಮಾತೃಹರಕೆಯಲ್ಲಿ ಬರೆದಿರುವ "ನಾವು ಸಾಧಿಸಿದ್ದೇನು ?" ಎಂಬ ವಿಷಯ ಆಗಸ್ಟ್ 15ಕ್ಕೆ ಸಮಯೋಚಿತ ವ್ಯಾಖ್ಯಾನವಾಗಿದ್ದು, ಪ್ರಪಂಚದ ಗ್ರಂಥಾಲಯದಲ್ಲಿ ಮುಂದಿನ ಸಾಲಿನಲ್ಲಿ ಸೂರ್ಯ-ಚಂದ್ರರಿರುವ ತನಕ ಕಾಯ್ದಿಡಬೇಕಾದ ಕೃತಿಯಾಗಿವೆ. ನಾನು ನಿಮ್ಮ ಕಲ್ಯಾಣ ಕಿರಣದ ಸತತ ಓದುಗನಿದ್ದು, ಪ್ರತಿ ತಿಂಗಳು ಓದಿದಾಗ ಸಾರ್ಥಕವಾಯ್ತು ಎಂದು ಭಾವಿಸುತ್ತೇನೆ. ಆಗಸ್ಟ್ ತಿಂಗಳ ಮಾತೃಹರಕೆ ಓದಿದ ತಕ್ಷಣ ಹೃದಯಪೂರ್ವಕವಾಗಿ ಆ ಬಗ್ಗೆ ನಿಮಗೆ ಕೃತಜ್ಞತೆ ಅರ್ಪಿಸಬೇಕೆನಿಸಿತು. ನಿಮ್ಮ ಪರಿಶುದ್ಧ ತಪಸ್ಸಿನ ಫಲದಿಂದ ಇಂತಹ ಜನಜಾಗೃತಿಯ ಲೇಖನಗಳು ಪ್ರತಿ ತಿಂಗಳೂ ಮೂಡಿಬರಲಿ ಎಂದು ಹಾರೈಸುವೆ. ಸಚ್ಚಿದಾನಂದನು ನಿಮ್ಮ ವ್ಯಕ್ತಿತ್ವವನ್ನು ಪ್ರಪಂಚದ ಪ್ರಥಮ ಮಹಿಳಾ ಜಗದ್ಗುರುವಾಗಿ, ಮಹಿಳಾ ವಿವೇಕಾನಂದನನ್ನಾಗಿ ಬೆಳಗಲೆಂದು ಹಾರೈಸುವೆ.

ಶಿವಮೊಗ್ಗ **ಹೆಚ್. ಎಂ. ಬಸಪ್ಪ**

ಕಲ್ಯಾಣ ಕಿರಣ ಮಾಸಪತ್ರಿಕೆ ಓದಲು ಬಲು ಚಂದಾ.
ಬೇಸರಗೊಂಡ ಮನಕ್ಕೆ ಮುದವನ್ನೆರೆಯುವ ಜ್ಞಾನದ ಮಕರಂದ.
ಬೇಗನೆ ಬಾರದು ಏಕೋ ಎಂದು ಕಾಯಲು ತೊಡಗಿಪ ಮುದ್ದುಕಂದ.
ಓದುಗರೆಲ್ಲರ ಮನದಲಿ ಹರಿವುದು ಅರಿವಿನ ಆನಂದ.

ಲಕ್ಷ್ಮೇಶ್ವರ **ಡಿ. ಸಿ. ಕುಲಕರ್ಣಿ**

'ಕಲ್ಯಾಣ ಕಿರಣ' ಮಿತ್ರನೋ, ಗುರುವೋ, ಬಂಧುವೋ ನಾವರಿಯೆವು. ಬರುವುದು ಒಂದೆರಡು ದಿವಸ ತಡವಾದರೆ ಕಾತುರ, ಕಳವಳ. ನಮಗಾಗಿ ಅದು ಏನನ್ನೋ (?) ಹೊತ್ತು ತರುವದೆಂಬ ನಿರೀಕ್ಷೆ. ಬರುವುದು ತಡವಾದಾಗ ಮೂಕ ವೇದನೆ. ಬಂದಾಗ ತನ್ಮೂಲಕ ತಮ್ಮ ದರ್ಶನ ; ಅದರ ಸ್ಪರ್ಶವೇ ಅಮೃತ ಸಮಾನ.

ಬಾಗಲಕೋಟೆ **ದೇವಕಿ ಸೂಳೀಭಾವಿ**

ಸಾತ್ವಿಕರ ನೊಂದ ಮನಸ್ಸಿಗೆ ನಿರ್ಮಲವಾದ ತಂಪೆರೆಯುವ ಸಮಾಧಾನ, ಕೇಳುಗರೊಬ್ಬರಿಗೆ ಮಾತ್ರವೇ ಸಾಂತ್ವನದ ನುಡಿಯಾಗಿರದೆ, ನನ್ನಂತಹ ಅಸಂಖ್ಯಾತ ಓದುಗರಿಗೂ ಚೇತೋಹಾರವಾದ ನುಡಿಮುತ್ತುಗಳಾಗಿವೆ.

ಬೆಂಗಳೂರು-೧೦ **ಕುಮಾರಿ ಕಾರ್ತೀಕ**

ಜುಲೈ ತಿಂಗಳ ಸಂಚಿಕೆ ಅತ್ಯಂತ ಆಕರ್ಷಣೀಯ. ಪ್ರತಿಯೊಂದು ಪುಟವೂ ಹೂರಣ ತುಂಬಿದ ಹೋಳಿಗೆಯಂತೆ. ಬರೀ ಹೂರಣವೇ, ಹೋಳಿಗೆಯೇ ? ದೃಷ್ಟಾಂತ ಕಥೆಯೆಂಬ ಹಪ್ಪಳ ಉಂಟು : ನಗೆ ಹನಿಗಳೆಂಬ ಉಪ್ಪಿನ ಕಾಯುಂಟು. ಅತ್ಯಂತ ಪ್ರೌಢವಾಗಿಹ ಪತ್ರಿಕೆಗೆ ದೀರ್ಘಭವಿಷ್ಯ ಬಯಸುವೆವು.

ಹಾಸನ **ಸಿದ್ಧಪ್ಪ, ಕೃಷ್ಣವೇಣಿ**

ತಮ್ಮ ಸಂಪಾದಕತ್ವದಲ್ಲಿ ಹೊರಡುವ ಕಲ್ಯಾಣಕಿರಣ ಮಾಸಪತ್ರಿಕೆ ಅನುಭವಾಮೃತಸಾರವಾಗಿದೆ. ಭಾರತೀಯ ಪರಂಪರೆಯ ಶ್ರೇಷ್ಠ ಮೌಲ್ಯಗಳನ್ನು ಗಾಳಿಗೆ ತೂರಿ, ಪಾಶ್ಚಿಮಾತ್ಯರ ವಿಕೃತ ಆಚರಣೆಗಳಿಗೆ ಬಲಿಯಾದವರನ್ನು ಜಾಗೃತಿಸುವ ಚಾಟಿಯಂತಿದೆ. ಧರ್ಮಾಧರ್ಮಗಳ ವಿವೇಚನೆ ಇಲ್ಲದೆ ಮುನ್ನುಗ್ಗಿ ಮುಗ್ಗರಿಸುವವರಿಗೆ ಮಾರ್ಗದರ್ಶಕ ದೀಪ್ತಿಯಾಗಿದೆ. ಕನ್ನಡ ಕುಲಕೋಟಿಯ ಮನೆಮನೆಗೆ ಇದು ಮುಟ್ಟಿದಾಗ ನಮ್ಮ ಹೃದಯಕ್ಕೆ ಸಂತೃಪ್ತಿ.

ಕೋಡೀಪಾಳ್ಯ **ಸಿ. ಸೋಮಶೇಖರಯ್ಯ**

ತಮ್ಮನ್ನು ಮತ್ತು ಪೂಜ್ಯ ಸದ್ಗುರುಗಳಾದ ಶ್ರೀ ಲಿಂಗಾನಂದ ಸ್ವಾಮಿಗಳನ್ನು ಪ್ರತ್ಯಕ್ಷ ಕಂಡಿಲ್ಲವಾದರೂ ಕಲ್ಯಾಣ ಕಿರಣದ ಒಡಲೊಳು ಬರುವ ಲೇಖನಗಳ ಮೂಲಕ ತಮ್ಮ ದಿವ್ಯ-ಭವ್ಯ ವ್ಯಕ್ತಿತ್ವಕ್ಕೆ ಶಿರಸಾ ವಂದಿಸಿದ್ದೇನೆ : ೪೮ನೆಯ ವರುಷದ ಶುಭನಮನಗಳು.

ಚಿತ್ರದುರ್ಗ **ಶಿವಕುಮಾರ್,** ಅಂತಿಮ ಬಿ.ಎಸ್‌ಸಿ.

ಪತ್ರಿಕೆಯ ಮಾಧ್ಯಮದಲ್ಲೇ ಹಲವಾರು ದಗ್ಧ ಹೃದಯಗಳಿಗೆ ಸಾಂತ್ವನ ನೀಡುವ, ಮುಮುಕ್ಷುಗಳಿಗೆ ಮಾರ್ಗ ತೋರುವ, ತಪ್ಪಿದವರನ್ನು ಎಚ್ಚರಿಸುವ, ಮೈಮರೆತವರನ್ನು ಜಾಗೃತಿಸುವ ನಿಮ್ಮ ಲೇಖನಿಯ ಮೋಡಿಗೆ ಶರಣಾಗಿದ್ದೇನೆ. ನಮ್ಮಂತಹ ಅನೇಕರ ಆಯುಷ್ಯ ಧಾರೆಯೆರೆದು ತಮ್ಮಂತಹವರನ್ನು ಚಿರಕಾಲ ತನ್ನ ಕಾರ್ಯಕ್ಕಾಗಿ ಆ ದೇವನು ಉಳಿಸಿಕೊಳ್ಳಲೆಂದು ಅವನಲ್ಲಿ ಆಗಾಗ ಮೌನ ಪ್ರಾರ್ಥನೆ ಸಲ್ಲಿಸುತ್ತೇನೆ.

ಶಿವಮೊಗ್ಗ ★ ★ **ರಾಜಶೇಖರ,** ಬಿ.ಎ.



ಪತ್ರಿಕೋದ್ಯಮ ಮತ್ತು ಪಾವಿತ್ರ್ಯತೆ

"ಪತ್ರಿಕೋದ್ಯಮವು ಒಂದು ಕೈಗಾರಿಕೆಯೂ ಆಗಬಾರದು, ಒಂದು ಉದ್ಯಮವೂ ಆಗಬಾರದು. ಅದೊಂದು ಆದರ್ಶ ಸೇವೆಯಾಗಬೇಕು" ಎಂದರು ನಮ್ಮ ಕೇಂದ್ರ ಸರ್ಕಾರದ ಸಚಿವರಾದ ಅತುಲ ಬಿಹಾರಿ ವಾಜಪೇಯಿಯವರು. ಈ ವಿಷಯವೇ ಸಂಪಾದಕೀಯ ಲೇಖನಕ್ಕೆ ಅತ್ಯಂತ ಸೂಕ್ತ ಎನ್ನಿಸಿತು; ಕಾರಣವಿಷ್ಟೇ, "ಕಲ್ಯಾಣ ಕಿರಣ" ಮಾಸಪತ್ರಿಕೆಯು ಹನ್ನೆರಡು ತಿಂಗಳನ್ನು ಕಳೆದು ಎರಡನೆಯ ಹುಟ್ಟುಹಬ್ಬ ಕಾಣುತ್ತಲಿದೆ.

ಭೌತಿಕ ಪ್ರಗತಿ (Material development), ನೈತಿಕ ಉದ್ಧಾರ (Moral upliftment), ಮತ್ತು ಆತ್ಮಿಕ ಉತ್ಥಾನ (Spiritual Enlightenment) ಈ ಮೂರನ್ನು ದೃಷ್ಟಿಯಲ್ಲಿರಿಸಿಕೊಂಡು ಭೌತಿಕ, ನೈತಿಕ ಮತ್ತು ಆಧ್ಯಾತ್ಮಿಕ ಮೌಲ್ಯಗಳನ್ನು ಹೊತ್ತು ವ್ಯಕ್ತಿ, ಸಮಾಜ, ರಾಷ್ಟ್ರಗಳ ಕಲ್ಯಾಣವನ್ನು ಬಯಸುತ್ತ ಕಲ್ಯಾಣ ಕಿರಣ ಮಾಸಪತ್ರಿಕೆ 1970ರ ಜನವರಿಯಿಂದು ಜನ್ಮ ತಳೆಯಿತು. ಅತ್ಯಂತ ಜನಪ್ರಿಯವಾಗಿ, ವೈಚಾರಿಕವಾಗಿ, ಪ್ರೌಢವಾಗಿ ಎರಡೂವರೆ ವರ್ಷಗಳ ಕಾಲ ಯಶಸ್ವಿಯಾಗಿ ನಡೆಯಿತು. ನಂತರ ಆರ್ಥಿಕ ವಿಪ್ಲವಕ್ಕೆ ಒಳಗಾಯಿತು. ಮತ್ತು ಇದು ಮುಖ್ಯವಾಗಿ views paper (ವಿಚಾರ ಪತ್ರಿಕೆ), news paper (ವಾರ್ತಾ ಪತ್ರಿಕೆ) ಅಲ್ಲ. ವಾರ್ತಾಪತ್ರಿಕೆಗಳಲ್ಲಿ ಮುಖ್ಯವಾಗಿ ಅವರಿವರ ಲೇಖನಗಳನ್ನು ಒಂದಡೆ ಸೇರಿಸುವ ಜಾಣ್ಮೆ ಇದ್ದರೆ, ವಿಚಾರ ಪತ್ರಿಕೆಗಳಲ್ಲಿ ಸ್ವಯಂ ಪ್ರತಿಭೆಯ ಮೂಲಕ ಸ್ವಯಂಜ್ಞಾನವನ್ನು ಅಭಿವ್ಯಕ್ತಗೊಳಿಸುವ ಪ್ರಯತ್ನವಿರುತ್ತದೆ. ಇದಕ್ಕೆ

ವಿಶಿಷ್ಟವಾದ ಉದ್ದೇಶವಿದೆ, ಚೌಕಟ್ಟಿದೆ, ನಿರ್ದಿಷ್ಟ ಜಾಡಿದೆ. ಸಾಮಾನ್ಯವಾಗಿ ವಿಚಾರ ಪತ್ರಿಕೆಗಳು ವ್ಯಕ್ತಿಯ ಮೇಲೆ ಅವಲಂಬಿತವಾಗಿರುತ್ತವೆ ಮತ್ತು ಆ ವ್ಯಕ್ತಿಯ ವಿಚಾರಗಳನ್ನು ಓದುಗರು ಮನನಿಸಲು ಕುತೂಹಲಿಗರಾಗಿರುತ್ತಾರೆ.

ನನ್ನ ಕಾರ್ಯ ಬಾಹುಳ್ಯ ಅಧಿಕವಾಯಿತು : ಪ್ರವಚನ ಕಾಯಕ ಪ್ರಮುಖವಾಯಿತು. ಪ್ರವಚನ ಮಾಡಿದಾಗ ಬಡವ-ಬಲ್ಲಿದರು, ಸಾಕ್ಷರ-ಅನಕ್ಷರಸ್ಥರು, ಓದು ಬಲ್ಲವರು- ಓದಲಾರದವರು ಎಲ್ಲರೂ ಜ್ಞಾನವನ್ನು ಉಂಟಿ ಆನಂದಿಸಬಲ್ಲರು: ಅದು ವ್ಯಾಪಕವಾಗಿ ಜಾಗೃತಿ ಮಾಡುವುದು ಎಂದು ಅನ್ನಿಸಿತು. ಆರ್ಥಿಕ ದೃಷ್ಟಿಯಿಂದಲೂ ಮಾಸಪತ್ರಿಕೆಗೆ ನಾವೇ ದಾನಮಾಡಬೇಕಾಗುತ್ತದೆ. ಪ್ರವಚನ ಮಾಡಿದರೆ ಆ ಕಾಯಕ ಸಂಸ್ಥೆಯನ್ನೂ ಪೋಷಿಸಿ, ಪತ್ರಿಕೆಯನ್ನೂ ಸಂರಕ್ಷಿಸಬಲ್ಲುದು ಎಂದು ನಿರ್ಧರಿಸಿ; ಪ್ರವಚನ ಕಾಯಕದತ್ತ ಹೆಚ್ಚಿನ ಆಸಕ್ತಿ ವಹಿಸಿದಾಗ ಪತ್ರಿಕೆಯನ್ನು ನಿಲ್ಲಿಸಬೇಕಾಯಿತು. ಅದು ೧೯೭೨ ಮೇನಲ್ಲಿ ತಾತ್ಕಾಲಿಕವಾಗಿ ನಿಂತಿತು.

ನಮ್ಮ ಸಂಸ್ಥೆಗಳು ವ್ಯಾಪಕವಾಗಿ ಬೆಳೆದವು : ಲಕ್ಷಾವಧಿ ಭಕ್ತರನ್ನು ಆಕರ್ಷಿಸಿದವು. ದೂರವಾಣಿ ಸಂಪರ್ಕವಿಲ್ಲದ, ಅಥವಾ ಸಾರಿಗೆ ಸಂಪರ್ಕವಿಲ್ಲದ ಭೂಭಾಗಗಳು ಕೇಂದ್ರದ ಅಥವಾ ರಾಜಧಾನಿಯ ಸಂಪರ್ಕಗಳನ್ನು ಹೊಂದದಿರುವಂತೆ ನಮ್ಮ ಸಂಸ್ಥೆಯ ಚಟುವಟಿಕೆಗಳು ಜನತೆಗೆ ತಿಳಿಯದಂತೆಯೇ ಆದವು. ನಾವು ಅನ್ನವನ್ನು ಉಣ್ಣಿಸುವ ವ್ಯವಸ್ಥೆ ಮಾಡದೆ ಇರುವಾಗಲೇ, ಕೆಲವರು ನಮ್ಮ ಸದ್ಭಕ್ತರ ಹಸಿದ ನೆತ್ತಿಗಳಿಗೆ ವಿಷವನ್ನುಣ್ಣಿಸುವ ಅಪಪ್ರಚಾರದ ಕಾಯಕ ಕೈಗೊಂಡರು. ವಿವೇಕಿಗಳು ಮರುಗಿದರು, ಸಜ್ಜನರು ವ್ಯಥೆಪಟ್ಟರು, ಮುಗ್ಧರು ದುಃಖಿಸಿದರು, ಸ್ವಾರ್ಥಿಗಳು ದೂರ ಸರಿದರು, ಧೂರ್ತರು ನಿಂದಕರೊಡನೆಯೇ ಸೇರಿಕೊಂಡರು. "ಮಾತೆಯವರು ಇಂದಿರಾಜಿಯನ್ನು ಬೈದರಂತೆ, ಜೈಲಲ್ಲಿದ್ದಾರಂತೆ"—ಒಂದು ಸುದ್ದಿ. "ಅವರು ಸತ್ತೇ ಹೋಗಿದ್ದಾರಂತೆ ..."ಇನ್ನೊಂದು ಸುದ್ದಿ. ನಮಗೇನೋ ವಿಗುರ್ಭಣೆಯ ಲೋಕದ ಒಡನಾಡಿ ನಂಜನ್ನುಣ್ಣುವ ಸಾಮರ್ಥ್ಯ ಬಂದಿದೆ. ಆದರೆ ನಿಷ್ಕಲ್ಮಶ ಹೃದಯದ ಮುಮುಕ್ಷುಗಳ, ಸದ್ಭಕ್ತರ ಗತಿ! ಕುಹಕಿಗಳ ಕೈವಾಡದ ಅಷ್ಟಪದಿ ಹಿಡಿತಕ್ಕೆ ಅಂಥಹವರು ಸಿಕ್ಕಿ ಸಂದೇಹದಲ್ಲಿ ವಿಲಿವಿಲಿ ಒದ್ದಾಡುವುದನ್ನು ತಪ್ಪಿಸುವುದು 'ಹಸಿದ ಮಗುವಿಗೆ ಹಾಲೂಡಿಸಬೇಕಾದ ತಾಯಿಯ ಆದ್ಯ ಕರ್ತವ್ಯ'ದಷ್ಟೇ ತೀವ್ರ ಎನ್ನಿಸಿತು. ಪತ್ರಿಕೆಯ ಮುಖೇನ ನಮ್ಮ ಸಂಸ್ಥೆಯ ಕಾರ್ಯವ್ಯಾಪ್ತಿಯನ್ನು ಪರಿಚಯ ಮಾಡಿಕೊಡಬಹುದಲ್ಲದೆ, ವಸ್ತುಸ್ಥಿತಿಯನ್ನು ತಿಳಿಸಬಹುದು. 'ಕಡೆಗೆ ನಾವು ಜೀವಂತವಾಗಿದ್ದೇವ' ಎಂಬುದನ್ನಾದರೂ ತಿಳಿಸುತ್ತಿರುವುದು ಅವಶ್ಯಕ ಎನಿಸಿತು.

ಚಕ್ಕಮುಕ್ಕಿ ಕಲ್ಲನ್ನು ಘರ್ಷಿಸಿದಾಗ ಕಿಡಿ ಹಾರುವುದು ಸ್ವಾಭಾವಿಕ. ಹಾರಿದ

ಕಿಡಿಯನ್ನು ದೂದಿಗೆ ಹಚ್ಚಿಕೊಂಡು. ಕಟ್ಟಿಗೆಗೆ ಸಂಪರ್ಕಿಸಿ ಅದನ್ನು ಊದಿಸುವುದು ಅಷ್ಟೇ ಅವಶ್ಯಕ. ಇಲ್ಲವಾದರೆ ಕಿಡಿ ಹಾರಿ, ಆರಿಹೋಗುವುದು ಅತ್ಯಂತ ಸಹಜ. ಎಷ್ಟೋ ಸಲ ಹೊಸ ವಿಚಾರಗಳು, ಜನಜಾಗೃತಿಯ ಯೋಜನೆಗಳು ತಲೆಯಲ್ಲಿ ಮಿಂಚಿ ಮರೆಯಾಗುವವು: ಸಿಡಿದು ಕಿಡಿಯಾಗುವವು. ಅವನ್ನು ಪತ್ರಿಕೆ ಎಂಬ ದೂದಿಯ ಮಾಧ್ಯಮದಲ್ಲಿ ಜನತೆಯ ನಿಶಿತಮತಿ ಎಂಬ ಕಾಷ್ಠಕ್ಕೆ ತಾಡಿಸಿದರೆ ಜಾಗೃತ ಚೇತನಗಳು ಹಲವಾರು ಯೋಜನೆ ರೂಪಿಸಬಲ್ಲುವು. ಹೀಗೆ ಬಹುವಿಧ ಉದ್ದೇಶಗಳಿಗಾಗಿ, ಕಾರಣಗಳಿಗಾಗಿ ಕಲ್ಯಾಣಕಿರಣ ಪುನರ್ಜನ್ಮ ಪಡೆಯುವುದು ತೀರಾ ಅವಶ್ಯಕ ಎನಿಸಿತು.

ಸಂಕಲ್ಪ ಗಟ್ಟಿಗೊಂಡಮೇಲೆ ಕಾರ್ಯ ನಿಧಾನವಾಗದಿರುವುದು ನಮ್ಮ ಸಂಸ್ಥೆಯ ವೈಶಿಷ್ಟ್ಯ. 1977ರ ಸೆಪ್ಟೆಂಬರ್ ಮೊದಲ ವಾರದಲ್ಲಿ ಸಂಕಲ್ಪ; ಅಕ್ಟೋಬರ್ ಎರಡರಂದು ಜನ್ಮ. ಗಾಂಧೀಜಯಂತಿಯಂದು ಮೈದುಂಬಿಕೊಂಡು ಜನ್ಮಿಸಿ ಕುಲುಕುಲು ನಕ್ಕಿತು (ಉಳಿದ ಮಕ್ಕಳಂತೆ ಅಳಲಿಲ್ಲ), ಜನತೆಯ ಕಂದ ಕಲ್ಯಾಣ ಕಿರಣ. ಬಸವ ಮಂಟಪದಲ್ಲಿ 1977ರ ಗಾಂಧೀಜಯಂತಿಯಂದು ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳ ಸನ್ನಿಧಿಯಲ್ಲಿ ಶರಣ ಸಾ. ಸಿ. ಮರುಳಯ್ಯ ಬಿಡುಗಡೆ ಮಾಡಿ 'ಲಾಲಿ' ಹಾಡಿದರು. ಹನ್ನೆರಡು ತಿಂಗಳು ಕಳೆದ ಈ ಮಗು ಎರಡನೆ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿದ, ಜನಪ್ರಿಯವಾಗಿದೆ. ಅದರ ಗೆಜ್ಜೆಯ ಉಲಿ ಬಹಳ ಮೋದಕವಂತೆ, ಅಳುವು ಇಂಪಂತೆ, ನಗುವು ಸ್ಫೂರ್ತಿದಾಯಕವಂತೆ! ಇದು ಓದುಗರ ಅಭಿಮಾನದ ಪ್ರತೀಕ. ಮನೆಗೆ ಬರುವುದು ತಡವಾದರೆ ಓದುಗರಿಗೆ ಕಳವಳ-ಕಾತರ. ಲೇಬರ್ ವಾರ್ಡಿನಲ್ಲಿ ಪತ್ನಿ ಹೆರುವ ಪ್ರಯತ್ನದಲ್ಲಿದ್ದಾಗ ಪ್ರೀತಿಪಾತ್ರ ಗಂಡ ಹೊರಗೆ ಶತಪಥ ತಿರುಗುತ್ತ, ಬಾಗಿಲು ತೆರೆದು ಬರುವ ನರ್ಸಿಗಾಗಿ ಕಾಯುವಂತೆ, ಆಗ ಅವಳೇ ಶುಭವಾಹಿನಿಯಾದಂತೆ, ಪ್ರತಿ ತಿಂಗಳೂ ಓದುಗರು ಮನೆಬಾಗಿಲಲ್ಲಿ ಕಾಯ್ವರಂತೆ! ಯಾರಿಗಾಗಿ? ಕಾಕಿ ಚೀಲದ ಹೊಟ್ಟೆಯಲ್ಲಿ ಅಡಗಿಸಿಕೊಂಡು ಕಲ್ಯಾಣ ಕಿರಣ ತರುವ ಅಂಚೆ ಪೇದೆಗಾಗಿ. ಗೇಟು ತೆರೆದರೆ, ಪೋಸ್ಟ್‌ಮನ್ ಬಂದರೆ ಎಲ್ಲಿಲ್ಲದ ಸಂಭ್ರಮ! ಎಲ್ಲ ಕೆಲಸ ಬದಿಗೊತ್ತಿ, ಊಟನಿದ್ರೆ ಹತ್ತಿಕ್ಕಿ ಓದುವ ಆತುರ; ತೀವ್ರವಾಗಿ ಮುಗಿದಾಗ, ಮುಗಿಯಿತೇ? ಎಂಬ ಬೇಸರ. ಅಂತೂ ಇಂಥ ಎಲ್ಲ ಭಾವನೆಗಳನ್ನು ಬರೆದು ತಿಳಿಸುವ ಅಭಿಮಾನಿ ಬಳಗಕ್ಕೆ ನಮ್ಮ ಹೃತ್ಪೂರ್ವಕ ಶುಭ ಹಾರೈಕೆ.

ಚಂದಾದಾರರೆಲ್ಲ ಓದುತ್ತಾರೆ. ಅವರ ನೆರೆಯವರೂ ಓದುತ್ತಾರೆ. (ಕೆಲವೊಮ್ಮೆ ಪೋಸ್ಟ್‌ಮನ್ನರೂ ಚಂದಾದಾರರಿಗೆ ಖೋತಾ ಮಾಡಿ, ತಾವೇ ಓದುತ್ತಾರೆ) ಎಂಬುದು ಹೆಮ್ಮೆಯ ವಿಷಯ. ಕೆಲವೊಮ್ಮೆ ಆಧ್ಯತೆಗೆ- ಅಭಿಮಾನಕ್ಕೆ ಬಿದ್ದು, ಅಥವಾ "ಪಾಪ, ಗುರುಗಳು ನಡೆಸುವ ಪತ್ರಿಕೆ", ಎಂಬ ಮರುಕದಿಂದ ಪತ್ರಿಕೆ ಕೊಂಡೂ, ಓದದಿದ್ದರೆ ಅದಕ್ಕಿಂತ ಹೆಚ್ಚಿನ ಮಾನಸಿಕ ಆಘಾತ ಬೇರೊಂದಿರದು. ಏಕೆಂದರೆ ವಿಚಾರವಂತ ಲೇಖಕ-ಪ್ರಕಾಶಕರಿಗೆ ಓದುಗರ ಅನುಕಂಪಕ್ಕಿಂತ ಅಭಿಮಾನ-ಆದರ ಬೇಕು. ದಾನಕ್ಕಿಂತ ನೆರವು ಬೇಕು, ಹೊಗಳಿಕೆಗಿಂತ ವೈಚಾರಿಕತೆ ಬೇಕು. ಅವನನ್ನು ಅರಿತುಕೊಂಡು 'ಹೆಗಲು ಕೊಡುವ' ಓದುಗರು ಬೇಕು. ಸಹಚಿಂತನೆಯಲ್ಲಿ ಪಾಲುಗಾರರಾಗುವ ಸಹೃದಯರು ಬೇಕು. ಸರ್ಕಾರ, ಸಂಘ-ಸಂಸ್ಥೆಗಳ ಯಾವುದೇ ಪ್ರಶಸ್ತಿಗಿಂತ ಓದುಗ ಅಭಿಮಾನಿಯೊಬ್ಬನ ಸಹೃದಯದಾಳದಿಂದ ಬರುವ ಪ್ರಾಮಾಣಿಕ ಅಭಿಪ್ರಾಯ ಪ್ರೋತ್ಸಾಹಕಾರಿ. ಬಹುಮಾನ-ಪ್ರಶಸ್ತಿಗಳ ಹಿಂದಿರುವ ರಾಜಕೀಯದ ಕಹಿಯ ತೀವ್ರತೆ ಕಡಿಮೆ ಮಾಡುವ ಅಮೃತಧಾರೆ. ಅಂತೂ ಕೊಂಡವರೆಲ್ಲ ಓದುತ್ತಾರೆ ಈ ಕಲ್ಯಾಣ ಕಿರಣವನ್ನು: ಅಷ್ಟೇ ಸಾಕು ನಮಗೆ.

ನಾನೇನೂ ಪ್ರಭಾವೀ ಪತ್ರಿಕೋದ್ಯಮಿಯಲ್ಲ: ಪತ್ರಿಕೋದ್ಯಮ ಪದವಿಯನ್ನೂ ಪಡೆಯಲಿಲ್ಲ. ಅದರಲ್ಲಿ ಆಳವಾದ ಅನುಭವವೂ ಇಲ್ಲ. ಕಾಯ್ದ ಹಾಲು ಉಕ್ಕಲೇಬೇಕು, ಕೊಡ ತುಂಬಿದ ಬಳಿಕ ನೀರು ಚೆಲ್ಲಲೇಬೇಕು. ಇದು ಅನಿವಾರ್ಯ. ಹೀಗೆ ಉಕ್ಕುವ ಭಾವನೆಗಳಿಗೆ ಒಂದು ಮಾಧ್ಯಮವಾಗಿ ಜನಿಸ್ಸಿತು ಕಲ್ಯಾಣ ಕಿರಣ. ಆದರೂ ಗಳಿಸಿಕೊಂಡ ಅನುಭವದಲ್ಲೇ ಕೆಲವು ವಿಚಾರ ನಿಮ್ಮ ಮುಂದಿಡುವ ಆಸೆ.

ಪತ್ರಿಕೋದ್ಯಮ ಬಹಳ ಪ್ರಭಾವೀ ಮಾಧ್ಯಮ. ಜಿ. ಸಿ. ಲೀಷನ್ ಬರ್ಗ್ ಹೇಳುವರು: "The world has been changed more by lead than by gold; and more by the lead in the printer's fount than by that of bullets". ಹಣಕ್ಕಿಂತಲೂ ಪರಿಣಾಮಕಾರಿ ಪ್ರಭಾವೀ ಮಾಧ್ಯಮ ಲೆಕ್ಕಣಿಕೆ: ಬಂದೂಕಿನ ಗುಂಡುಗಳಿಗಿಂತಲೂ ಮುದ್ರಕನ ಸೀಸೆಯು ಜಗತ್ತನ್ನು ಪರಿವರ್ತಿಸಬಲ್ಲುದು. ಬೃಹದಾಕಾರದ ಆನೆಯನ್ನು ನಿಗ್ರಹಿಸುವ, ನಿಯಂತ್ರಿಸುವ, ಸಾಧುಗೊಳಿಸುವ ಸಾಮರ್ಥ್ಯ ಮಾವಟಿಗನು ಹಿಡಿದ ಅಂಕುಶದಲ್ಲಿರುವಂತೆ; ವ್ಯಕ್ತಿ-ಸಮಾಜ-ರಾಷ್ಟ್ರಗಳನ್ನು ಮಣಿಸುವ, ಪರಿವರ್ತಿಸುವ ಸಾಮರ್ಥ್ಯ ಲೇಖಕನ ಲೆಕ್ಕಣಿಕೆಯಲ್ಲಿದೆ. ಎಂತಹ ಜವಾಬ್ದಾರಿ ಸ್ಥಾನದಲ್ಲಿರುತ್ತಾನೆ ಪತ್ರಿಕೋದ್ಯಮಿ ಎಂಬುದನ್ನು ಈ ಉದಾಹರಣೆಯಿಂದ ತಿಳಿಯಬಹುದು. ಅವನು ಜನರನ್ನು ನಗಿಸಬಲ್ಲ, ಅಳಿಸಲೂ ಬಲ್ಲ: ಸಂದೇಹದಲ್ಲಿ ತೊಳಲಿಸಬಲ್ಲ, ಸಂದೇಹ ಕಳೆದು ಮನಃಶಾಂತಿ ನೀಡಬಲ್ಲ. ವಿಕೃತ ಮಾಡಬಲ್ಲ: ಸುಸಂಸ್ಕೃತಿ ಬೆಳೆಸಲೂ ಬಲ್ಲ, ಮೌಲ್ಯಗಳಿಂದ ಅಲಂಕರಿಸಲೂ ಬಲ್ಲ, ವಿಕಾರಿಯನ್ನು ಮಾಡಬಲ್ಲ, ವಿವೇಕಿಯನ್ನೂ ನೀಡಬಲ್ಲ; ರಾಷ್ಟ್ರಚಿಂತಕರನ್ನು ನಿರ್ಮಿಸಬಲ್ಲ, ರಾಷ್ಟ್ರಹಂತಕರನ್ನು ಉದ್ರೇಕಗೊಳಿಸಬಲ್ಲ. ಒಟ್ಟು ಏನೆಲ್ಲ ಮಾಡಬಲ್ಲ: ಬುದ್ಧಿಜೀವಿಗಳ ವಲಯದ ಸಾರ್ವಭೌಮ ಪತ್ರಿಕೋದ್ಯಮಿ.

ಅವನ ಲೇಖನಿಯೇ ರಾಜದಂಡ; ಆದರೆ ಹೊಣೆಯರಿಯದೇ ಬೀಸಿದರೆ ಅವನೇ ಮಹಾಭಂಡ.

ಆಸಕ್ತಿ ಇದ್ದವರು, ಉದ್ದೇಶ ಹೊತ್ತವರು, ಆದರ್ಶ ಅಳವಟ್ಟವರು, ಪತ್ರಿಕೋದ್ಯಮದಲ್ಲಿ ವೈಯಕ್ತಿಕ ಪ್ರೀತಿ ಇದ್ದವರು ಮಾತ್ರ ಪತ್ರಿಕೆ ನಡೆಸುತ್ತಿದ್ದ ಕಾಲವೊಂದಿತ್ತು. ಈಗಲೂ ಅಂಥವರು ಇಲ್ಲವೆಂದಲ್ಲ. ಆದರೆ ಬಹುಪಾಲು ಪತ್ರಿಕೆಗಳು ಅಂದಂದೇ ಹುಟ್ಟುತ್ತವೆ, ಅಂದಂದೇ ಸಾಯುತ್ತವೆ. ಒಂದು ಜಾಹಿರಾತೋ, ಒಂದು ಬೆದರಿಕೆಯ ಪತ್ರವೋ ಅವುಗಳ ಬಂಡವಾಳ. ಸಣ್ಣ ಸಣ್ಣ ಪತ್ರಿಕೆ ಕೈಲಿ ಹಿಡಿದುಕೊಂಡು ಅದರ ಸಂಪಾದಕರೆಂದು ಹಣ ಕೇಳುವ, ಕೊಡದಿದ್ದರೆ ಅಶ್ಲೀಲ ಲೇಖನ ಪ್ರಕಟಿಸುವ ಬೆದರಿಕೆ ಹಾಕುವ ಜನರ ಸಂಖ್ಯಾಬಾಹುಳ್ಯ ಮಿತಿ ಮೀರುತ್ತಿದೆ. ಜಾಹಿರಾತಿಗಾಗಿಯೇ ಜನ್ಮಿಸುವ ದಿನ ಪತ್ರಿಕೆಗಳುಂಟು. ಅವು ತಮಗೊಂದು 'ಬೇಂಟೆ' ದೊರಕಿ, ಆಹಾರ ಸಿಕ್ಕ ದಿನ ಓಡಾಡುತ್ತವೆ. ಮತ್ತೆ ನೆಲ ಹಿಡಿದು ಮಲಗುತ್ತವೆ. ಕೆಲವು ಹೆಸರುಗಳಂತೂ ಕರ್ಣ ಭೀಕರ. ಅಂಥ ಹೆಸರಿರಿಸಿಕೊಳ್ಳುವುದರಲ್ಲೇ ಅಂಥವರಿಗೆ ಹೆಮ್ಮೆ.

ಪೀತ ಪತ್ರಿಕೆಗಳ ಗಲಾಟೆಯಂತೂ ಅಸದಳ. ಬಾಯಿಗೆ ಬಂದಂತೆ ಬರೆದು, ಕಡೆಯಲ್ಲಿ ಒಂದು ಸೂಚನೆ ಸಹ ಕೊಟ್ಟಿರುವರು ಬೈಸಿಕೊಂಡವರಿಗೆ. ಮುಂದಿನ ವಾರದೊಳಗೆ ಇನ್ನೂ ಹೆಚ್ಚಿನ ವಿಶೇಷವೆಂದು. ಅಷ್ಟರಲ್ಲಿ ಬೈಸಿಕೊಂಡವನು ಕರೆದು ಒಂದಿಷ್ಟು ಮಾಮೂಲಿ ಕೊಟ್ಟುಬಿಟ್ಟರೆ, ಮುಂದಿನ ವಾರದಲ್ಲಿ ಅವನು ಚರಿತ್ರಾರ್ಹನಾಗುವಂತೆ ಹೊಗಳಿಸಿಕೊಳ್ಳಬಲ್ಲ. ಕೆಲವರಿಗೊಂದು ಹೆಮ್ಮೆ: ಇವರನ್ನು ಬುದ್ಧಿವಂತ ಮೂರ್ಖರೆಂದೂ ಅನ್ನಬಹುದು: "ನಾನು ಬೈದು ಬರೆಯುವದನ್ನೆಲ್ಲ ಜನ ನಂಬಿ, ಬೈಸಿಕೊಂಡವರನ್ನು ಅಗೌರವಿಸುವುದು" ಎಂಬ ನಂಬಿಗೆ. ಇದು ಶುದ್ಧ ತಪ್ಪುತಿಳುವಳಿಕೆ. ದಾರಿಯಲ್ಲಿ ಸಭ್ಯ ಮನುಷ್ಯನು ತನ್ನ ಪಾಡಿಗೆ ತಾನು ಹೋಗುವಾಗ ಒಂದು ನಾಯಿ ಅಸಹ್ಯವಾಗಿ ಚೀರಾಡುತ್ತಿದ್ದರೆ, ಜನ ನಿಂತು ನಗುವರು. ಅದರರ್ಥ "ನಾಯಿ ಬೊಗಳಿದ ಕಾರಣ ಅವನು ಕಳ್ಳನೇ ಇರಬೇಕೆಂದು" ನಿರ್ಣಯಿಸಿ ಅಲ್ಲ; ನಾಯಿಯ ವ್ಯರ್ಥದಾಟಕ್ಕೆ ಮುಸಿ ಮುಸಿ ನಗುವರು. ಇನ್ನು ಕೆಲವರು 'ಈ ಬೊಗುಳುವ ನಾಯಿ ವಿನಾಕಾರಣ ಚೀರಿ ಚೀರಿ ಓಣಿಯ ಶಾಂತಿಯನ್ನು ಕೆಡಿಸುವುದು' ಎಂದು ಕಲ್ಲನ್ನು ಬೀಸಿ ಓಡಿಸದಿರರು. ದೂರ ಒಯ್ಯಲು ಕಾರ್ಪೋರೇಷನ್‌ನವರನ್ನೂ ಕೇಳುವರು. ಕೆಲವರು ಬೈದು, ನಿಂದಿಸಿ ಹಣ ಕೇಳುವ ಬ್ಲಾಕ್ ಮೆಯಿಲ್ ರೂಢಿಸಿಕೊಂಡಿದ್ದರೆ, ಇನ್ನು ಕೆಲವರು ಅತ್ಯಂತ ಸಭ್ಯರೂಪದಲ್ಲಿ ಸಾಗುವರು. ಅದೆಂದರೆ ಹೊಗಳಿ, ಅವನ ಭಾವಚಿತ್ರ ಮುದ್ರಿಸಿ, ಪ್ರತಿಫಲಕ್ಕಾಗಿ ಕೈಯೊಡ್ಡುವರು. ಬರೆಸಿಕೊಳ್ಳುವಷ್ಟು ವ್ಯಕ್ತಿತ್ವ ಅವನದಲ್ಲದಿದ್ದರೂ ಹಣದಿಂದಲೇ ಅವನು ಇಂದ್ರ-ಚಂದ್ರ

ಮಾರ್ತಾಂಡ. ಈ ಎಲ್ಲವೂ ತತ್ತ್ವನಿಷ್ಠ ದಾರಿಗಳಲ್ಲ. ಅಡ್ಡದಾರಿಗಳಿಂದ ಜನಪ್ರಿಯತೆ ಬಯಸದೆ, ಓದುಗರನ್ನು ವಾಮ ಮಾರ್ಗದಲ್ಲಿ ಜಾಸ್ತಿ ಮಾಡಿಕೊಳ್ಳದೆ, ಪತ್ರಿಕಾರಂಗದಲ್ಲಿ ಹಣ, ಖ್ಯಾತಿ, ಜನಪ್ರಿಯತೆ ಗಳಿಸಿಕೊಳ್ಳಲು ರಾಜಮಾರ್ಗದಿಂದಲೇ ಸಾಧ್ಯವಿದೆ. ಪ್ರೌಢ, ವಸ್ತುನಿಷ್ಠ, ವೈಚಾರಿಕ ಲೇಖನಗಳಿಂದ ಅತ್ಯುತ್ತಮ ಚಿತ್ರವನ್ನು (Image) ಲೇಖಕನು ಓದುಗರ ಹೃದಯದಲ್ಲಿ ಮೂಡಿಸಿಕೊಳ್ಳಬಲ್ಲ.

ಪತ್ರಿಕಾಕರ್ತನಿಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕು, ತನ್ನ ವಿಚಾರಗಳ ಅಭಿವ್ಯಕ್ತಿಗೆ. ಆದರೆ ಅದು ಉನ್ಮತ್ತ ಸ್ವೇಚ್ಛೆಗಿಳಿಯಬಾರದು. ಒಂದೆಡೆ ವಾಲ್ಟೇರ್ ಹೇಳುತ್ತಾನೆ: "I disapprove of what you say. But I will defend to death your right to say it." ಕತ್ತಿ ಬೀಸುವವನು ಎಷ್ಟು ಎಚ್ಚರವಿರಬೇಕೋ ಅದಕ್ಕಿಂತಲೂ ಎಚ್ಚರವಿರಬೇಕು ಲೇಖನಿ ಹರಿಯಬಿಡುವವನು. ಕೆಲವೊಮ್ಮೆ ಮುಗ್ಧರ ಚಂಡಾಡಬಹುದು, ಉನ್ನತ ವ್ಯಕ್ತಿತ್ವದವರ ಬಲಿ ಕೇಳಬಹುದು. ಎಚ್ಚರ ತಪ್ಪಿ ಬೀಸುವ ಈ ಕತ್ತಿ. "ನಿಮಿಷದ ಉದಾಸೀನ ಕೆಡಿಸಿತ್ತು." ಅಲ್ಲವೆ ?

"ಕೊಡನ ತುಂಬಿದ ಹಾಲ ಕೆಡಹಿ ಉಡುಗಲೆನ್ನಳವೆ ? ಕೂಡಲ ಸಂಗಮದೇವಾ" ಎಂದು ವಿಶ್ವಗುರು ಬಸವಣ್ಣನವರು ಹೇಳುವಂತೆ ಅರಿತೋ ಅರಿಯದೆಯೋ ಮಾಡಿದ ತಪ್ಪು ಯಾರನ್ನೋ ತಿನ್ನಬಹುದು. ವ್ಯಕ್ತಿಗತವಾಗಿ, ಸಾರ್ವತ್ರಿಕವಾಗಿ ಹಾನಿ ಸಂಭವಿಸಬಹುದು. ಯಾರೋ ದೊಡ್ಡ ಮನುಷ್ಯರೋರ್ವರು ದರ್ಶನಕ್ಕೆ ಬಂದಿದ್ದರು. "ಅವರ ಪರಿಚಯ ನಿಮಗುಂಟೇನ್ರಿ ?" ಎಂದು ಯಾರೋ ಒಬ್ಬರ ಬಗ್ಗೆ ಪ್ರಶ್ನಿಸಿದಾಗ, "ಪರಿಚಿತ ಎಂದು ಹೇಳಿಕೊಳ್ಳಲೂ ನಾಚಿಕೆ ಎನಿಸುತ್ತೆ. ಅವನೊಬ್ಬ ಪ್ರತಿಭಾವಂತ, ಸ್ವತಂತ್ರ ವಿಚಾರವಂತ ಎಂದುಕೊಂಡಿದ್ದೆವು. ನಾಲಿಗೆಯ ಮೂಲಕ ಪಚನಾಂಗದ ಪರಿಸ್ಥಿತಿ ಗೊತ್ತಾಗುವಂತೆ, ಲೇಖನಿಯ ಮೂಲಕ ಮನುಷ್ಯನ ಮಟ್ಟವೂ ತಿಳಿಯುತ್ತೆ. ಇಂಥಾ ಕೀಳ್ಮಟ್ಟದ ವ್ಯಕ್ತಿ ಎಂದು ತಿಳಿದುದು ಈಗಲೇ" ಅವರ ದನಿಯಲ್ಲಿ ತಿರಸ್ಕಾರ ತುಂಬಿ ತುಳುಕಿತ್ತು. ತನ್ನ ಪರಿಚಿತ ಪತ್ರಿಕೋದ್ಯಮಿಯ Image ಚೂರುಚೂರಾಗಿತ್ತು ಅವರ ಹೃದಯದಲ್ಲಿ. ಇದು ವ್ಯಕ್ತಿಗತ ಹಾನಿಯಲ್ಲವೆ ?

ಮತ್ತೊಮ್ಮೆ ನಡೆದ ಪ್ರಸಂಗ: ಓರ್ವ ಅಪೂರ್ವ ವಾಗ್ಮಿಗಳು, ಪ್ರತಿಭಾವಂತ ಸಾಹಿತಿಗಳು ಬಂದಾಗ, 'ಆ ಪತ್ರಿಕೆ ಓದಿದಿರಾ ? ಏನೋ ಒಂದು ಉತ್ತಮ ಲೇಖನವಿತ್ತು ...' ಎಂದು ಕೇಳಿದಾಗ, ನುಡಿದರು: 'ಕೆಸರಿನ ಗುಂಡಿಯ ಪಕ್ಕ ನಿಂತು ವಾಸನೆ ಆಸ್ವಾದಿಸಲು ಬುದ್ಧಿವಂತರು ಯಾರೂ ಇಚ್ಛಿಸರಷ್ಟೆ. ಎಂದು ಹೊಲಸು ಲೇಖನಗಳನ್ನು ಬರೆಯಲು ಆ ಪತ್ರಿಕೆ ಆರಂಭಿಸಿತೋ, ಅಲ್ಲಿಯವರೆಗೆ ಸತತ ಓದುಗನಾಗಿದ್ದ ನಾನು ಅಂದಿನಿಂದ ಅದಕ್ಕೆ ಬೆರಳು ತಗುಲಿಸಿಲ್ಲ. ಅದು ಅಸ್ಪೃಶ್ಯವಾಗಿದೆ ನನಗೆ ...' ಕೆಲವು

ಪತ್ರಿಕೋದ್ಯಮಿಗಳು 'ಅನ್ಯರನ್ನು ಬೈದರೆ ಓದುಗರ ಕುತೂಹಲ ವರ್ಧಿಸಿ, ಪತ್ರಿಕೆ ಜಾಸ್ತಿ ಮಾರಾಟವಾಗುವುವು' ಎಂದು ನಂಬಿರುವರೋ, ಆ ನಂಬಿಗೆಗೆ ದೊಡ್ಡ ಏಟೇ ಬೀಳಬಹುದು. ಈ ದಿಶೆಯಲ್ಲಿ ಪತ್ರಿಕೋದ್ಯಮಿ ಒಂದನ್ನು ತಿಳಿಯಬೇಕು : ಇನ್ನೊಬ್ಬರು ಬಿಡಿಸಿದ ಚಿತ್ರವನ್ನು ಗೀಚುವದರಿಂದ ಒಬ್ಬನು ಶ್ರೇಷ್ಠ ಚಿತ್ರಕಾರನಾಗನು. ತನ್ನ ಸ್ವಯಂ ಪ್ರತಿಭೆಯಿಂದ ಚಿತ್ರ ಬರೆದಾಗ ಶ್ರೇಷ್ಠ ಚಿತ್ರಕಾರನಾಗುವನು. ಓರ್ವ ಗಾಯಕ ಮಧುರ ಕಂಠದಲ್ಲಿ ಸಂಗೀತ ಹಾಡುತ್ತಿರುವಾಗ ವೈಯಕ್ತಿಕ ದ್ವೇಷದಿಂದ ಇನ್ನೋರ್ವನು ದೂರ ನಿಂತು, ದ್ವೇಷದಿಂದ ಕ್ಯಾಕರಿಸಿ, ಕೆಮ್ಮಿದರೆ ಇವನು ಗಾಯಕನಾಗನು. ಸಾಧನೆಗೈದು ತಾನೂ ಹಾಡಬೇಕು.

ಪತ್ರಿಕೋದ್ಯಮಿಯ ತಪ್ಪು ನಡೆ ಅವನ ಜೀವನಕ್ಕೂ ಮಾರಕವಾಗಬಹುದು, ಸಮಾಜ ಜೀವನಕ್ಕೂ ಸಹ. ಹೇಗೆಂದರೆ ಅರಿತೋ-ಅರಿಯದೆಯೋ ಅವನು ಟೀಕಿಸಿದಾಗ, ಟೀಕಿಸಿಕೊಂಡವರು ನಿಜಕ್ಕೂ ಭವ್ಯ ವ್ಯಕ್ತಿತ್ವದವರಾಗಿದ್ದರೆ, ಅವರ ಬದುಕು ಇತಿಹಾಸದಲ್ಲಿ ಅಚ್ಚಳಿಯದೆ ಉಳಿದರೆ, ಆಗ ಈ ನಿಂದಕನ ಹೆಸರೂ ಉಳಿಯುವುದು ಕೀಟಲೆ ಮಾಡಿದವನೆಂದು; ಸುವರ್ಣಾಕ್ಷರದಲ್ಲಲ್ಲ, ಕಪ್ಪು ಅಕ್ಷರಗಳಲ್ಲಿ. ಹೀಗಾಗಿ ಎಷ್ಟೋ ಪ್ರತಿಭಾವಂತರು ಮುಳ್ಳು ಬೇಲಿಯ ಮಧ್ಯೆ ಬಿಟ್ಟ ಹಣ್ಣಾಗಿ ನಿಷ್ಪ್ರಯೋಜಕರಾಗುವರು. ಪತ್ರಿಕೋದ್ಯಮಿ ತನ್ನ ಉದ್ಯೋಗದಲ್ಲಿ ರಾಷ್ಟ್ರಜೀವನ ರೂಪಿಸುವನಷ್ಟೇ ಅಲ್ಲ, ಅದನ್ನು ರೂಪಿಸುತ್ತ ತನ್ನ ಜೀವನವನ್ನೂ ರೂಪಿಸಿಕೊಳ್ಳುವನು.


ಕೆಲವು ಸಲ ವಿಧ್ವಂಸಕ ನಿಂದೆಯು ಸಾಮಾಜಿಕವಾಗಿಯೂ ಹಾನಿಯುಂಟು ಮಾಡುವುದು. ಅಸಾಮಾನ್ಯವಾಗಿ ಜನಸಂಘಟನೆ. ಜನಜಾಗೃತಿ ಮಾಡುವ ಕೆಲವು ಸಮಾಜ ನೇತಾರರಿರುವರು. ಅವರ ಬಾಳಿನಲ್ಲಿ ಸಮಾಜದ ಶ್ರೇಯವಿರುತ್ತದೆ. ಉದಾಹರಣೆಗೆ ವೈಮಾನಿಕ. ವಿಮಾನ ನಡೆಸುತ್ತಿರುವಾಗ ವೈಮಾನಿಕ ಎಲ್ಲರವನು. ಅವನ ಆಶ್ರಯದಲ್ಲಿ ನೂರಾರು ಮಂದಿ ಪಯಣಿಸುವಾಗ ಓರ್ವನು ಅಜ್ಞಾನದಿಂದಲೋ, ದುರುದ್ದೇಶದಿಂದಲೋ, ವೈಯಕ್ತಿಕ ದ್ವೇಷದಿಂದಲೋ, ಪೈಲಟನಿಗೆ ಗುಂಡು ಹಾಕಿ ಕೊಂದರೆ, ಅವನು ಸತ್ತಾಗ ವಿಮಾನ ಉಳಿದೀತೆ ? ಅದೇ ರೀತಿ ತಮ್ಮ ವೈಯಕ್ತಿಕ ದ್ವೇಷವನ್ನು ಸಮಾಜ ನೇತಾರರ ಮೇಲೆ ತೀರಿಸಿಕೊಳ್ಳಲು ಅವರ ತೇಜೋವಧೆಗೆ ತೊಡಗಿದರೆ ಅವನ ಬೆನ್ನಹಿಂದಿರುವ ಬೃಹತ್ ಸಮಾಜಕ್ಕೇ ಹಾನಿ ಎಂಬುದನ್ನು ಪತ್ರಿಕೋದ್ಯಮಿ ಅರಿಯಬೇಕು.

ಮಾಡುವ ಕೆಟ್ಟ ಕೆಲಸ ಸುಲಭವಾಗಿ ಮಾಡಬಹುದು. ಅದನ್ನು ನಿವಾರಿಸುವುದು ಅಥವಾ ಸರಿಪಡಿಸುವುದು ಬಹಳ ಕಷ್ಟಕರ. ಗಾಯ ಮಾಡಿಕೊಳ್ಳೋದು ಸುಲಭ. ವಾಸಿ ಮಾಡಿಕೊಳ್ಳೋದು ಕಷ್ಟ. ರೋಗ ಬರಿಸಿಕೊಳ್ಳಲು ಖರ್ಚಿಲ್ಲ,

ರೋಗ ವಾಸಿ ಮಾಡಿಕೊಳ್ಳಲು ಸಹಸ್ರಾರು ರೂಪಾಯಿ ವೆಚ್ಚ. ಒಬ್ಬ ತಂದೆಗೆ ಒಬ್ಬ ಮಗನಿದ್ದ. ಅವನು ತುಂಬಾ ದುಷ್ಟ, ತುಂಟ, ಕುಹುಕ, ದುರಾಚಾರಿ. ತಂದೆಗೆ ಮನೋವ್ಯಥೆಯಾಯಿತು. ಒಂದು ದಿನ ಪಡಸಾಲೆಯ ಸುಂದರ ಗೋಡೆಯನ್ನು ನೋಡಿ ಅವನಿಗೆ ಒಂದು ಆಲೋಚನೆ ಬಂತು. ಅಂದಿನಿಂದ ಯಾರಾದರೂ ಬಂದು 'ನಿನ್ನ ಮಗ ಇಂಥಾ ಕೆಟ್ಟಕೆಲಸ ಮಾಡಿದ' ಎಂದು ಹೇಳುತ್ತಿದ್ದಂತೆಯೇ ಒಂದು ಮೊಳೆಯನ್ನು ಗೋಡೆಗೆ ಸುತ್ತಿಗೆಯಿಂದ ಹೊಡೆಯುತ್ತಿದ್ದ. ಕೆಲವಾರು ತಿಂಗಳು ಕಳೆದವು. ಗೋಡೆ ತುಂಬಾ ಹೊಡೆಯಲ್ಪಟ್ಟ ಮೊಳೆಗಳನ್ನು ನೋಡಿ ಮಗ ಆಶ್ಚರ್ಯದಿಂದ ಕೇಳಿದ: "ಅಪ್ಪಾ, ಇವೆಲ್ಲ ಏನು ?" 'ನಿನ್ನ ಸಾಹಸ ಕಾರ್ಯಗಳ ಗುರುತು' ತಂದೆ ವಿವರ ನೀಡಿದ. ಮಗನಿಗೆ ಪಶ್ಚಾತ್ತಾಪವಾಗಿ, ಅಂದಿನಿಂದ ಒಳ್ಳೆಯವನಾದ. ಅಂದಿನಿಂದ ಒಳ್ಳೆಯ ಕೆಲಸಗಳನ್ನು ಮಾಡಲು ಆರಂಭಿಸಿದ. ಒಬ್ಬೊಬ್ಬರು ಬಂದು ಮಗನ ಕಾರ್ಯದ ಬಗ್ಗೆ ಪ್ರಶಂಸಿಸಿದಾಗ ಆ ತಂದೆ ಒಂದೊಂದು ಮೊಳೆಯನ್ನು ಕೀಳತೊಡಗಿದ. ಒಂದು ದಿನ ಎಲ್ಲಾ ಮೊಳೆಗಳೂ ಕೀಳಲ್ಪಟ್ಟವು. ಆಗ ತಂದೆ ಮಗನನ್ನು ಕರೆದು ಹೆಮ್ಮೆಯಿಂದ 'ಮಗನೇ, ಎಲ್ಲಾ ಮೊಳೆಗಳೂ ಹೋದವು' ಎಂದ. ಆದರೆ ಮಗನು ವಿಷಾದದಿಂದ ನುಡಿದ : 'ಅಪ್ಪಾ, ಮೊಳೆಗಳನ್ನೇನೋ ಕಿತ್ತೆ, ಆದರೆ ಅವರ ಕಲೆಗಳು ಗೋಡೆಯ ಮೇಲೆ ಹಾಗೇ ಉಳಿದವು. ಹಾಗೆಯೇ ನಾನು ಹಿಂದೆ ಮಾಡಿದ ತಪ್ಪಿಗೆ ಬದಲಾಗಿ ಒಳ್ಳೆಯದನ್ನು ಮಾಡಿದೆ. ಆದರೆ ನನ್ನ ತಪ್ಪಿನಿಂದಾಗಿ ಯಾರ್ಯಾರ ಬದುಕಿನಲ್ಲಿ ನೋವುಂಟು ಮಾಡಿದ್ದೆನೋ ಆ ಗಾಯಗಳು ಅವರ ಬದುಕಿನಲ್ಲಿ ಶಾಶ್ವತ ಪರಿಣಾಮ ಬೀರಿರುವವು' ಎಂದ. ಇದೇ ರೀತಿ, "ತಾನು ಮಾಡುವ ಕಾರ್ಯಗಳು, ಕಲ್ಪನೆಗಳು, ಬರೆಯುವ ವಿಚಾರಗಳು ಏನೇನನ್ನು ಮಾಡಬಲ್ಲವು, ತನಗೂ ಸಮಾಜಕ್ಕೂ ಹೇಗೆ ಪರಿಣಾಮ ಬೀರಬಲ್ಲವು ?" ಎಂಬ ಬಗ್ಗೆ ಪರಿಜ್ಞಾನವಿದ್ದು ಲೇಖಕ ಬರೆಯಬೇಕು. ಉದಾಸೀನದಿಂದಲೋ, ದುರುದ್ದೇಶದಿಂದಲೋ, ಕಲ್ಲಣ್ಣ-ಮಲ್ಲಣ್ಣ, ಗುದ್ದಣ್ಣ-ಪೆದ್ದಣ್ಣ ಏನೋ ಹೇಳಿದರು, ಅಂತ ಬರೆದರೆ ನಂತರದ ಇತಿಹಾಸ ಬೊಟ್ಟು ಮಾಡಿ ತೋರುವುದು ಕೊಂಗಣ್ಣ-ಮಂಗಣ್ಣ ಕಲ್ಲಣ್ಣರನ್ನಲ್ಲ ಜವಾಬ್ದಾರಿ ಸ್ಥಾನದಲ್ಲಿರುವವನನ್ನು. ಅಂತೆಯೇ ಪತ್ರಿಕೋದ್ಯಮಿಯು ಲೆಕ್ಕಣಿಕೆ ಕುಡಿದವನ ಹ್ಯಾಯಂತೆ ಅತ್ತಿತ್ತ ತೂರಾಡದೆ, ಓಲಾಡದೆ ಗೌರವಯುತವಾಗಿ ಹೆಜ್ಜೆ ಇಕ್ಕಬೇಕು : ವಿಧಾಯಕವಾಗಿ ಬರೆಯಬೇಕು. ರಾಷ್ಟ್ರನಿರ್ಮಾಣದಲ್ಲಿ ಧೀಮಂತ ಪಾತ್ರ ವಹಿಸಬೇಕು. ಸಮಾಜಕ್ಕೆ ವೈಚಾರಿಕ ದಿಗ್ದರ್ಶನ ಮಾಡಬೇಕು. ನಾಲ್ಕೇ ದಿನ ಬಾಳಿದರೂ, 'ಲಿಂಗ ಮೆಚ್ಚಿ ಅಹುದಹುದೆನ್ನುವಂತೆ' ಬಾಳಬೇಕು ; ವಿವೇಕಿಗಳು ಒಪ್ಪುವಂತೆ ಬಾಳಬೇಕು. ಆ ಧ್ಯೇಯದಲ್ಲಿಯೇ ಕಲ್ಯಾಣ ಕಿರಣ ನಡೆಯಲು ಅಭಿಮಾನಿಗಳು ಅದರ ಹುಟ್ಟುಹಬ್ಬದಂದು ಹರಸುವರೆಂದು ನಂಬುವೆ.

★

—ಮಾತೆ ಮಹಾದೇವಿ



—ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು

ಬಯಲು ಬಯಲನೆ ಬಿತ್ತಿ, ಬಯಲು ಬಯಲನೆ ಬೆಳೆದು
ಬಯಲು ಬಯಲಾಗಿ ಬಯಲಾಯಿತ್ತಯ್ಯಾ.
ಬಯಲ ಜೀವನ ಬಯಲ ಭಾವನೆ.
ಬಯಲು ಬಯಲಾಗಿ ಬಯಲಾಯಿತ್ತಯ್ಯಾ.
ನಿಮ್ಮ ಪೂಜಿಸಿದವರು ಮುನ್ನವೇ ಬಯಲಾದರು
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರ.

—ಆ.ಪ್ರ.ವ. ೬೩೯

ಪ್ರಭುದೇವರು ತಮ್ಮ ಈ ಬೆಡಗಿನ ಕ್ಲಿಷ್ಟ ವಚನದಲ್ಲಿ ಬಸವ ಧರ್ಮದ ಸಮಸ್ತ ಸಿದ್ಧಾಂತವನ್ನು ಮತ್ತು ಸಾಧನೆಯನ್ನು ಹೇಳುತ್ತಾರೆ. ಸೃಷ್ಟಿಯು ವಿಕಸನಗೊಂಡ ಪರಿಯನ್ನು ಮತ್ತು ಹಲವಾರು ಜೀವಾತ್ಮರುಗಳು ಮತ್ತೆ ತಮ್ಮ ಮೂಲದೊಡನೆ ಒಂದಾಗುವ ರಹಸ್ಯವನ್ನೂ ಪ್ರತಿಪಾದಿಸುತ್ತಾರೆ.

'ಬಯಲು' ಎಂದರೆ : 1) ಪರಬ್ರಹ್ಮ 2) ಬೃಹತ್ತಾದ ಪೊಳ್ಳು, ಅಂಬರ 3) ಸಾಮಾನ್ಯ ಅರ್ಥದಲ್ಲಿ ಮೈದಾನ 4) ಪರಿಪೂರ್ಣಸ್ಥಿತಿ 5) ಮುಕ್ತಿ ಹೀಗೆಲ್ಲ ರೂಢಿಯ ಅರ್ಥಗಳಿವೆ. ಇಲ್ಲಿ ಪ್ರಭುದೇವರು ಇಷ್ಟೇ ಅರ್ಥಗಳಲ್ಲಿ ಬಳಸಿಲ್ಲ. ಉದಾಹರಣೆಗೆ, ಬಸವಣ್ಣನವರು 'ವಚನದಲ್ಲಿ ನಾಮಾಮೃತ ತುಂಬಿ' ವಚನದಲ್ಲಿ 'ತುಂಬಿ' ಪದವನ್ನು ಅದೀಗ ಇರುವಂತೆ ಕ್ರಿಯಾಪದ ಮತ್ತು ನಾಮಪದವಾಗಿ ಬಳಸಿದ್ದಾರೆ. ಆದ್ದರಿಂದ ಅರ್ಥೈಸುವುದು ಕಷ್ಟವಾಗದು. ಮೇಲ್ಕಂಡ ವಚನದಲ್ಲಿ ಬಹುವಿಧ ಅರ್ಥ ವ್ಯಾಪ್ತಿಯೊಡನೆ ಬಳಸಿದ್ದಾರೆ. ಕೆಲವರದ್ದು ಒಂದು ಸ್ವಭಾವವಿರುತ್ತದೆ. ಅವರು

ಮಾತನಾಡುವಾಗ ಅದೂ, ಇದೂ ಎಂದೇ ಮುಗಿಸುತ್ತಾರೆ. "ನಾನು ಅಲ್ಲಿಗೆ ಹೋಗಿದ್ದೆ. ಅವರು ಮತ್ತೆ ಅದೇ ಹೇಳಿದರು. ಅದನ್ನು ಪೂರೈಸಿಬಿಟ್ಟರೆ ಇದು ತಾನೇ ಸರಿಯಾಗುತ್ತೆ". ಯಾರಿಗೆ ಸಂದರ್ಭ ಗೊತ್ತಿರುವುದೋ. ಆ context ಹಿನ್ನೆಲೆಯಲ್ಲಿ ಇವರ ಅದೂ, ಇದೂ ಅರ್ಥಮಾಡಲು ಸಾಧ್ಯ. ಅದೇ ರೀತಿ ಶಬ್ದಗಳೊಡನೆ ಸರಸವಾಡುವ ಕೆಲವು ಬೆಡಗಿನ ವಚನಕಾರರನ್ನು ಅರ್ಥೈಸಲು ಸೈದ್ಧಾಂತಿಕ ಹಿನ್ನೆಲೆ ತೀರಾ ಅವಶ್ಯಕ. ಈ ಹಿನ್ನೆಲೆಯಲ್ಲಿ ಮೇಲ್ಕಂಡ ವಚನದ ಪುನರ್ರಚನೆ ಮಾಡೋಣ.

ಮೊದಲ ಭಾಗ—ತಾತ್ತ್ವಿಕ

ಪರಬ್ರಹ್ಮವು ಚಿಚ್ಛಕ್ತಿಯನ್ನೆಬಿತ್ತಿ, ಪರಬ್ರಹ್ಮವು ವಿಶ್ವವನ್ನು ಬೆಳೆದು
ಪರಬ್ರಹ್ಮವು ಜಗತ್ತಾಗಿ ರೂಪುಗೊಂಡಿತ್ತಯ್ಯ
(ನಿಷ್ಕಲತ್ವವನ್ನಳಿದು ಮಹಾಲಿಂಗವಾಗಿ ವಿಶ್ವಾಂತರ್ಯಾಮಿಯಾಯಿತು.)

ಎರಡನೆಯ ಭಾಗ—ಸಾಧನಾತ್ಮಕ

ಬ್ರಹ್ಮಭಾವ ಬಲಿತ ಜೀವನ, ಬ್ರಹ್ಮಭಾವ ಅಳವಟ್ಟ ಭಾವನೆ
(ಆಗ) ಶರಣನ ಬದುಕು ಶಿವವೇ ಆಗಿ ಪರಮಾತ್ಮನೊಡನೆ ಒಂದಾಗಿದೆ.
(ಕಾಯಗುಣ, ಪ್ರಾಣಗುಣ, ಮನೋಗುಣ ಬಯಲಾಗಿಸಿಕೊಂಡಿದೆ.)

ಮೂರನೆಯ ಭಾಗ—ವೈಯಕ್ತಿಕ

ಆ ಪರಶಿವಲಿಂಗವನ್ನು ಪೂಜಿಸಿ ಸಾಧನೆಯಲ್ಲಿ ತೊಡಗಿದವರು
ಬಯಲೊಡನೆ ಒಂದಾದರು.
ನಾನೂ ಸಹ ಪರಿಪೂರ್ಣ ಪರಶಿವನನ್ನು ನಂಬಿ ಪರಿಪೂರ್ಣನಾದೆ.
(ಗುಹೇಶ್ವರನೊಡನೆ ಒಂದಾದ)

ಈಗ ವಿವರವಾಗಿಯೇ ಈ ವಚನದಾಳಕ್ಕೆ ಪ್ರವೇಶಿಸೋಣ.

ಆಯೋನಿಜ, ಅಪ್ರಮಾಣ, ಅಗೋಚರನಾದ, ಈ ಲೋಕ ಸೃಷ್ಟಿಯಾಗುವ ಪೂರ್ವದಲ್ಲೇ ಇದ್ದ ಆದಿ ಚೈತನ್ಯ ನಿಷ್ಕಲಲಿಂಗವು ಬಯಲು ಎಂದು ಕರೆಸಿಕೊಳ್ಳುತ್ತದೆ. ಇದಕ್ಕೆ ಸ್ವಯಂಭುವೆಂದು, ಅಜನೆಂದು, ಇಂಗ್ಲೀಷಿನಲ್ಲಿ Transcendental soul ಎಂದು ಕರೆಯುತ್ತಾರೆ. ತಂದೆ-ತಾಯಿ ಇಲ್ಲದ ಕಂದನಾದ ಈ ಸ್ವಯಂಭುವು, ತನ್ನಿಂದ ತಾನೇ ಹುಟ್ಟಿ ಬೆಳೆದು, ತನ್ನ ಪ್ರಾಣತೃಪ್ತಿಯಲ್ಲೇ ತಲ್ಲೀನವಾಗಿ ಅನಂತಕಾಲ ಇರುವುದು. ಒಂದಾನೊಂದು ದಿನ ಅದರಲ್ಲಿ ಅಂತಃಸ್ಫುರಣವಾದಾಗ ಓಂಕಾರ ಸ್ಪಂದನವಾಯಿತು. ಇದೇ ಚಿಚ್ಛಕ್ತಿ. ಚಿಚ್ಛಕ್ತಿಯು ಆಗಂತುಕವಾಗಿ ಎಲ್ಲಿಂದಲೋ ಬಂದು

ಸೇರಿದ್ದಲ್ಲ. ಅವಿನಾಭಾವ ಸಂಬಂಧದಿಂದ ಪರಶಿವನಲ್ಲೇ ಅಂತರ್ಗತವಾಗಿ ಇದ್ದುದು. ಅ, ಉ, ಮ ಕಾರ ಸಹಿತವಾದ ಓಂಕಾರರೂಪಿ ಚಿಚ್ಛಕ್ತಿ ಜ್ಞಾನ-ಇಚ್ಛಾ-ಕ್ರಿಯಾಶಕ್ತಿ ಯುಕ್ತವಾಗಿದೆ. "ನಾನು ಸೃಷ್ಟಿ ಮಾಡಬಲ್ಲೆ..." ಎಂಬ ಅರಿವು ಮೊದಲು ಪರ ಬ್ರಹ್ಮನಲ್ಲಿ ಸ್ಫುರಿಸಿತು. "ನಾನು ಮಾಡಬೇಕು" ಎಂಬ ಇಚ್ಛೆ ಸಂಕಲ್ಪವಾಗಿ ಗಟ್ಟಿ ಗೊಂಡಿತು. ಆಗ ಕ್ರಿಯಾಸಹಿತನಾಗಿ ಕಾರ್ಯಮಾಡಿ ಪರಶಿವನು ಸೃಷ್ಟಿ ರಚನೆಯಲ್ಲಿ ತೊಡಗಿಯೇಬಿಟ್ಟ.

ಈ ರೀತಿ ಪರಬ್ರಹ್ಮವು ತನ್ನ ಅಂತರ್ಗತ ಚಿಚ್ಛಕ್ತಿಯನ್ನು ಬಳಸಿಕೊಂಡು (ಅದನ್ನೇ ಬಿತ್ತಿ) ಸೃಷ್ಟಿಯ ಶಿಶುವನ್ನು ಬೆಳೆಯಿತು. ಸೃಷ್ಟಿ ರಚನೆಯಾದ ಬಳಿಕ ತನ ಗೇನೂ ಸಂಬಂಧವಿಲ್ಲದಂತೆ ಕರ್ತನು ಉಳಿದನೆ ? ಇಲ್ಲ, ತಾನು ಹಾಸುಹೊಕ್ಕಾಗಿ ಜಗತ್ತಿನಲ್ಲಿ ಸರ್ವಾಂತರ್ಯಾಮಿಯಾದ, ಗೃಹಸ್ಥ ಧರ್ಮ ಪ್ರವೇಶಿಸಿದ ಬ್ರಹ್ಮಚಾರಿ ಕರ್ತವ್ಯಪರನಾದಂತೆ. ಜೇಡರ ಹುಳು ತನ್ನಂತರ್ಗತವಾದ ಜೊಲ್ಲಿನಿಂದ ಜಡವಾದ ಬಲೆ ರಚಿಸಿ, ಚೈತನ್ಯಮಯ ಮರಿಗಳನ್ನು ಹುಟ್ಟಿಸುವಂತೆ, ಕರ್ತನು ತನ್ನ ಚಿಚ್ಛಕ್ತಿಯ ಅಂಶದಿಂದ ಜಡ ಪ್ರಕೃತಿಯನ್ನು ನಿರ್ಮಿಸಿದ, ತನ್ನಂಶವಾದ ಜೀವಾತ್ಮರುಗಳನ್ನೂ ನಿರ್ಮಿಸಿದ. ಇಲ್ಲಿಯತನಕ ಒಂದೇ ಇದ್ದ 'ಅದು' ಈಗ ಹಲವಾಗಿದೆ. One became many.

ಇಲ್ಲಿಯ ತನಕ ಒಂದು ಹಲವಾದ, ಪರಬ್ರಹ್ಮನ ಸಂಸಾರ ವೃದ್ಧಿಯಾದ ಕಥೆ ಯನ್ನು ಕೇಳಿದೆವು. ಇದುವೇ Evolution of the universe, ಸೃಷ್ಟಿಯ ವಿಕಸನ. ಈಗಾಯಿತು creation ಅಥವಾ ಸೃಷ್ಟಿಯ ರಚನೆ. ಮಾತೃಸ್ಥಾನದಿಂದ, ಮೂಲದಿಂದ ಹೊರಬಿದ್ದ ಜೀವಾತ್ಮರುಗಳಿಗೆ ಒಮ್ಮೆಲೇ ಮೂಲಕ್ಕೆ ಸಾಗುವ ಅಪೇಕ್ಷೆ ಉತ್ಕಟವಾಗುವುದು. ಇಲ್ಲಿಯತನಕ ಅಧೋಮುಖ ಪಯಣ ಬೆಳೆಸಿದ್ದ ಜೀವಾತ್ಮರನ್ನು ಊರ್ಧ್ವಗಾಮಿಗಳನ್ನಾಗಿ ಮಾಡಬೇಕಾಗಿದೆ. (ಆಗಲೇ ಯಾವುದಾದರೊಂದು ಶಕ್ತಿ—ಗುರುವೋ, ಘಟನೆಯೋ, ವ್ಯಕ್ತಿಯೋ Direction (ದಿಕ್) ಬದಲು ಮಾಡಲು ಸಹಾಯಕವಾಗುವುದು) ಆಗ ಷಟ್‌ಸ್ಥಲ ದರ್ಶನ ದಿಗ್ದರ್ಶನ ಮಾಡುವುದು. ಶಿವ ಯೋಗದ ಪಥ ಹಿಡಿದು ಹೊರಟಾಗ ಅದರ ಆತ್ಯಂತಿಕ ಸಿದ್ಧಿಗಳಾದ ಬಯಲ ಜೀವನ. ಭಾವನೆ ಅಳವಡುವವು. "ಲಿಂಗವೆನ್ನೆ, ಲಿಂಗೈಕ್ಯವೆನ್ನೆ ; ಸಂಗವೆನ್ನೆ, ನಿಸ್ಸಂಗವೆನ್ನೆ ; ಆಯಿತ್ತೆನ್ನೆ, ಆಗದೆನ್ನೆ ; ನೀನೆನ್ನೆ, ನಾನೆನ್ನೆ ; ಚನ್ನಮಲ್ಲಿಕಾರ್ಜುನ ದೇವರಲ್ಲಿ ಘನ ಲಿಂಗೈಕ್ಯವಾದ ಬಳಿಕ ಏನೂ ಎನಲೊಲ್ಲದೆ ಇದ್ದೆನು...." ಪೂಜ್ಯ-ಪೂಜಕ-ಪೂಜೆ ಎಂಬ ತ್ರಿಪುಟಿಯಳಿದ, 'ತನ್ನ ಮೂಲಕ ದೇವನು ಉಣ್ಣುತ್ತಿದ್ದಾನೆ, ಉಡುತ್ತಿದ್ದಾನೆ, ಮೂಸು ತ್ತಿದ್ದಾನೆ, ಉಸಿರಾಡುತ್ತಿದ್ದಾನೆ' ಎಂಬ "ಬಯಲಸ್ಥಿತಿ" ಅಳವಡುವುದು. "ಏಕಭಾಜನ"

(ಭಕ್ತನ ದೇಹದಲ್ಲೇ) ದಲ್ಲಿ ಉಭಯತರೂ ಅವಿನಾಭಾವದಲ್ಲಿ ವ್ಯವಹರಿಸುವ 'ಭಾವ' ಅಳವಟ್ಟುಬಿಡುವುದು. ಪರಮಾತ್ಮನು (ಬಯಲು) ಭಕ್ತನನ್ನು ಆಕ್ರಮಿಸು (overtake) ವನು. ಹೀಗೆ ಆಕ್ರಮಿಸಲ್ಪಟ್ಟ (possessed) ಭಕ್ತ ಬಯಲಭಾವ ಬೆಳೆಸಿಕೊಳ್ಳುತ್ತಾನೆ.

> ಗ್ರಹ ಬಂದು **ಆವರಿಸಲೊಡನೆ** ತನ್ನ ಮರೆಸುವುದು
> ಮತ್ತೊಂದಕ್ಕಿಂಬುಗೊಡಲೀಯದಯ್ಯಾ.
> ಕೂಡಲ ಸಂಗಮದೇವನ **ಅರಿವು ಅನುಪಮ**ವಾಗಲೊಡನೆ
> ಬೆವಹಾರದೊಳಗಿರಲೀಯದಯ್ಯಾ.

ಬ. ಷ. ವ. ೯೦೯

ಕೀಡೆ ಭ್ರಮರಕ್ಕಾಗಿ. ಭ್ರಮರತ್ವಕ್ಕಾಗಿ ಹಂಬಲಿಸಿ ಭ್ರಮರವೇ ತಾನಾಗುವಂತೆ, ಶಿಷ್ಯನು ಗುರುವಿಗಾಗಿ, ಗುರು ಕರುಣೆಗಾಗಿ, ಗುರುಸ್ಥಿತಿಗಾಗಿ ಹಂಬಲಿಸಿ ಗುರುವೇ ಆಗು ವಂತೆ, ಪರಶಿವಲಿಂಗಕ್ಕಾಗಿ ಹಂಬಲಿಸಿ, ಅದನ್ನು ಪೂಜಿಸಿ, ಅದುವೇ ತಾನಾಗಿ, ಆದ ರೊಡನೆ ಒಡವೆರೆದು ಒಂದಾಗುವರು ಜ್ಞಾನಿಗಳು, ಶರಣರು. "ಆದ ಕಾರಣ ನಾನೂ ಸಹ (ಅಂದರೆ ಅಲ್ಲಮ ಪ್ರಭುದೇವರು) ನಿನ್ನನ್ನು ನಂಬಿ, ನಿನ್ನನ್ನು ಪೂಜಿಸಿ, ನಿನ್ನಂತೆಯೇ ಆಗಿ, ನಿನ್ನೊಡನೆ ಉರಿ ಸೋಂಕಿದ ಕರ್ಪೂರದಂತೆ ಒಂದಾದೆ, ಗುಹೇಶ್ವರ" ಎಂದು ಪ್ರಭುದೇವರು ವಚನವನ್ನು ಪೂರೈಸುತ್ತಾರೆ.

ಹೀಗೆ ವಚನವು ಆದಿಭಾಗದಲ್ಲಿ ಸೃಷ್ಟಿಯು ರೂಪಗೊಳ್ಳುವುದನ್ನು. ಮಧ್ಯ ಭಾಗದಲ್ಲಿ ದೂರವಾದ ಸೃಷ್ಟಿತ ಜೀವಾತ್ಮರು ಮೂಲಕ್ಕೆ ಕೈಗೊಳ್ಳುವ ಪಯಣವನ್ನು, ಕಡೆಯ ಭಾಗದಲ್ಲಿ ಪ್ರಭುದೇವರು ತಾವು ವೈಯಕ್ತಿಕವಾಗಿ ಸಾಧಿಸಿದ ಸಾಧನೆಯನ್ನು ಕುರಿತು ಹೇಳುತ್ತದೆ.

★ ★ ★

ತಪ್ಪು ತಿದ್ದುಪಡಿ

ಸೆಪ್ಟೆಂಬರ್ 1978ರ ಸಂಚಿಕೆಯಲ್ಲಿ ಪಂಚಪದದ ಗೊಂಚಲು ಎಂಬ ವಿಷಯ (ಪುಟ ೪೪) ದಲ್ಲಿ ಪಂಚ ಕರ್ಮೇಂದ್ರಿಯಗಳನ್ನು ಕುರಿತು ತಪ್ಪಾಗಿ ಪ್ರಕಟವಾಗಿದೆ. ಮೂಲ ಸಂಗ್ರಹಕಾರರ ತಪ್ಪನ್ನು ತಿದ್ದುಪಡಿ ಮಾಡದ ಮರೆವಿಗೆ ವಿಷಾದಿಸುತ್ತೇವೆ. ತಿದ್ದುಪಡಿ ಮಾಡಿ ಓದಿಕೊಳ್ಳಿ. ಪಂಚಕರ್ಮೇಂದ್ರಿಯಗಳು : ಬಾಯಿ, ಕೈ, ಕಾಲು, ಗುಹ್ಯ, ಗುದ.

ಸಮಸ್ಯೆ! ಸಮಾಧಾನ!

—ಎಲ್. ಶಿವಾನಂದ, ಮಂಡ್ಯ.

** ಅನೇಕ ಮಂದಿ ಹಿಂದಿನ ವಿರಕ್ತ ಮಠಾಧೀಶರು ಹಗಲಿರುಳು ಬಸವ ಮಂತ್ರವನ್ನು ಉಸಿರಾಗಿ ಮಾಡಿಕೊಂಡಿದ್ದುದಷ್ಟೇ ಅಲ್ಲದೆ, ಬಸವಣ್ಣನವರು ಆದಿಗುರುವೆಂದು ಅವರ ವಚನಗಳೇ ಈ ಧರ್ಮದ ಸಂವಿಧಾನವೆಂದು ಸ್ಪಷ್ಟವಾಗಿ ಹೇಳುತ್ತಿದ್ದರು. ಆದರೆ ಇತ್ತೀಚಿನ ಕೆಲವರು ಇದನ್ನು ಹೇಳದೆಯೇ ಮೆಲ್ಲನೆ ಬಸವ ವಿರೋಧಿ ಪಂಥಗಳತ್ತ ಒಲವು ತೋರಿಸುವರಲ್ಲ, ಏಕೆ ಹೀಗೆ ?

★ ಒಂದು ಸಂವಿಧಾನ (constitution) ಮಾನ್ಯವೆಂದು ಒಪ್ಪಿದ ಮೇಲೆ ಅದರಂತೆ ನಡೆಯಬೇಕಷ್ಟೆ. ನಡೆಯದಿದ್ದರೆ ಅಪರಾಧವೂ ಆಗುತ್ತದಯಷ್ಟೆ ? ಬಸವಣ್ಣನವರನ್ನು ಆದ್ಯರೆಂದು ಒಪ್ಪಿ, ಅವರ ವಾಣಿಯನ್ನೇ ಧರ್ಮಶಾಸ್ತ್ರವೆಂದು ಒಪ್ಪಿದಾಗ, ಜಾತಿವಾದ ಪುಷ್ಟೀಕರಿಸಲು ಬರದೆ ಜಾತ್ಯತೀತ ದೃಷ್ಟಿಕೋನದವರು ನಾವಾಗಬೇಕಾಗುತ್ತದೆ. ಜಾತಿಗಾಗಲಿ, ಹಣಕ್ಕಾಗಲೀ ಮಾನ್ಯತೆ ಕೊಡದೆ ಗುಣ, ಅರ್ಹತೆಗೆ ಗೌರವ ನೀಡಬೇಕಾಗುತ್ತೆ. ಈ ಪ್ರಗತಿಪರ ದೃಷ್ಟಿಕೋನ ಅಳವಡಿಸಿಕೊಳ್ಳಲು ಇಚ್ಛಿಸದ ಮಠಾಧಿಪತಿಗಳು ಮೆಲ್ಲನೆ ಸಂಪ್ರದಾಯವನ್ನು ಪುಷ್ಟೀಕರಿಸುವವರತ್ತ ವಾಲುತ್ತಾರೆ, ಬಸವಣ್ಣನವರನ್ನು ಕೈಬಿಡುತ್ತಾರೆ.

—ದುಂಡಪ್ಪ ಮಂಟೂರು, ಹುಬ್ಬಳ್ಳಿ.

** ಪುರಾತನ ಕಾಲದಿಂದ ಬಂದ ಸ್ಥಾವರಲಿಂಗಪೂಜೆ, ಬಸವಣ್ಣನವರು ಕೊಟ್ಟ ಇಷ್ಟಲಿಂಗಪೂಜೆ, ಎರಡೂ ಒಂದೆಯೇ ?

★ ಅಲ್ಲ ; ಸ್ಥಾವರಲಿಂಗ ಪೌರಾಣಿಕ ಶಿವ-ಪಾರ್ವತಿಯರ ಕುರುಹಾದ್ದರಿಂದ ದೇವತಾ ಪೂಜೆ. ಶಿವಲಿಂಗವು ಐತಿಹಾಸಿಕ ಯೋಗಿ ಶಿವನ ಕುರುಹಾದ್ದರಿಂದ ವಿಭೂತಿ ಪೂಜೆ. ಇಷ್ಟಲಿಂಗವು ವಿಶ್ವದಾಕಾರದಲ್ಲಿ ವಿಶ್ವಾತ್ಮನ ಪೂಜೆಯಾದ ಕಾರಣ ದೇವಪೂಜೆ.

—ಚಂದ್ರಕಾಂತ ಸಿರಸಂಗಿ, ಧಾರವಾಡ.

** ಸಮಾಜ ಎಷ್ಟು ದೊಡ್ಡದಿದೆ. ಪ್ರಭಾವೀಯುತವಾಗಿ ಧರ್ಮಜ್ಞಾನ ಉಂಟು ಮಾಡುವ ಅಥವಾ ಜನಜಾಗೃತಿ ಮಾಡುವ ಪತ್ರಿಕೆಗಳ ಕೊರತೆ ಏಕೆ ಇದೆ ?

★ ಕೆಲವು ಪತ್ರಿಕೆಗಳು ಬೈಯ್ದು ದುಡ್ಡು ಕೀಳುವ "ಪೀತ ಪತ್ರಿಕೆ"ಗಳಾದರೆ, ಇನ್ನು ಕೆಲವು ಹೊಗಳಿ ಹಣ ಬಿಚ್ಚಿಸುವ "ಸಮಯ ಸಾಧಕ"ವಾಗುತ್ತವೆ. ಹೀಗಾಗಿ ನಿರ್ವಿಕಾರವಾಗಿ, ಪ್ರೌಢವಾಗಿ ಚಿಂತನಶೀಲತೆಯಲ್ಲಿ ತೊಡಗುವ ತಾತ್ತ್ವಿಕ ಪತ್ರಿಕೆಗಳ ಕೊರತೆಯಾಗಿದೆ.

—ಶಿವಲಿಂಗದೇವರು, ಭಾಲ್ಕಿ ಹಿರೇಮಠ.

** ಬಸವಣ್ಣನವರಿಗಿಂತಲೂ ಪೂರ್ವದವರು ತಾವೆಂದು ಕೆಲವು ವಿರಕ್ತಮಠಾಧಿಕಾರಿಗಳು ಹೇಳುವರಲ್ಲ; ಇದು ಸರಿಯೆ ?

★ "ಅಪ್ಪನಿಗಿಂತಲೂ ಮೊದಲು ತಾನಿದ್ದೆ" ಎಂದು ಹೇಳುವ ಮಗನ ಮಾತಿನಷ್ಟು ಹಾಸ್ಯಾಸ್ಪದ. ವಿರಕ್ತ ಸಂಪ್ರದಾಯ ಆರಂಭವಾದುದೇ ಬಸವಣ್ಣನವರ ವಿಚಾರಧಾರೆಯ ಚೌಕಟ್ಟಿನಲ್ಲಿ. ಅಂತೆಯೇ ವಿರಕ್ತ ಮಠಾಧೀಶರಿಗೆ ಪೀಠಾಧಿಕಾರ ಕೊಡುವಾಗ "ಶ್ರೀ ಗುರುಬಸವಲಿಂಗಾಯನಮಃ" ಮಂತ್ರ, ಜೋಳಿಗೆ-ಬೆತ್ತ, ಜೋಳಿಗೆಯಲ್ಲಿ ಬಸವಣ್ಣನವರ ಷಟ್ಸ್ಥಲ ವಚನಗಳ ಕಟ್ಟು ಮತ್ತು ಶೂನ್ಯ ಸಂಪಾದನೆ ಕೊಡುವುದು.

—ಶಿವಪ್ಪ ಉಮಡಿ, ಹುಬ್ಬಳ್ಳಿ.

** ಲಿಂಗಾಯತ ಸಂಸ್ಕೃತಿಯ ಕೆಲವು ಮಠಗಳು ಐತಿಹಾಸಿಕವಾಗಿ ಬಸವಣ್ಣನವರಿಗಿಂತಲೂ ಪೂರ್ವದವು ಎಂದು ಹೇಳುವರಲ್ಲಾ, ಅದು ಹೇಗೆ ?

★ ಲಿಂಗಾಯತ ಧರ್ಮ ಪರಂಪರೆಗೆ ಅವು ಒಳಗಾಗುವ ಮುನ್ನ ಶೈವ, ಪಾಶುಪತ, ಲಾಕುಲೀಶ, ಕಾಳಾಮುಖ ಮಠಗಳಾಗಿ ಇದ್ದವು. ಬಸವಣ್ಣನವರ ಧರ್ಮವು ಹನ್ನೆರಡನೆಯ ಶತಮಾನದಲ್ಲಿ ಅಪಾರ ಪ್ರಭಾವ ಬೀರತೊಡಗಿದಾಗ ಪ್ರಮುಖ ಶೈವ ಮಠಗಳು ನೂತನ ಧರ್ಮವಾಹಿನಿಯೊಳಕ್ಕೆ ಸಂಗಮಗೊಂಡು ಲಿಂಗಾಯತ ಮಠಗಳಾದವು.

—ಲಲಿತ, ಊರುಬೇಡ.

** ನಾನು ಓರ್ವ ಪರಜಾತಿಯ ಹುಡುಗನನ್ನು ಪ್ರೀತಿಸಿದ್ದೇನೆ. ಅದೂ, ಕೇವಲ

ಯೌವ್ವನದ ಕಾವಿನ ಮೂರ್ಖ ಕಾಮದಿಂದಲ್ಲ, ಕೆಲವಾರು ಆದರ್ಶ ಮೌಲ್ಯಗಳ ಸಾಧನೆಯ ಕನಸು ಹೊತ್ತು. ಅನ್ಯಜಾತಿಯವನಾದ ಕಾರಣ ತಂದೆ ತಾಯಿ ಒಪ್ಪುತ್ತಿಲ್ಲ. ಬೇರೆ ಮದುವೆ ಮಾಡಲು ಅವರ ಪ್ರಯತ್ನ. ನಾನು ಬೇರೆ ಮದುವೆಯಾದರೆ ನನ್ನ ಪ್ರೀತಿಸಿದವನು ಸಾಯುವುದು ಸುಸ್ಪಷ್ಟ. ಹೋಗಲಿ, ಈಗಲೇ ಈರ್ವರೂ ಲಗ್ನವಾಗೋಣವೆಂದರೆ ಅವರ ವಿದ್ಯಾಭ್ಯಾಸ ಮುಗಿದಿಲ್ಲ. ಇನ್ನೂ ಎರಡು ವರ್ಷ ತಾಳು ಎನ್ನುತ್ತಿದ್ದಾರೆ. ನನ್ನ ತಂದೆ ತಾಯಿ ಅಷ್ಟು ದಿನ ಬಿಡಲಾರರು ನನ್ನನ್ನು. ಏನು ಮಾಡಲೀಗ ?

★ ನೋಡಮ್ಮಾ. 'ಹಾವೂ ಸಾಯಲ್ಲ ಕೋಲೂ ಮುರಿಯಲ್ಲ' ಎಂಬ ಮಾತಿನಿಂದ ಪ್ರಯೋಜನವಿಲ್ಲ. ಕಾಲಾನಂತರದಲ್ಲಿ ಅಗಲಿಕೆಯ ನೋವು ಮರೆಯಬಲ್ಲೆವೆಂಬ ವಿಶ್ವಾಸವಿದ್ದರೆ ಇಬ್ಬರೂ ನಿರ್ಧರಿಸಿ ಬೇರೆಯಾಗಿ, ಮದುವೆಯಾಗಿ ತಾಯಿ-ತಂದೆ ಸೂಚಿಸಿದವರನ್ನು. ಅಥವಾ ತಾಯಿ-ತಂದೆಗೆ ಇದ್ದ ವಿಷಯ ಸ್ಪಷ್ಟವಾಗಿ ತಿಳಿಸಿ ವಿದ್ಯಾಭ್ಯಾಸ ಮುಗಿವತನಕ ಅವರಲ್ಲಿರಿ. ಇಲ್ಲವೇ ಬಡತನವೋ ಸಿರಿತನವೋ ಕಷ್ಟವೋ ಸುಖವೋ ಧೈರ್ಯದಿಂದ ತಾಯಿ-ತಂದೆಯರನ್ನು ಬಿಟ್ಟು ಮದುವೆಯಾಗಿ ಸುಖವಾಗಿರಿ. ಚಿಂತಿಸುವುದರಿಂದ ಸಮಸ್ಯೆ ಪರಿಹಾರವಾಗದು.

—ಮರಿಸ್ವಾಮಿ, ದೊಡ್ಡಂದವಾಡಿ.

** ಒಂದು ಪ್ರಭಾವೀ ಲಿಂಗಾಯತ ಮಠದವರ ಪತ್ರಿಕೆಯ ಸಂಪಾದಕೀಯ ವಾಣಿಯನ್ನು ಮಠಾಧೀಶರೇ ಬರೆಯುತ್ತಿದ್ದಾರೆ. ಅವರು ಭಾರತೀಯ ಜನ್ಯ ಧರ್ಮಗಳ ಉಲ್ಲೇಖ ಮಾಡಿದ್ದಾರೆ. ಆದರೆ ತಮ್ಮ ಧರ್ಮದ ಉಲ್ಲೇಖವನ್ನೇ ಮಾಡಿಲ್ಲ. ಯಾವ ಧರ್ಮದ ಮಠಕ್ಕೆ ಅಧಿಪತಿಗಳಾಗಿದ್ದಾರೋ, ಯಾವ ಧರ್ಮದ ಪ್ರಸಾರ ಅವರ ಆದ್ಯ ಕರ್ತವ್ಯವೋ ಅದನ್ನೇ ಉಲ್ಲೇಖಿಸದಿರುವದಕ್ಕೆ ಕಾರಣವೇನಿರಬಹುದು ?

★ ಅದನ್ನು ನಾವರಿಯೆವು ! ಸ್ವಧರ್ಮದಲ್ಲಿ ನಿಷ್ಠೆಯಿರದ ನಿರಭಿಮಾನವೋ, ಭಾರಿ ಸ್ವಧರ್ಮಾಭಿಮಾನಿಗಳು ಎಂದು ಯಾರಾದರೂ ಅಂದಾರೋ ಎನ್ನುವ ಅಂಜುಬುರುಕುತನವೋ, ಪರಧರ್ಮೀಯರನ್ನು ಸಂಪ್ರೀತಗೊಳಿಸಿ ಒಲೈಸಿಕೊಳ್ಳುವ ಕೀರ್ತಿಲಾಲಸೆಯೋ, ಅಥವಾ ಅವರ ಹೆಸರಲ್ಲಿ ಬೇರಾರಾದರೂ ಜಾತಿವಾದಿಗಳು ಬರೆದು ಹಾಕುತ್ತಿದ್ದರೂ ಗಮನಿಸದ ಅಜ್ಞಾನವೋ ; ಹೀಗೆ ಯಾವುದಾದರೊಂದಿರಬಹುದು !

—ಬಿ. ಎಸ್. ಸಂಗಮದ, ಬೀದರ.

** ಲಿಂಗಾಯತ ಧರ್ಮಕ್ಕೆ ಬಸವ ಧರ್ಮವೆಂದು ಸಂಬೋಧಿಸಿ ತಾವು ಬರೆಯುವಿರಿ; ಏಕೆ ?

★ ಶಿಥಿಲತೆ ಮತ್ತು ಗೊಂದಲ ತಪ್ಪಿಸಲಿಕ್ಕೆ ! ಒಬ್ಬ ತರುಣ ತನ್ನ ಹೆಸರಿನ ಜೊತೆಗೆ ತನ್ನ ಅಪ್ಪನ ಹೆಸರನ್ನು ಬರೆದುಬಿಟ್ಟರೆ 'ಅವನ ಜನ್ಮದಾತ ಯಾರು ?' ಎಂಬ ಬಗ್ಗೆ ಇತರರಿಗೆ ಸಂದೇಹ ಬರದು, ಅವನಿಗೂ ಗೊಂದಲವಾಗದು. ಹಾಗೆಯೇ ಧರ್ಮದ ಹೆಸರಿನಲ್ಲಿ ಧರ್ಮಪಿತನ ಹೆಸರೂ ಬಂದುಬಿಟ್ಟರೆ ಅನುಯಾಯಿಗಳಿಗೆ ಸಂದೇಹವಿರದು. ಮೂಲತತ್ತ್ವಗಳು ಶಿಥಿಲಗೊಳ್ಳುವ ಅಥವಾ ಆ ಧರ್ಮದ ಗುರು ಯಾರೆಂಬ ಸಂದೇಹ ಮೂಡುವ ಸಂಭವವಿರದು. ಬೌದ್ಧ ಮತ್ತು ಕ್ರೈಸ್ತ ಧರ್ಮಗಳು ಸುಸಂಘಟಿತವಾಗಿರಲು ಅದೇ ಕಾರಣ.

—ರಾಘವಾಂಕ, ಭದ್ರಾವತಿ.

** ಎಲ್ಲ ಧರ್ಮೀಯರು ತಮ್ಮ ತಮ್ಮ ಮಂದಿರಗಳಿಗೆ ವಿಶಿಷ್ಟ ಹೆಸರು ಕೊಟ್ಟಿದ್ದಾರೆ. ಬಸವ ಧರ್ಮೀಯರು ಏನೆಂದು ಕರೆಯಬೇಕು ? ಮಠವೆಂದೆ ?

★ ವೈದಿಕರು ದೇವಾಲಯಗಳೆಂದು, ವೈಷ್ಣವರು ಮಂದಿರವೆಂದು, ಕ್ರೈಸ್ತರು ಚರ್ಚ್ ಎಂದು, ಮುಸ್ಲಿಮರು ಮಸೀದಿಗಳೆಂದು, ಸಿಖ್ಖರು ಗುರುದ್ವಾರಗಳೆಂದು, ಶೈವರು ಶಿವಾಲಯಗಳೆಂದು ಕರೆಯುವಂತೆ ಬಸವ ಧರ್ಮೀಯರು 'ಮಂಟಪ'ಗಳೆಂದು ಕರೆಯಬೇಕು. ಮಠವು ಸನ್ಯಾಸಿಗಳ ವಾಸಸ್ಥಾನ, ಮಂಟಪವು ಸಮುದಾಯ ಭವನ (Community Hall). ಈ ಉದ್ದೇಶದಿಂದಲೇ ಅನುಭವ ಮಂಟಪವನ್ನು ಮಾದರಿ ಸಂಸ್ಥೆಯನ್ನಾಗಿ ಬಸವಣ್ಣನವರು ಕಟ್ಟಿ ತೋರಿಸಿದರು. ಇಂದು ಸಮಾಜ ಸಂಘಟನೆಗೆ ಸೂಕ್ತ ಹೆಸರು "ಬಸವ ಮಂಟಪ".

—ಎನ್. ಬಿ. ಶಿವಪ್ರಕಾಶ್, ನಾಗರಘಟ್ಟ.

** ತಮ್ಮಿಂದ ಸಾಧ್ಯವಾಗುತ್ತಿದ್ದರೂ ಕೆಲವರು ಪರರನ್ನೇ ಆಶ್ರಯಿಸುವರಲ್ಲ. ಅವರಿಗೆ ಏನು ಮಾಡಬೇಕು ?

★ ಯಾರಿಂದಲೋ ಆಗುತ್ತಿದ್ದರೆ ಆಗಲಿ ಬಿಡು ಎಂಬ ಜವಾಬ್ದಾರಿ ರಹಿತ ಜನ ತಮ್ಮಲ್ಲಿ ಸಾಮರ್ಥ್ಯವಿದ್ದೂ ಇನ್ನೊಬ್ಬರನ್ನು ಆಶ್ರಯಿಸುವರು. ಅದು

ಗೊತ್ತಾದಾಗ ನೀವು ಅವರಿಗೆ ನೆರವು ನಿಲ್ಲಿಸಿ. ಸ್ವಾವಲಂಬಿಗಳನ್ನಾಗಿ ಮಾಡಲು ಸಹಕರಿಸಿರಿ.

—ಎನ್. ಬಿ. ಸಂಗಪ್ಪೇಶ, ತಿಪಟೂರು.

** ದೈವೀಸಂಬಂಧ ಅನ್ನದಾಸೋಹ ಮಾಡಿ. ಹರಿಜನರನ್ನು ಅಲ್ಲಿಗೆ ಬಿಟ್ಟುಕೊಳ್ಳುವುದಿಲ್ಲ. ಎಲ್ಲರ ದೇವರೂ ಒಬ್ಬನೇ ಅಲ್ಲವೆ ?

★ ಡಾಂಭಿಕತೆ, ಬೂಟಾಟಿಕೆ, ಕೀರ್ತಿವಾರ್ತೆಗಳಿಗಾಗಿ ಮಾಡುವ ಉತ್ಸವಗಳೇ ಹೆಚ್ಚು. ಇಂಥವರು ಕಲ್ಲುನಾಗರಕ್ಕೆ ಹಾಲೆರೆಯುವವರು. ದಿಟದ ನಾಗರವ ಕೊಲ್ಲುವವರು ; ಉಂಬ ಚೇತನಕ್ಕೆ ನಡೆಯೆಂದು ಉಣ್ಣದ ಶಿಲೆಗೆ ನೈವೇದ್ಯ ತೋರುವವರು. ಇಂಥವರಿಗೆ ದೈವೀಕರುಣೆಯ ಸೋಂಕೂ ಆಗದು.

—ತೋಂಟದಪ್ಪ, ಧಾರವಾಡ.

** ಲಿಂಗಾಯತ ಧರ್ಮದ ಪತ್ರಿಕೆ ಎಂದು ಹೇಳಿಕೊಳ್ಳುವ ಒಂದು ಪತ್ರಿಕೆಯಲ್ಲಿ ಪ್ರತಿನಿತ್ಯ ಮನೆದೇವರನ್ನು ಸ್ಮರಿಸಿಕೊಳ್ಳಿ ಎಂದು ನಿಯಮವನ್ನು ಹೇಳಿದ್ದಾರಲ್ಲ. ಇದು ಸರಿಯೆ ?

★ ಶುದ್ಧ ಲಿಂಗಾಯತನಿಗೆ (ಖಾನೆಸುಮಾರಿ ಅಲ್ಲ) ಮನೆ ದೇವರು, ಕುಲದೇವರು ಇರದು. ಇಷ್ಟಲಿಂಗ (ಪರಮಾತ್ಮನ ಸಂಕೇತ), ಬಸವಣ್ಣನವರು (ಧರ್ಮ ಗುರು) ಮತ್ತು ತನ್ನ ದೀಕ್ಷಾ ಗುರುಗಳಷ್ಟೇ ಪೂಜಾರ್ಹರು. ಮನೆಗೊಂದು ದೇವರು, ಕುಲಕ್ಕೊಂದು ದೇವರನ್ನು ಆರಾಧಿಸುವುದು ಶರಣ ಸಂಪ್ರದಾಯವಲ್ಲ, ಪರಮಾತ್ಮನನ್ನು ತನ್ನ ಮನಕ್ಕೆ ತಂದುಕೊಂಡು ಪೂಜಿಸುವುದು ಈ ಧರ್ಮದ ಸಂಪ್ರದಾಯ.

—ಜಿ. ಆರ್. ಜಗದೀಶ್, ಟ್ಯಾಂಕ್‌ಮೊಹಲ್ಲ, ಶಿವಮೊಗ್ಗ.

** ಸನ್ಯಾಸಿ ಮತ್ತು ಬ್ರಹ್ಮಚಾರಿ ಇವರಲ್ಲಿನ ವ್ಯತ್ಯಾಸವೇನು ?

★ ಲಗ್ನವಾಗದೇ ಏಕಾಂಗಿಯಾಗಿರುವವರೆಲ್ಲ ಬ್ರಹ್ಮಚಾರಿ ಎನ್ನಿಸಿಕೊಂಡರೂ, ಸನ್ಯಾಸಿ ಎನ್ನಿಸಿಕೊಳ್ಳುವವನು ಕಾಷಾಯ ವಸ್ತ್ರಧಾರಿಯಾಗಿ, ದೀಕ್ಷಾಬದ್ಧನಾಗಿರಲೇಬೇಕು. ಇನ್ನೊಂದು ಅರ್ಥದಲ್ಲಿ ದೀಕ್ಷೆ ಹೊಂದದೆ ಸಾಧನೆಯಲ್ಲಿ ತೊಡಗಿರುವವನು ಬ್ರಹ್ಮಚಾರಿ, (ಸನ್ಯಾಸ) ದೀಕ್ಷೆ ಹೊಂದಿದವನು ಮಾತ್ರ ಸನ್ಯಾಸಿ.

(೨೭ನೆ ಪುಟಕ್ಕೆ ಮುಂದುವರಿದುದು)

ಮೂರು ಪದಗಳ ಮಾಲೆ

ಸಂಗ್ರಹ : **ಶಿವರಾಜ, ಬೀದರ್**

೧ **ಲಿಂಗತ್ರಯಗಳು :** ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ.
೨ **ಕರಣತ್ರಯಗಳು :** ಮೈ, ಮಾತು, ಮನ.
೩ **ಗುಣತ್ರಯಗಳು :** ಸತ್ವ, ರಜ, ತಮ.
೪ **ಮೂರ್ತಿತ್ರಯಗಳು :** ಬ್ರಹ್ಮ, ವಿಷ್ಣು, ಶಿವ.
೫ **ತಾಪತ್ರಯಗಳು :** ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ.
೬ **ತ್ರಿವಿಧ ಪ್ರಸಾದ :** ಶುದ್ಧ, ಸಿದ್ಧ, ಪ್ರಸಿದ್ಧ.
೭ **ತನುತ್ರಯಗಳು :** ಸ್ಥೂಲ, ಸೂಕ್ಷ್ಮ, ಕಾರಣ.
೮ **ಮಲತ್ರಯಗಳು :** ಆಣವ, ಮಾಯಾ, ಕಾರ್ಮಿಕ.
೯ **ಶಕ್ತಿತ್ರಯಗಳು :** ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿ.
೧೦ **ಕರ್ಮತ್ರಯಗಳು :** ಸಂಚಿತ, ಪ್ರಾರಬ್ಧ, ಆಗಾಮಿ.
೧೧ **ಉಪಾಸನತ್ರಯಗಳು :** ಅರ್ಚನೆ, ಪ್ರಾರ್ಥನೆ, ಧ್ಯಾನ.
೧೨ **ರತ್ನತ್ರಯಗಳು :** ಸಮ್ಯಕ್‌ಜ್ಞಾನ, ಸಮ್ಯಕ್ ಚಾರಿತ್ರ, ಸಮ್ಯಕ್‌ದೃಷ್ಟಿ
೧೩ **ಸ್ನಾನತ್ರಯಗಳು :** ಗಂಗಾಸ್ನಾನ, ವಿಭೂತಿಸ್ನಾನ, ಮಂತ್ರಸ್ನಾನ.
೧೪ **ಮರಣತ್ರಯಗಳು :** ಕಾಲಮರಣ, ಅಕಾಲ ಮರಣ, ದುರ್ಮರಣ.
೧೫ **ನಾಡಿತ್ರಯಗಳು :** ಇಡಾ, ಪಿಂಗಳ, ಸುಷುಮ್ನ.
೧೬ **ಕಾಲತ್ರಯಗಳು :** ಭೂತ, ವರ್ತಮಾನ, ಭವಿಷ್ಯ.
೧೭ **ದೋಷತ್ರಯಗಳು :** ವಾತ, ಪಿತ್ತ, ಕಫ.
೧೮ **ದೀಕ್ಷಾತ್ರಯಗಳು :** ಕ್ರಿಯಾ, ಮಂತ್ರದೀಕ್ಷೆ, ವೇಧಾ.
೧೯ **ನಿಂದಾತ್ರಯಗಳು :** ಗುರುನಿಂದೆ, ಹರನಿಂದೆ, ಚರನಿಂದೆ.
೨೦ **ಆನಂದತ್ರಯಗಳು :** ವಿಷಯಾನಂದ, ಬೌದ್ಧಿಕಾನಂದ, ಆತ್ಮಾನಂದ.
೨೧ **ಉದಕತ್ರಯಗಳು :** ಹಸ್ತೋದಕ, ಮಂತ್ರೋದಕ, ಭಸ್ಮೋದಕ.
೨೨ **ತ್ರಿವಿಧದಾಸೋಹ :** ತನು, ಮನ, ಧನ.
೨೩ **ಇಚ್ಛಾತ್ರಯಗಳು :** ಮೋಕ್ಷೇಚ್ಛೆ, ಸ್ವರ್ಗೇಚ್ಛೆ, ಕೀರ್ತಿಇಚ್ಛೆ.
೨೪ **ತೀರ್ಥೋದಕತ್ರಯಗಳು :** ಗುರುಪಾದೋದಕ, ಲಿಂಗಪಾದೋದಕ, ಜಂಗಮಪಾದೋದಕ.
೨೫ **ಅವಸ್ಥಾತ್ರಯಗಳು :** ಜಾಗೃತ, ಸ್ವಪ್ನ, ಸುಷುಪ್ತಿ.
೨೬ **ತ್ರಿವರ್ಣಧ್ವಜ :** ಕೇಸರಿ, ಬಿಳಿ, ಹಸಿರು.

ಮಹಾತ್ಮ ಗಾಂಧಿಯುನ್ನು ಕುರಿತು

ಸಂಗ್ರಹ: **ಟಿ. ಎಂ. ಪಾಟೀಲ ಜುಗುಳ**

೧) ನಮ್ಮ ಜೀವನ ಜ್ಯೋತಿ ನಂದಿತು. ಜೀವಂತ ಸತ್ಯದ ಪ್ರತೀಕವಾಗಿತ್ತು ಆ ಜ್ಯೋತಿ. ಜನತೆಯನ್ನು ಸನ್ಮಾರ್ಗದತ್ತ ಸೆಳೆದೊಯ್ದ. ಈ ಪುರಾತನ ದೇಶವನ್ನು ಸ್ವಾತಂತ್ರ್ಯದ ಕಡೆಗೆ ಕೊಂಡೊಯ್ದ ಜ್ಯೋತಿಯದು. **—ನೆಹರೂ**

೨) ಗಾಂಧೀಜಿಯುವರ ಜೀವನ ಶಿಕ್ಷಣವು ಜಗತ್ತಿನ ಅತೀ ಶ್ರೇಷ್ಠ ಕೊಡುಗೆಗಳಲ್ಲೊಂದು. **—ಡಾ|| ಎ. ಇ. ಮಾರ್ಗನ್**

೩) ನಾನು ಭಾರತಕ್ಕೆ ಬಂದುದು ಉತ್ತುಂಗ ಹಿಮಾಚಲ ನೋಡಲು: ಸೌಂದರ್ಯಮಯ ತಾಜಮಹಲ ನೋಡಲು: ಹಾಗೂ ಮಾನವೋತ್ತಮ ಗಾಂಧೀಜಿಯವರನ್ನು ನೋಡಲು. **—ಓರ್ವ ಅಮೆರಿಕನ್ ಪ್ರವಾಸಿ**

೪) ಮಾನವ ಬರಿಯ ಮಾನವನಲ್ಲ: ಅವನೊಂದು ನಿಸರ್ಗದ ಚಮತ್ಕಾರವಾಗಿದ್ದಾನೆ.
—ಬರ್ನಾರ್ಡ್ ಷಾ

೫) "ಹೀಗೆ ಮಾಂಸ-ಖಂಡಗಳಿಂದ ಕೂಡಿದ ಗಾಂಧೀಜಿ ಎಂಬ ಒಂದು ವ್ಯಕ್ತಿ ಜೀವಿಸಿತ್ತು" ಎಂದು ಮುಂದಿನ ಪೀಳಿಗೆ ನಂಬುವುದು ಕಷ್ಟ. ಇಂಥ ಮಾನವ ವ್ಯಕ್ತಿ ದೇಹ ಧಾರಣೆ ಮಾಡಿ ಈ ಭೂಮಿಯಲ್ಲಿ ಬಾಳ್ವೆ ನಡೆಸೀತೆಂದು ನಂಬಬಹುದು, ಪ್ರಾಯಶಃ ನಂಬದೆಯೂ ಇರಬಹುದು. **— ಅಲ್ಬರ್ಟ್ ಐನ್‌ಸ್ಟೈನ್**

೬) "ಏನು ? ಭಾರತ ? ಗಾಂಧಿ !"
— ಆರ್ಯನಾರಿಯಾರ ಇಟಲಿ ಪ್ರವಾಸ ಪ್ರಸಂಗದಲ್ಲಿ ಪರಿಚಾರಕನೊಬ್ಬ

೭) "ನೀವು ಗಾಂಧಿ ದೇಶದವರೆ ? ನಿಮ್ಮನ್ನು ನೋಡಿ ನಮಗೆ ಪರಮಾನಂದವಾಯಿತು. ಗಾಂಧಿಯವರನ್ನು ಕಂಡ ವ್ಯಕ್ತಿಯನ್ನು ಕಂಡಿದ್ದೇವೆ ಎಂದು ಎಲ್ಲರಿಗೂ ಹೇಳುವೆವು". **—ಆರ್ಯನಾರಿಯರೊಂದಿಗೆ ಹೋಟೆಲ್ ಪರಿಚಾರಕರು**

೮) "ನಮಗೆ ದಯಮಾಡಿ ಗಾಂಧೀಜಿಯವರ ವಿಷಯವಾಗಿ ಹೇಳಿರಿ"
—ಆರ್ಯನಾರಿಯಾರ ಅಮೇರಿಕಾ ಶಾಲಾ ಭೇಟಿಯಲ್ಲಿ ಬಾಲಕಿಯೋರ್ವಳು.

೯ "ಗಾಂಧೀಜಿಯ ಅಸ್ತ್ರದ ಮುಂದೆ ನಮ್ಮ ಅಸ್ತ್ರಗಳು ನಿರ್ವೀರ್ಯವಾಗಿವೆ.
—ಜ. ಸ್ಮೈಟ್ಸರ ಕಾರ್ಯದರ್ಶಿ

೧೦ ನಿಜವಾದ ಕ್ರಿಸ್ತ ಒಬ್ಬನೇ ಒಬ್ಬನಿದ್ದ ಮತ್ತು ಅವನು ಶಿಲುಬೆಯ ಮೇಲೆ ಮಡಿದ. ಆದರೆ ಹಿಂದೂಸ್ತಾನದಲ್ಲಿ ಒಬ್ಬ ಕ್ರಿಸ್ತನಿದ್ದಾನೆ ಎಂಬುದು ಕನಸು ಮನಸಿನಲ್ಲಿಯೂ ಹೊಳೆಯಲಿಲ್ಲ. ಯೇಸುವಿನ ಗುಟ್ಟು ಪ್ರತ್ಯಕ್ಷವಾಗಿ ಯಾರಿಂದಲಾದರೂ ಆಚರಿಸಲ್ಪಟ್ಟಿದ್ದರೆ. ಅದು ಈ ಹಿಂದೂ ಸಾಧುವಿನಿಂದ. ಎಂದೇ ಅವನ ನಾಲಿಗೆಯ ಮೇಲೆ ಸದಾ ಯೇಸುವಿನ ವಚನಗಳೇ ಆಡಲ್ಪಡುತ್ತವೆ. ಸ್ವಾರ್ಥತ್ಯಾಗ ಹಾಗೂ ಕ್ರೈಸ್ತ ತತ್ತ್ವಗಳ ಪ್ರಭಾವ ಗಾಂಧೀಜಿ ಮೇಲೆ ಬಹುವಾಗಿ ಬಿದ್ದಿದೆ. **—ನೀಷೆ**

೧೧ "ಗಾಂಧೀಜಿ ಎರಡನೇ ಕ್ರಿಸ್ತ". **—ರೋಮಾರೋಲಾ**

೧೨ ಗಾಂಧೀಜಿ ಜಗತ್ತಿನ ಪ್ರಸಿದ್ಧ ವ್ಯಕ್ತಿಗಳಲ್ಲಿ ಅಗ್ರಗಣ್ಯರು. ಇವರು ಮುತ್ಸದ್ದಿಯಲ್ಲ, ರಾಜಕುಮಾರರಲ್ಲ, ರಾಜರಂತೂ ಅಲ್ಲವೇ ಅಲ್ಲ. ಆದರೆ ಇವರು ಆತ್ಮಬಲವಿದ್ದವರು. ಇವರು ಮುಟ್ಟಿದ್ದೆಲ್ಲವೂ ಚಿನ್ನ. **— ಹೋಮ್ಸ್**

೧೩ "ಗಾಂಧೀಜಿಯವರ ಹರಿಜನ ಪತ್ರಿಕೆ ಓದುವದೆಂದರೆ ಈ ಜಗತ್ತಿನ ಅರ್ಥಹೀನ ಗೊಂದಲಗಳಿಂದ ಹೊರಬಿದ್ದು, ಶುದ್ಧವಾದ ವಾತಾವರಣದಲ್ಲಿ ತೇವಮಾಡಿದಂತೆ"
—ಓರ್ವ ಆಂಗ್ಲ ಮಹಿಳೆ

೧೪ ಗಾಂಧೀಜಿಯವರನ್ನು ಕಂಡಾಗ ನನಗೆ ಲೆನಿನ್ ಸ್ಮರಣೆಗೆ ಬಂದರು. ಲೆನಿನ್ ನನ್ನನ್ನು ಯಾವ ರೀತಿಯಾಗಿ ಕಂಡರೋ ಮತ್ತು ಮಾತನಾಡಿಸಿದರೋ ಹಾಗೆಯೇ ಗಾಂಧೀಜಿಯವರು ಕಂಡು ಮಾತನಾಡಿಸಿದರು. ನನ್ನ ಟೇಬಲ್ಲಿನ ಮೇಲೆ ಗಾಂಧೀಜಿಯವರ ಪ್ರತಿಮೆ ಈಗಲೂ ಇದೆ. **—ಕೆಂಡಾನ್**

೧೫ "......ಆಧ್ಯಾತ್ಮಿಕ ಜೀವನದಲ್ಲಿ ವಿಶ್ವಾಸವನ್ನು ಭಾರತವು ಕಳೆದುಕೊಂಡಿಲ್ಲ ಎಂದು ಜಗತ್ತಿಗೆ ಮಹಾತ್ಮರ ತೋರಿಸಲು ಕಾರಣರಾದುದಕ್ಕೆ ನಾವೆಲ್ಲರೂ ಅವರಿಗೆ ಅತ್ಯಂತ ಋಣಿ" **—ಟಾಗೋರ್**

೧೬ "ನೀನು ಬರದಿದ್ದರೆ ಬಿಡು, ಗೋಪು ಯಾಕೆ ಬರುವದಿಲ್ಲ ? ಅವನಿಲ್ಲದಿದ್ದರೆ ನನಗೆ ಸಮಾಧಾನವಿಲ್ಲ" ಎಂದು ಅವರು ನನಗೆ ಹೇಳುತ್ತಿದ್ದರು. ಅಜ್ಜನು ತನ್ನನ್ನು ಕಂಡು ಮಾಡುವ ಹಾವಭಾವಗಳನ್ನು ಮಾಡಿ ತೋರಿಸಿ ಈ ಕೂಸು ನಮ್ಮ ಕಣ್ಣಲ್ಲಿ ಮೇಲಿಂದ ಮೇಲೆ ನೀರು ತರಿಸುತ್ತದೆ. **—ದೇವದಾಸ ಗಾಂಧಿ**

೧೭ "............ಓ ಮಹಾತ್ಮನೇ, ನಿನ್ನ ಸಾನಿಧ್ಯ ತೀರ್ಥದಲಿ
........ಭಾರತಾಂಬೆಯು ಸಿರಿವಸರಿನಿಂದಲೈತಂದು......" —**ಕುವೆಂಪು**

೧೮ "........ಹೀಗುಂಟು ಈ ಜಗ, ಕೇಳಿರೊಂದು ಸೋಜಿಗ........ದಿನದಂತೆ
ಗಾಂಧಿ ಪ್ರಾರ್ಥನೆಗೆ ಹೊರಟರಂತೆ
...ಗುಂಡು ಹಾಕಿದರಂತೆ... ಗಾಂಧೀಪ್ರಿಯರು ಅಲ್ಲಿಯೇ ಇದ್ದರಂತೆ.
—**ಅಂಬಿಕಾತನಯದತ್ತ**

೧೯ "ನಿನ್ನ ಪ್ರತಿಮೆಯ ನಿಲಿಸಿ. ನಾವು ಮರೆಯುವುದು ವ್ಯರ್ಥ"
—**ದಿನಕರ ದೇಸಾಯಿ**

೨೦ ಮಹಾತ್ಮರದೊಂದು ವಿರಾಟ ಜೀವನ. ಅವರ ಆದರ್ಶಗಳು ಸಕಲ ಮಾನವ ಕುಲವ್ಯಾಪಿ. ಅವರ ವಿಚಾರ ವಿಶ್ವವನ್ನೇ ಆವರಿಸಿಕೊಳ್ಳುತ್ತಲಿತ್ತು. 'ಆಡು ಮುಟ್ಟದ ಗಿಡವಿಲ್ಲ' ಎಂಬಂತೆ ಗಾಂಧಿ ಬರೆಯದ ವಿಚಾರವಿಲ್ಲ. ಅವರ ವಿಚಾರವಾಗಿ ಯಾರು ಎಷ್ಟು ಬರೆದರೂ ಸಾಲುವಂತಿಲ್ಲ. —**ರಂಗನಾಥ ದಿವಾಕರ**

೨೧ ಗಾಂಧೀಜಿ ಮಹಿಳೆಯರನ್ನು ಎಷ್ಟು ಗೌರವದಿಂದ ಕಾಣುತ್ತಾರೆ !
—**ಮಾರ್ಗರೇಟ್**

೨೨ ನಾನು ಅನೇಕಸಲ ಪಾದರಕ್ಷೆಗಳನ್ನು ಧರಿಸಿದ್ದೇನೆ. ಆದರೆ ಆ ಮಹಾತ್ಮನು ತಯಾರಿಸಿದ ಪಾದರಕ್ಷೆಗಳನ್ನು ಹಾಕಿಕೊಳ್ಳಲು ನಾನು ಯೋಗ್ಯನಲ್ಲ. ನನಗೆ ಈ ವ್ಯಕ್ತಿಯಲ್ಲಿ ಅಪಾರ ಗೌರವವಿದೆ.
—**ಜನರಲ್ ಸ್ಮಿಡ್ಸ್**

೨೩ ಗಾಂಧೀಜಿಯವರ ಸ್ವಯಂ ಸಹಾಯದ ಪ್ರಯೋಗ ಸ್ವರಾಜ್ಯದ ಪೀಠಿಕೆ.
—**ಟಾಗೋರ್**

೨೪ "ನೀವು ನನಗೆ ಹೆದರುವದೇ ?" —**ಕಸ್ತೂರ್ ಬಾ.**

೨೫ "ಮಹಾತ್ಮಾಜಿಯವರನ್ನು ಭೂಮಿಯ ಕೊನೆಗಳಿಗೂ ಒಯ್ಯಬಹುದು. ಆದರೆ ಅವರು ತಲುಪಬೇಕಾದ ಸ್ಥಳ ಹೃದಯದಲ್ಲಿ ಬದಲಾಗದು".
—**ಸರೋಜಿನಿ ನಾಯ್ಡು**

೨೬ ಗಾಂಧೀಜಿ ನಮಗೆ ಅಹಿಂಸೆ ಧೈರ್ಯಗಳೆಂಬ ಅತ್ಯುತ್ತಮ ಅಸ್ತ್ರಗಳನ್ನು ಕೊಟ್ಟಿದ್ದಾರೆ".
—**ಗಡಿನಾಡ ಗಾಂಧಿ ಅಬ್ದುಲ್ ಗಫಾರ್ ಖಾನ್**

ಮಾಂಸಾಹಾರ ಅವೈಜ್ಞಾನಿಕವೆ ?

ಮೂಲ : ವಿಶ್ವಸಾಗರಿ, ಬ್ರಹ್ಮವಿದ್ಯಾಮಂದಿರ. ಪವನಾರ್
ಅನು : **ಟಿ. ಎ. ದಾಸಪ್ಪ,** ತಿಪಟೂರು.

"ಈ ದೇಶದ ಹವಾಗುಣವನ್ನು ಗಮನಿಸಿದರೆ ಮೊಟ್ಟೆ, ಮಾಂಸ ಮತ್ತು ಹೆಂಡದ ಪೂರ್ಣ ಬಹಿಷ್ಕಾರವಾಗಬೇಕು" ಎಂದು ಬಾಪು ಹೇಳಿದ್ದರು. ಬಾಪು ದೂರದರ್ಶಿ ಇದ್ದರೆಂದು ಈಗ ಸಿದ್ಧವಾಗುತ್ತದೆ. ಭಾರತದ ಹವಾಗುಣ ಈ ವಸ್ತುಗಳಿಗೆ ಉಪಯುಕ್ತವಲ್ಲ. ಹವಾಗುಣದ ಮಾತನ್ನು ಬಿಟ್ಟರೂ ಕೂಡ ಈ ವಸ್ತುಗಳು ಮನುಷ್ಯನ ಸ್ವಾಸ್ಥ್ಯಕ್ಕೆ ಅನುಕೂಲವಲ್ಲ. ಒಬ್ಬ ವೈಜ್ಞಾನಿಕರಂತೂ ಇಲ್ಲಿಯವರೆಗೆ ಹೇಳಿದ್ದಾರೆ : ಮೊಟ್ಟೆ ತಿನ್ನುವವರು ಪ್ರಾರಂಭದಲ್ಲಿ ಸ್ವಸ್ಥ ಕಂಡರೂ ಅವರ ಸ್ವಾಸ್ಥ್ಯ ಸುಧಾರಿಸುವುದಿಲ್ಲ. ಅದೂ ಕೇವಲ ತಾತ್ಕಾಲಿಕವಾಗಿರುವುದು. ಅವರು ಬಹಳ ಬೇಗ ಮೊದಲಿನ ಸ್ವಾಸ್ಥ್ಯವನ್ನೂ ಕೂಡ ಕಳೆದುಕೊಳ್ಳಬೇಕಾಗುವುದು. ಅಂದರೆ ಅನೇಕ ಪ್ರಕಾರದ ರೋಗಗಳಿಗೆ ಈಡಾಗುವರು ಮತ್ತು ಪುನಃ ಸ್ವಸ್ಥರಾಗಲು ಡಾಕ್ಟರುಗಳು ಮತ್ತು ವೈದ್ಯರ ಮನೆಗೆ ತಿರುಗಾಡಬೇಕಾಗುವುದು.

"ಇಂದು ಕೇವಲ ನಮ್ಮ ದೇಶಗಳಲ್ಲಿಯೇ ಅಲ್ಲ, ಯೂರೋಪ್ ಮೊದಲಾದ ದೇಶಗಳಲ್ಲಿಯೂ ಕೂಡ ಶಾಕಾಹಾರಿ ಭೋಜನದ ಮಹತ್ವವನ್ನು ಒಪ್ಪಿಕೊಳ್ಳುತ್ತಿದ್ದಾರೆ" ಎಂದರೆ ಕೆಲವರಿಗೆ ಆಶ್ಚರ್ಯವಾಗಬಹುದು. ವಿಶ್ವವಿಖ್ಯಾತ ಸಾಹಿತಿ ಬರ್ನಾಡ್ ಷಾ ಅವರು ತಮ್ಮ ಜೀವನವಿಡೀ ಶಾಕಾಹಾರಿಗಳಾಗಿದ್ದರು ಮತ್ತು ಹೆಂಡವನ್ನು ಎಂದೂ ತುಟಿಗೂ ಕೂಡ ಮುಟ್ಟಿಸಲಿಲ್ಲ. ಪಾಶ್ಚಾತ್ಯ ವೈಜ್ಞಾನಿಕರೂ ಮಾಂಸಾಹಾರದಿಂದ ಆಗುವ ಹಾನಿಯ ಬಗ್ಗೆ ಅರಿಯತೊಡಗಿದಂತೆ ಪಶ್ಚಿಮದ ಜನರು ಶಾಕಾಹಾರದ ಕಡೆಗೆ ಒಲಿಯತೊಡಗಿದ್ದಾರೆ. ಕೇವಲ ಅಮೇರಿಕ ಒಂದರಲ್ಲೇ ಈಗ ನಾಲ್ಕು ಕೋಟಿಗಿಂತ ಹೆಚ್ಚು ಶಾಕಾಹಾರಿಗಳು ಇದ್ದಾರೆ.

ಫ್ಲೋರಿಡಾ ವಿಶ್ವವಿದ್ಯಾಲಯ (ಅಮೇರಿಕ) ಕೃಷಿ ವಿಭಾಗವು 1967ರಲ್ಲಿ ಪ್ರಕಟಿಸಿದ ಒಂದು Health Bulletinನಲ್ಲಿ ಮೊಟ್ಟೆಯಲ್ಲಿ ಹಾನಿಪ್ರದ ವಿಷಾಣು (ವೈರಸ್)ಗಳು ಇರುವುವೆಂದು ಹೇಳಲಾಗಿದೆ.

ಕ್ಯಾಲಿಫೋರ್ನಿಯಾದ ಇಬ್ಬರು ವಿಜ್ಞಾನಿಗಳು ಡಾ॥ ಕೈತರಿನ್ ನಿಮ್ಮೊ ಮತ್ತು ಡಾ॥ ಜೆ. ಅಮೆನ್ ಅವರುಗಳು ಒಂದು ಸಮಾಚಾರವನ್ನು ಪ್ರಸಾರ ಮಾಡಿದ್ದಾರೆ. ಅದರಲ್ಲಿ ಮೊಟ್ಟೆಯಲ್ಲಿ "ಸ್ಕೊಲೆಸ್ಟರಾಲ್" ಎಂಬ ಹೆಸರಿನ ವಿಷವಿರುವುದು, ಅದು ಹೃದಯದ ರೋಗಕ್ಕೆ ಪ್ರಮುಖ ಕಾರಣವಾಗುವುದೆಂದು ಹೇಳಿದ್ದಾರೆ. ಈ ವಿಜ್ಞಾನಿಗಳು, ಮೊಟ್ಟೆ ತಿನ್ನುವುದರಿಂದ 'ಹೈ ಬ್ಲಡ್ ಪ್ರೆಷರ್' ಉಂಟಾಗುವುದು ಮತ್ತು ಪಚನ ಶಕ್ತಿಯು ಕಡಿಮೆ ಆಗುವುದೆಂದು ಸಿದ್ಧ ಮಾಡಿದ್ದಾರೆ. ಇಷ್ಟೇ ಅಲ್ಲದೆ ಅಂಡ ಕೋಶದಲ್ಲಿ ಕಲ್ಲು (stone) ಆಗುವುದು. ಅಮಾಶಯ ಕರುಳು ಮತ್ತು ಕರುಳಿನ ಹುಣ್ಣು ರೋಗಗಳ ಜೀವಾಣುಗಳನ್ನು ಹರಡುವುದು. ರೋಗ ಪ್ರತೀಕಾರ ಶಕ್ತಿ ಕ್ಷೀಣವಾಗುವುದು. ಆಮಶಂಕೆಗೂ ಕೂಡ ಮೊಟ್ಟೆಯೇ ಕಾರಣ. ಏಕೆಂದರೆ ಹುಣ್ಣಾದ ಕರುಳಿನಲ್ಲಿ ಈ ರೋಗವು ಬೆಳೆಯುವುದು.

ಈ ವಿಷಯ ತಿಳಿಯುತ್ತಲೇ ಜಗತ್ತಿನ ವಿಜ್ಞಾನಿಗಳು ಆಶ್ಚರ್ಯಚಕಿತರಾದರು. ಮತ್ತು ಇದರ ವಾಸ್ತವಿಕತೆಯ ಸಂಶೋಧನೆಯಲ್ಲಿ ತೊಡಗಿದರು. ಅಮೇರಿಕದ ವಿಜ್ಞಾನಿಗಳ ಘೋಷಣೆಯು ಸತ್ಯ ಎಂದು ಸಿದ್ಧವಾಯಿತು. ಜೊತೆಗೆ ಹೊಸ ವಿಷಯಗಳು ಬೆಳಕಿಗೆ ಬಂದು ಮತ್ತೂ ಚಕಿತರಾದರು.

ಬೇರೊಬ್ಬ ಅಮೇರಿಕದ ಚಿಕಿತ್ಸಕ ಡಾ॥ ಎಂ. ವಾಚಮೈನ್ ತನ್ನ ಸಹೋದ್ಯೋಗಿ ಡಾ॥ ಡಿ. ಎಂ. ವರನ್‌ಸ್ಟೀನನ ಜೊತೆಗೆ ಒಂದು ವಿಶೇಷ ಅಧ್ಯಯನದಲ್ಲಿ ತೊಡಗಿದರು. ವಿಷಯ : "ಮನುಷ್ಯನಿಗೆ ಮಾಂಸಾಹಾರ ಉಪಯುಕ್ತವೋ ಶಾಕಾಹಾರ ಉಪಯುಕ್ತವೋ" ಎಂದು. ಪ್ರಕೃತಿಯು ಶಾಕಾಹಾರಿ ಜೀವಿಗಳಿಗೆ ಅತ್ಯಂತ ಉದ್ದವಾದ ಕರುಳನ್ನೂ ಕೊಟ್ಟಿದೆ. ಸುಮಾರು ೪೮ ಅಡಿ ಉದ್ದವಿರುತ್ತದೆ. ಮಾಂಸಾಹಾರಿಗಳ ಹಲ್ಲುಗಳು ಕೂಡ ಶಾಕಾಹಾರಿಗಳಿಗಿಂತ ಭಿನ್ನವಿರುತ್ತವೆ. ಈ ಎರಡು ಮಾತುಗಳಿಂದ, "ಮನುಷ್ಯನನ್ನು ಪ್ರಕೃತಿಯು ಶಾಕಾಹಾರಿಯನ್ನಾಗಿ ಮಾಡಿದೆ." ಎಂದು ತಿಳಿಯಖುತ್ತದೆ.

ಮೇಲೆ ತಿಳಿಸಿರುವ ಇಬ್ಬರು ಡಾಕ್ಟರುಗಳು ಅಧ್ಯಯನ ಮಾಡಿದ ನಂತರ ಒಂದು ವರದಿಯನ್ನು ಪ್ರಕಟಿಸಿದರು. ಅದರಲ್ಲಿ "ಮಾಂಸಾಹಾರದಿಂದ ಎಲುಬುಗಳು ಸಾವಕಾಶವಾಗಿ ದುರ್ಬಲವಾಗುವುವು ಮತ್ತು ಕ್ಷೀಣವಾಗತೊಡಗುವುವು" ಎಂದು ಅಭಿಪ್ರಾಯಪಟ್ಟಿದ್ದಾರೆ.

ಶಾಕಾಹಾರಿಗಳ ಎಲುಬು ಮಾಂಸಾಹಾರಿಗಳಿಗಿಂತ ಹೆಚ್ಚು ಗಟ್ಟಿಯಾಗಿರುವುದು. ಮಾಂಸಾಹಾರಿಗಳ ಮೂತ್ರದಲ್ಲಿ ಕ್ಷಾರ ಮತ್ತು ಉಪ್ಪಿನ ಪದಾರ್ಥ ಹೆಚ್ಚಿನ ಪ್ರಮಾಣದಲ್ಲಿ ಶರೀರದಿಂದ ಹೊರಗೆ ಹೋಗುವುದು. ಇದರಿಂದ ಈ ಉಪ್ಪಿನ ಮತ್ತು ಕ್ಷಾರದ

ಪದಾರ್ಥಗಳು ರಕ್ತದಲ್ಲಿ ಕಡಿಮೆಯಾಗತೊಡಗುವುವು. ರಕ್ತವು ತನ್ನ ಈ ಕೊರತೆಯನ್ನು ಎಲುಬಿನಿಂದ ತೆಗೆದುಕೊಂಡು ಪೂರ್ಣ ಮಾಡಿಕೊಳ್ಳುವುದು. ಈ ಅವಶ್ಯಕ ಸಮತೋಲನ ಕೆಟ್ಟನಂತರ ರೋಗ ಪ್ರತಿರೋಧಕ ಶಕ್ತಿಯನ್ನು ಮನುಷ್ಯ ಕಳೆದುಕೊಳ್ಳುತ್ತಾನೆ.

ಡಾ॥ ಅಲೆಕ್ಸಾಂಡರ್ ಹೈಕ್ ಎಂಬುವವರು ಮೇಲೆ ಹೇಳಿದ ಇಬ್ಬರು ಡಾಕ್ಟರುಗಳ ಸಂಶೋಧನೆಯನ್ನು ಪುಷ್ಟೀಕರಿಸುತ್ತಾ "ಮಾಂಸವನ್ನು ಪಚನ ಮಾಡಿಕೊಳ್ಳುವಾಗ ಶರೀರದಲ್ಲಿ ಹೆಚ್ಚು ಉಷ್ಣತೆಯು ಉತ್ಪನ್ನವಾಗುವುದು. ಈ ಕಾರಣದಿಂದ ರಕ್ತದಲ್ಲಿನ ಉಪ್ಪಿನ ಮತ್ತು ಕ್ಷಾರದ ಪದಾರ್ಥವು ಬಹಳ ವೇಗದಿಂದ ಹೊರಗೆ ಹೋಗುವುದು" ಎಂದು ಹೇಳಿರುವರು. ಇದೇ ಅಲ್ಲದೆ ಎಲುಬುಗಳು ನಿಧಾನವಾಗಿ ದುರ್ಬಲವಾಗುವುವು ಮತ್ತು ಎಷ್ಟೋ ರೋಗಗಳೂ ಕೂಡ ರಾಸಾಯನಿಕ ಪ್ರತಿಕ್ರಿಯೆಗಳ ಅಸಮತೋಲನದ ಕಾರಣದಿಂದ ಉತ್ಪನ್ನವಾಗುವುವು.

ಮಾಂಸಾಹಾರಿಗಳು, ರಕ್ತದಲ್ಲಿ ಉಪ್ಪು ಹಾಗೂ ಕ್ಷಾರದ ಪದಾರ್ಥಗಳನ್ನು ಪೂರ್ಣ ಮಾಡಿಕೊಳ್ಳಲು ತರಕಾರಿ ಹಾಲು ಮುಂತಾದ ಪದಾರ್ಥಗಳನ್ನು ಹೆಚ್ಚಾಗಿ ಉಪಯೋಗಿಸಬೇಕಾಗುವುದು.

★

(ಸಮಸ್ಯೆ–ಸಮಾಧಾನ ೨೦ನೇ ಪುಟದಿಂದ ಮುಂದುವರಿದಿದೆ.)

— ಪುರುಷೋತ್ತಮು, ಅರಸೀಕೆರೆ.

** "ಇತ್ತೀಚೆಗೆ ಬಿ.ಎ., ಎಂ.ಎ. ಪದವೀಧರರೇ ಮಠಾಧೀಶರಾಗುತ್ತಿರುವುದು ಶುಭ ಸೂಚಕವೆಂದು ನನಗನ್ನಿಸುತ್ತಿದೆ. ತಮ್ಮಭಿಪ್ರಾಯ ?

★ ಬಿ.ಎ.. ಎಂ.ಎ. ಅಭ್ಯಾಸದಿಂದ ನಿಜವಾದ ಪಾಂಡಿತ್ಯ ಬೆಳೆಯುತ್ತದೆ. ಪ್ರತಿಭೆ ವೃದ್ಧಿಯಾಗುತ್ತದೆ ಎಂದು ನನಗನಿಸದು. ಮಠಾಧಿಪತಿಯ ಅವಶ್ಯಕ ಅರ್ಹತೆಯೂ ಅದೇ ಎಂದೆನಿಸದು. ಒಂದು ಹಸು ಎಷ್ಟು ಹುಲ್ಲು ತಿನ್ನುತ್ತದೆಂಬುದು ಮುಖ್ಯವಲ್ಲ, ಎಷ್ಟು ಹಾಲು ಕೊಡುವುದೆಂಬುದು ಮುಖ್ಯ. ಹಿಂದಿನ ಅನೇಕ ಮಹಾಂತರು ಸ್ವಯಂ ಸಾಧನೆಯಿಂದ ಅನುಭೂತಿ ಪಡೆದು, ಅಪಾರ ಸೇವೆ ಸಮಾಜಕ್ಕೆ ಸಲ್ಲಿಸಿದರು. ಸಹಸ್ರಾರು ರೂಪಾಯಿಗಳ ಸಮಾಜದ ಹಣ ಖರ್ಚು ಮಾಡಿ ಓದಿಯೂ ಇಂದು ಸಾಹಿತ್ಯ-ಸೇವೆ, ಧರ್ಮಪ್ರಸಾರ ಮಾಡದೆ ಮೂಲೆ ಹಿಡಿದು ಕೂಡ್ರುವ ಪದವೀಧರರಿಂದ ಏನು ಪ್ರಯೋಜನ ಹೇಳಿ ! ಅವರ ವಿದ್ಯೆ ಸಾರ್ಥಕವಾಗುವಂತೆ ದುಡಿದು ಸಮಾಜ ಜಾಗೃತಿ ಮಾಡಿದರೆ ಆ ವಿದ್ಯೆಗೆ ಭೂಷಣವಷ್ಟೆ.

★

ಬೋಳು ಬಸವನ ಬೊಂತೆ - ೮

ಮದುವೆ—ಮಡದಿ—ಮನೆ

—ಪಿ. ಬಸವಣ್ಣ

ಕಣ್ಣಿಲ್ಲದಿರಲೆಷ್ಟು ಕಷ್ಟವೋ ಜೀವನದಿ
ಹೆಣ್ಣಿಲ್ಲದಿರಲಷ್ಟೆ ಕಷ್ಟ ಜಗದಿ
ಹೆಣ್ಣಿಗಾಸರೆ ಗಂಡು ಆದೊಡಂ.ಪರಿಕಿಸಲು
ಹೆಣ್ಣು ಗಂಡಿನ ಕಣ್ಣು—ಬೋಳುಬಸವ ॥ ೧ ॥

ಹೆಣ್ಣಿರಲು ಮನೆ ಆಸ್ತಿ ಮಣ್ಣುಹೊನ್ನಿರಬೇಕು
ಹೆಣ್ಣಿಲ್ಲದಿರಲಿಕ್ಕವೇತಕ್ಕೆ ಬೇಕು ?
ಹೆಣ್ಣಿರದ ಗಂಡು ಮನೆಮಾಡನದರಿಂದ
ಹೆಣ್ಣು ತಾ ಮನೆಯಲ್ತೆ—ಬೋಳುಬಸವ ॥ ೨ ॥

ತಪ್ಪಿರದೆ ನಡತೆಯಲಿ ಒಪ್ಪವಿರೆ ನುಡಿಯಲ್ಲಿ
ಕಪ್ಪಾದರೇನಂತೆ ಕನ್ನೆ ತಾನು
ಕಪ್ಪೆಂದು ಹಳಿಯದಲೆ ಒಪ್ಪಿ ತಾಳಿಯ ಕಟ್ಟು
ಕಪ್ಪು ಕತ್ತುರಿಯಲ್ತೆ—ಬೋಳುಬಸವ ॥ ೩ ॥

ಕಣ್ಣಕುಕ್ಕುವ ಬಣ್ಣ ಹೆಣ್ಣಿಗಿರಲೇನು ಫಲ
ಕಣ್ಣಾಗದಿರಲವಳು ಸಂಸಾರದ
ತಣ್ಣನೆಯ ಸಂಸಾರಸುಖ ಪಡೆಯೆ ನೀ ಬರಿಯ
ಬಣ್ಣಕ್ಕೆ ಸೋಲದಿರು -- ಬೋಳುಬಸವ ॥ ೪ ॥

ನೋಡಿ ಹೆಣ್ಣನು ಗಂಡು ಮೆಚ್ಚದಿದ್ದರು ಕೂಡ
ಮಾಡ್ಗದಿದ್ದರು ಮದುವೆ ಸಾಮಾನನು
ಬೇಡವೆಂದರೆ ಬಿಡದೆ ಆಗುವುವು ಮದುವೆಗಳು
ಕೂಡಿಬರೆ ಕಂಕಣವು—ಬೋಳುಬಸವ ॥ ೫ ॥

ಮದುಮಕ್ಕಳೊಪ್ಪಿ ಮೇಣ್ಮದುವೆ ಮನೆಯುವರೊಪ್ಪಿ
ಮದುವೆ ಸಾಮಾನುಗಳ ಸಿದ್ಧಗೊಳಿಸಿ
ಮದುವಚಪ್ಪರವಿಕ್ಕಿ ನಿಲ್ಲುವುವು ಮದುವೆಗಳು
ಒದಗದಿರೆ ಕಂಕಣವು—ಬೋಳುಬಸವ ॥ ೬ ॥

ಪಾವಿತ್ರ್ಯವೈ ತುಂಗಭದ್ರೆಯರ ಸಂಗಮವು
ಪಾವಿತ್ರ್ಯತರ ಗಂಗೆಯಮುನೆಯರದು
ಭಾವೈಕ್ಯ ವಧುವರರ ಮಧುರತರಸಂಗಮವು
ಪಾವಿತ್ರ್ಯತಮ ಜಗದಿ—ಬೋಳುಬಸವ ॥ ೭ ॥

ಮದುವೆಯೆಂಬುವುದೊಂದು ಸೋಜಿಗದ ಸಮ್ಮಿಲನ
ಮೊದಲಲ್ಲೆ ವಿಧಿ ಬಿಗಿದ ಅನುಬಂಧನ
ಹದವರಿತು ಸಂಸಾರನಡೆಸಿದರೆ ನಿಜನಾಕ
ಹದಗೆಡಲು ನಿಜನರಕ—ಬೋಳುಬಸವ ॥ ೮ ॥

ಮೆರೆವ ವಿದ್ಯುದ್ದೀಪ ಸೂರ್ಯಾಗ್ನಿ ಶಶಿತಾರೆ
ಇರಲೇನು ಲೋಕವನು ತೊಳಗಿ ಬೆಳಗೆ
ಪುರುಷನಂ ಕಳಕೊಂಡ ಪತಿಪರಾಯಣೆ ಸತಿಗೆ
ಧರೆಯೆಲ್ಲ ಕತ್ತಲೆಯು—ಬೋಳುಬಸವ ॥ ೯ ॥

ಮನವರಿತು ನಡೆಯುತ್ತ ಇನಿದಾಗಿ ನುಡಿಯುತ್ತ
ಮನಸಾರೆ ಸೇವಿಸುತ ಸತತ ನಗುತ
ಮನಕೆ ಸಂತಸವೀವ ಮನೆಯೊಡತಿಯಿಲ್ಲದಿರೆ
ಮನೆಯೇನು ವನವೇನು ಬೋಳುಬಸವ ॥ ೧೦ ॥

ನೋಯುತ್ತ ಬಹುವಿಧದಿ ಕಾಯುತಿಹ ದೇಹವದು
ಹೇಯಮಲಮೂತ್ರದೊಳು ಹೊರಳುತಿರಲು
ಹೇಯಗೊಳ್ಳದೆ ಮನದಿ ಮುದದಿಂದಲುಪಚರಿಪ
ಭಾರ್ಯೆಗಿಂತಾಪ್ತರೇಂ-ಬೋಳುಬಸವ ॥ ೧೧ ॥

ಸತಿಯ ಕೊರಳಿಂಚರಕೆ ಸಮವೆ ಕೋಗಿಲೆದನಿಯು
ಸತಿಪಾಕಕಿಂ ಮಿಗಿಲೆ ನಳಪಾಕವು
ಸತಿಯ ನಲ್ಮಾತಿಗೆ ಸಾಟಿಯೇ ಹಾಲ್ಜೇನು
ಸತಿಮೋಹಿ ಸತ್ಪತಿಗೆ—ಬೋಳುಬಸವ ॥ ೧೨ ॥

★ ★

ಓಂ ಶ್ರೀ ಗುರುಬಸವ ಲಿಂಗಾಯನಮಃ

ಆನು ಒಲಿದಂತೆ ಹಾಡುವೆ

—ಜಗದ್ಗುರು ಮಾತೆಮಹಾದೇವಿ

ಬೆಂಗಳೂರು ವಿಶ್ವವಿದ್ಯಾಲಯವು ಮೊದಲ ವರ್ಷದ ಪದವೀ ಪರೀಕ್ಷೆಯ ವಿದ್ಯಾರ್ಥಿಗಳಿಗಾಗಿ "ಮಧ್ಯಕಾಲೀನ ಕನ್ನಡ ಕವಿತೆ" ಎಂಬ ಕಾವ್ಯ ಸಂಕಲನವೊಂದನ್ನು ಪಠ್ಯವಾಗಿ ಗೊತ್ತುಪಡಿಸಿದೆ. ಈ ಕೃತಿಯು ಹನ್ನೆರಡು ಕಾವ್ಯಭಾಗಗಳನ್ನೊಳಗೊಂಡು ಮಧ್ಯಕಾಲೀನ ಕನ್ನಡ ಸಾಹಿತ್ಯದ ಸಮಗ್ರ ಪರಿಚಯವನ್ನು ಅಂಗೈಯಲ್ಲಿ ಅಂಮನೆಯನ್ನಿಟ್ಟಷ್ಟು ಸಂಕ್ಷಿಪ್ತವಾಗಿ ಮಾಡಿಕೊಡುತ್ತದೆ. ಇದರಲ್ಲಿ ಮೊದಲನೆಯ ಕಾವ್ಯಭಾಗ "ಆನು ಒಲಿದಂತೆ ಹಾಡುವೆ". ಇದು ವಚನ ವಾಙ್ಮಯದ ತಪೋವನದಿಂದ ಆರಿಸಿದ ಕೆಲವು ವಚನಗಳ ಒಂದು ಕಾವ್ಯಮಾಲೆಯಾಗಿದೆ. ವಸ್ತುನಿಷ್ಠ ಮಾದರಿಯಲ್ಲಿ, ವಿಶಿಷ್ಟ ಶೀರ್ಷಿಕೆಯ ಕೆಳಗೆ ವಚನಗಳನ್ನು ಆಯ್ಕೆ ಮಾಡದೆ, ವಿವಿಧ ಶರಣರ ವಚನಗಳನ್ನು ಆರಿಸಿ, ಪೋಣಿಸಲಾಗಿದೆ.

ಈ ವಿಷಯವನ್ನು ಇದ್ದಕ್ಕಿದ್ದಂತೆಯೇ ಆರಿಸಿಕೊಂಡ ಕಾರಣವೇನು ? ಓದುಗರಿಗೆ ಕುತೂಹಲವಾಗಬಹುದು. ಒಂದು ದಿನ ಓರ್ವ ಅಧ್ಯಾಪಕರು ಬಂದು ಅರ್ಥವಾಗದ ಒಂದೆರಡು ವಚನಗಳ ಬಗ್ಗೆ ಕೇಳಿದರು. ಅವರಿಗೆ ಅವಶ್ಯವಿದ್ದ ವಿಚಾರ ಹೇಳಿದ ಬಳಿಕ ಅಂದರು : "ನಾನು ಒಬ್ಬ ಇಲ್ಲಿಗೆ ಬಂದೆ. ಎಷ್ಟು ಜನ ನಗರ ಜೀವನದ ಮಧ್ಯೆ ಬಿಡುವು ಮಾಡಿಕೊಂಡು ಬರಲು ಸಾಧ್ಯ ? ಮತ್ತು ವಿದ್ಯಾರ್ಥಿವೃಂದ ಬರಲು ಸಾಧ್ಯವಾಗುವುದೇ ? ನಾವು "ಕಲ್ಯಾಣ ಕಿರಣ"ದಲ್ಲಿ ಪ್ರತಿತಿಂಗಳೂ ಬರುವ 'ವಚನ ನವನೀತ'ದಲ್ಲಿ ವ್ಯಾಖ್ಯಾನ ಓದಲು ಉತ್ಸುಕರಾಗಿರುತ್ತೇವೆ. ಅದೇ ರೀತಿ ಹೆಚ್ಚು ಹೆಚ್ಚು ವಚನಗಳಿಗೆ ಮತ್ತು ಸದ್ಯದಲ್ಲಿ ವಿದ್ಯಾರ್ಥಿಗಳಾಗಿರುವವರಿಗೆ ಉಪಯೋಗವಾಗುವಂತೆ ವ್ಯಾಖ್ಯಾನವನ್ನೇಕೆ ಬರೆಯಬಾರದು. ಬಹಳ ಉಪಕಾರವಾಗುತ್ತೆ."

ಈ ಸಲಹೆ ಸೂಕ್ತವೆನಿಸಿತು. ಏಕೆ ಬರೆಯಬಾರದು ? ನಾವೇ ಸರ್ವಜ್ಞರೆಂದಲ್ಲ. ನಮಗೆ ತಿಳಿದಷ್ಟನ್ನು ಬರೆಯುವುದೆಂಬ ಪ್ರಾಮಾಣಿಕತೆಯಿಂದ. ಹೀಗೆ ಈ ತಿಂಗಳಿಂದ ಪ್ರಾರಂಭಿಸುತ್ತಿರುವೆ,–ಕೆಲವು ವಿದ್ಯಾರ್ಥಿಗಳಿಗಾದರೂ ಉಪಯೋಗವಾದೀತೆಂದು ಮತ್ತು ನಮ್ಮ ಓದುಗರೂ ಸಂತೋಷಪಟ್ಟಾರೆಂದು.

ವಚನಗಳ ಸಂಕಲನ ಕಾವ್ಯಭಾಗಕ್ಕೆ ನೇರವಾದ ಹೆಸರಿಡದೆ "ಆನು ಒಲಿದಂತೆ ಹಾಡುವೆ" ಎಂದು ನಾಮಕರಣ ಮಾಡಿದ್ದಾರೆ ಸಂಕಲನಕಾರರು. ಒಂದು ದೃಷ್ಟಿಯಿಂದ 'ಒಲಿದಂತೆ ಹಾಡುವುದೇ' ವಚನ ಸಾಹಿತ್ಯದ, ಅದು ಪ್ರತಿಪಾದಿಸುವ ಧರ್ಮದ ಜೀವಾಳವೂ ಆದ ಕಾರಣ ಶೀರ್ಷಿಕೆ ಸೂಕ್ತವೆನಿಸದಿರದು.

ಪದ್ಯದಷ್ಟು ಬಿಗಿಯೂ ಅಲ್ಲದ, ಗದ್ಯದಷ್ಟು ಸಡಿಲವೂ ಅಲ್ಲದ 'ಗದ್ಯಗೀತೆ'ಯ ರೂಪುಳ್ಳದ್ದು ವಚನ ಛಂದಸ್ಸು. ಪರಿಣಾಮಕಾರಿಯಾದ ಹೃದಯಂಗಮ ಸಾಹಿತ್ಯ ಶೈಲಿ.

೧. ವಚನ ಸಾಹಿತ್ಯ ಸ್ವಪಾಂಡಿತ್ಯ ಪ್ರದರ್ಶನಕ್ಕಾಗಿ ಬರೆದುದಲ್ಲ; ರಾಜಾಶ್ರಯ ಕೋರಿ, ರಾಜಮಹಾರಾಜರನ್ನು ಸ್ತುತಿ ಮಾಡಿ ರಚಿಸಿದುದಲ್ಲ : ತನ್ನಂತರಂಗವನ್ನು ತೆರೆದಿರಿಸುವ ಆತ್ಮಾವಲೋಕನ ಪ್ರಜ್ಞೆ, ಸಮಾಜದ ಲೋಪದೋಷಗಳನ್ನು ವಿಡಂಬಿಸುವ ವಿಮರ್ಶಾಪ್ರಜ್ಞೆ, ಸಮಾಜವನ್ನು ಸುಂದರ-ಬಂಧುರಗೊಳಿಸುವ ಕಳಕಳಿ, ಪರಮಗುರಿಯಾಗಿರುವ ಪರಮಾತ್ಮನನ್ನು ಒಲಿಸುವ ಹಂಬಲ-ಈ ಎಲ್ಲ ಸಮಾವೇಶವಾಗಿವೆ ವಚನ ಸಾಹಿತ್ಯದಲ್ಲಿ. ಒಂದು ಹೂವನ್ನು ಸಸ್ಯಶಾಸ್ತ್ರದಲ್ಲಿ "ಪರಿಪೂರ್ಣ" ಎನ್ನಬೇಕಾದರೆ ಅದಕ್ಕೆ ಸೌಂದರ್ಯ, ಸೌರಭ ಮತ್ತು ಮಕರಂದ ಮೂರೂ ಇರಬೇಕು. ಅದೇ ರೀತಿ ಸಾಹಿತ್ಯದಲ್ಲಿ ಪರಿಪೂರ್ಣತೆ ಮೂಡಬೇಕಾದರೆ ಸಾಹಿತ್ಯದ ಸೌಂದರ್ಯ, ತತ್ತ್ವದ ಗಾಂಭೀರ್ಯ, ಅನುಭವದ ಮಕರಂದ–ಮೂರೂ ಮೇಳವಾಗಬೇಕು. ಅಂಥ ಮೇಳವನ್ನು ವಚನ ಸಾಹಿತ್ಯದಲ್ಲಿ ಕಾಣಬಹುದಾಗಿದೆ.

೨. ತಾಳಮಾನ ಸರಿಸಕ್ಕೆ, ಓಜೆ-ಬಜಾವಣೆ ಲೆಕ್ಕಕ್ಕೆ ಸಿಕ್ಕಿ ಬೀಳದ, ಹೃದಯ ಭಾವನೆ ಕರಗಿ ಓತಪ್ರೋತವಾಗಿ ಹರಿಯುವ ವಾಹಿನಿ "ಒಲಿದಂತೆ ಹಾಡುವ" ವಚನ ಗೀತೆ.

೩. ಉದ್ದೇಶಪೂರ್ವಕವಾಗಿ ಲೆಕ್ಕಣಿಕೆ ಹಿಡಿದು ಕುಳಿತು, ಶಬ್ದಕೋಶವನ್ನು ಮಗ್ಗುಲಿಗೆ ಇರಿಸಿಕೊಂಡು ಕಠಿಣ ಶಬ್ದಗಳನ್ನು ಆರಿಸಿ ಹಾಕಿ, ರಚಿಸಿದ ಪಾಂಡಿತ್ಯಕ್ಕಿಂತಲೂ ಪರಿಸರ–ವಿಮರ್ಶಾಪ್ರಜ್ಞೆಗಳ ತಾಕಲಾಟದಿಂದ ಸ್ಫುರಿಸಿದ ವಿಚಾರದ ಕಿಡಿಗಳಿಲ್ಲಿವೆ.

೪. "ಆನು ಒಲಿದಂತೆ ಹಾಡುವ" ಈ ಸಾಹಿತ್ಯ ವಿಧಾನದಲ್ಲಿ ಸಂಸ್ಕೃತದ ಹಿಡಿತದಿಂದ ಧರ್ಮವನ್ನು ಪಾರು ಮಾಡುವ, ಪೂಜಾರಿಯ ಕಪಿಮುಷ್ಟಿಯಿಂದ, ಅರ್ಥವಾಗದ ಶಬ್ದಗಳ ಪಠಣದಿಂದ ಸಹೃದಯ ಸತ್ಯಾಪೇಕ್ಷಿಯೋರ್ವನನ್ನು ಬಿಡುಗಡೆ ಮಾಡುವ

ಪ್ರಯತ್ನವಿದೆ. ಲಿಂಗಪತಿ-ಶರಣಸತಿಯರ ನಡುವಿನ ಅಂತರಂಗ ಸಂಭಾಷಣೆಯಲ್ಲಿ ಪೂಜಾರಿಯನ್ನು ಅಡ್ಡ ತರುವ ಯಾಂತ್ರಿಕತೆ, ಕೃತಕತೆಯ ಬಗ್ಗೆ ತೀವ್ರ ವಿರೋಧವಿದೆ.

೫. ನವಿಲು ತಾನು ಒಲಿದಂತೆ ನರ್ತಿಸುವುದು, ಕೋಗಿಲೆ ತಾನು ಒಲಿದಂತೆ ಹಾಡುವುದು. ಕುಸುಮ ತಾನು ಒಲಿದಂತೆ ಅರಳುವುದು. ಹಾಗೆ ಅನುಭಾವಿಯು ತಾನು ಒಲಿದಂತೆ ಹಾಡಿದಾಗಲೇ ಅಲ್ಲಿ ಭಾವನೆಗಳ ತರಂಗ ಮಿಡಿಯಬಲ್ಲುದು. ಹೇಗೆ ಕೋಗಿಲೆಗೆ ತನ್ನಾನಂದಕ್ಕೆ ಹಾಡುವ ಹವ್ಯಾಸವುಂಟೋ, ಮತ್ತು ತನ್ನ ಸಂಗಾತಿಯನ್ನು ಆಹ್ವಾನಿಸಲಿಕ್ಕೆ ಕೂಗುವುದೋ ಹಾಗೆಯೇ ಶರಣನ ಸಾಹಿತ್ಯರಚನೆ ತನ್ನಂತರಂಗದ ಮೊರೆತದ ಅಭಿವ್ಯಕ್ತಿ, ತನ್ನ ಆನಂದದ ಲಹರಿಯ ಪ್ರವಹನ : ಮತ್ತು ಉದ್ದೇಶ ತನ್ನ ಒಡೆಯನ, ಇನಿಯನ ಒಲುಮೆಗೆ ಆಹ್ವಾನ. ಹೀಗೆ ಎಲ್ಲ ದೃಷ್ಟಿಯಿಂದಲೂ "ಆನು ಒಲಿದಂತೆ ಹಾಡುವೆ" ಒಂದು ಸೂಕ್ತ ಶೀರ್ಷಿಕೆ.

ಈ ವಚನ ಸಂಕಲನ ಆರಂಭವಾಗುವುದು ದಾಸಿಮಯ್ಯನವರ ವಚನಗಳಿಂದ. ರಾಮನಾಥ ಎಂಬ ವಚನ ಮುದ್ರಿಕೆಯಿಂದ ಪ್ರಸಿದ್ಧನಾದ ಈ ಶರಣನ ನಿಜ ಹೆಸರು "ಜೇಡರ ದಾಸಿಮಯ್ಯ". ಕಾಲ ಸು. ೧೧೪೦. ಬಸವಣ್ಣನವರ ಸಮಕಾಲೀನ. ಅಕ್ಕ ಮಹಾದೇವಿ ಅನುಭವ ಮಂಟಪಕ್ಕೆ ಬಂದಾಗ ಈ ಶರಣನು ಅಲ್ಲಿದ್ದ ಬಗ್ಗೆ ಅಕ್ಕಮಹಾದೇವಿಯ ಒಂದು ವಚನದಲ್ಲಿ ಉಲ್ಲೇಖವಿದೆ :

> ಅನಿಮಿಷನಲ್ಲಮಯ್ಯ, ಮರುಳಶಂಕರಯ್ಯ, ಕೋಲಶಾಂತಯ್ಯ
> ಮಾದಾರ ಧೂಳಯ್ಯ ...ದಾಸಿಮಯ್ಯ ಭಂಡಾರಿ ಬಸವರಾಜ ಮುಖ್ಯವಾದ
> ಚನ್ನಮಲ್ಲಿಕಾರ್ಜುನನ ಶರಣರಿಗೆ ನಮೋ ನಮೋ ಎಂಬೆನು. ಅ. ವ. ೨೦೧

ಮತ್ತು ಬಸವಣ್ಣನವರು ತಮ್ಮ ವಚನದಲ್ಲಿ :

> "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ, ಕಷ್ಟತನದ ಹೊರೆಯ ಹೊರಿಸದಿರಯ್ಯ
> ಕಕ್ಕಯ್ಯನೊಕ್ಕುದನ್ನಿಕ್ಕ ನೋಡಯ್ಯ
> ದಾಸಯ್ಯ ಶಿವದಾನವೆರೆಯ ನೋಡಯ್ಯ
> ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ.
> ಉನ್ನತ ಮಹಿಮ ಕೂಡಲಸಂಗಮದೇವಾ ಶಿವಧೋ ಶಿವಧೋ."
>
> ಬ. ಷ. ವ: ೩೪೫

ಇದರಲ್ಲಿ ಹೇಳುತ್ತಾರೆ : "ಉತ್ತಮ ಜಾತಿಯಲ್ಲಿ ಹುಟ್ಟಿದವನೆಂಬ ಕೃತಕ ಗೌರವ ನೀಡಿ ಎನ್ನನ್ನು ಕರೆಯದಿರಿ. ಆಗ ನನಗೆ ಕಕ್ಕಯ್ಯನ ಪ್ರಸಾದ ಸಿಕ್ಕದು, ದಾಸಯ್ಯನ

ಮನೆಯ ಮಜ್ಜಿಗೆ ಲಭ್ಯವಾಗದು, ಮಹಾಮಹಿಮ ಚನ್ನಯ್ಯನ ಹೃದಯದಲ್ಲಿ ಮನ್ನಣೆ ದೊರೆಯದು." ಎನ್ನುವಲ್ಲಿ ಅವರು ಸಮಕಾಲೀನರೆಂಬ ಧೋರಣೆಯಿದೆ.

ಇಂಥ ವಯೋವೃದ್ಧ, ಜ್ಞಾನವೃದ್ಧ ಜೇಡರ ದಾಸಿಮಯ್ಯನ ವಚನಗಳು ತುಂಬಾ ಸರಳ ಮತ್ತು ಸುಂದರ. ಅವುಗಳ ಅರ್ಥವನ್ನು ತಿಳಿಯಲು ಯತ್ನಿಸುವಾ.

> ೧. ಕರಿಯನಿತ್ತಡೆ ಒಲ್ಲೆ ಸಿರಿಯನಿತ್ತಡೆ ಒಲ್ಲೆ
> ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
> ನಿಮ್ಮ ಶರಣರ ಸೂಳ್ನುಡಿಯನೊಂದರಗಳಿಗೆಯಿತ್ತಡೆ
> ನಿಮ್ಮನಿತ್ತೆ ಕಾಣಾ ರಾಮನಾಥ.

ಆನೆಯನ್ನಿತ್ತರೂ ಬೇಡ, ಅತುಳ ಐಶ್ವರ್ಯವನ್ನಿತ್ತರೂ ಬೇಡ, ಬೃಹದಾದ ರಾಜ್ಯವನ್ನೇ ದಾನವಾಗಿತ್ತರೂ ಬೇಡ. ಪರಮಾತ್ಮನಿಗೊಲಿದ ಮತ್ತು ಪರಮಾತ್ಮನೊಲಿದ ಶರಣರ ಸೂಳ್ನುಡಿಗಳನ್ನು ಅರ್ಧ ಗಂಟೆಯಷ್ಟು ಕಾಲಾವಧಿ ಕೊಟ್ಟರೆ ಸಾಕು ; ಆಗ ದೇವನನ್ನೇ ಕೊಟ್ಟುಬಿಡಲು ಸಾಧ್ಯ.

> ೨. ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೇ
> ಕಡೆಗೀಲು ಬಂಡಿಗಾಧಾರ
> ಕಡುದರ್ಪವೇರಿದ ಒಡಲೆಂಬ ಬಂಡಿಗೆ
> ಮೃಡಭಕ್ತರ ನುಡಿಗಡಣವೇ ಕಡೆಗೀಲು ಕಾಣಾ ರಾಮನಾಥ.

ಕಡೆಗೀಲನ್ನು ಹಾಕದಿರುವ ಬಂಡಿ ಎಲ್ಲಿ ಬೇಕಾದರೂ ಮಗ್ಗುಲಾಗಿ ಬೀಳಬಹುದು. ಉಳಿದೆಲ್ಲ ನೂರೆಂಟು ಸಾಮಾನುಗಳು ಆ ಬಂಡಿಗಿದ್ದರೂ ಕೀಲು ಇಲ್ಲದಿದ್ದರೆ ಆ ಬಂಡಿ ನಿಷ್ಪ್ರಯೋಜಕ. ಹಾಗೆಯೇ ಮೃಡನನ್ನರಿದ ಭಕ್ತರ ಅನುಭವವಾಗಣೆಳು, ಅಜ್ಞಾನಿಗಳ ಕಡುದರ್ಪವೇರಿದ ಒಡಲ ಬಂಡಿಗಳಿಗೆ ಕಡೆಗೀಲುಗಳು.

ಈ ಎರಡೂ ವಚನಗಳ ವಿಚಾರ ಒಂದೇ ಇದೆ. ಶರಣರ, ಮಹವನರಿದ ಮಹಂತರ, ಸತ್ಯವನರಿದ ಸತ್ಪುರುಷರ ವಿಚಾರಗಳು ಅಥವಾ ಮಾರ್ಗದರ್ಶಕ ಮಾತಿನ ಮಿಂಚುಗಳು ಎಷ್ಟೊಂದು ಮಹತ್ವಪೂರ್ಣ ಎಂಬ ವಿವರಣೆಯಿದೆ. 'ಸೂಳ್ನುಡಿ'ಗಳೆಂದರೆ ತತ್ತ್ವದ ಮಾತುಗಳು. ಆಂಗ್ಲಭಾಷೆಯ Quotations ಎಂಬ ಪದಕ್ಕೆ ಅತ್ಯಂತ ಸೂಕ್ತ ಅನುವಾದವಾಗಿಯೂ ಸೂಳ್ನುಡಿಯನ್ನು ಬಳಸಬಹುದು.

ಅನುಭವಿಗಳ ವಾಣಿ ಮಹತ್ವಪೂರ್ಣ, ಅವರ ಜೀವನಾನುಭವದ ರಸಘಟ್ಟಿ. ಮಾರ್ಗದರ್ಶಕ ದೀಪ್ತಿ, ಮನದ ಕತ್ತಲೆಯನಳಿವ ಅರಿವಿನ ಜ್ಯೋತಿ. ಸಾಕಲು ಭಾರ

ವಾದ ಆಸೆ. ಮನಸ್ಸನ್ನು ಆಮಿಷದಿಂದ-ದುರಾಶೆಯಿಂದ ಹತಿಸುವ ಸಿರಿ. ಯಾವಾಗ ಕೈ ಬಿಟ್ಟೀತೋ ಎಂಬ ಮನೋದ್ವೇಗಕ್ಕೆ ಈಡು ಮಾಡುವ, ತಲೆ ಮೇಲೆ ತೂಗಾಡುವ ಕತ್ತಿಯಂತಹ ರಾಜ್ಯಾಧಿಕಾರ - ಈ ಎಲ್ಲ ಒಂದು ದೃಷ್ಟಿಯಿಂದ ಬಂಧನಗಳೇ. ಆದ ಕಾರಣ ಮುಮುಕ್ಷುವಿಗವು ಬೇಡ. ಶರಣರ ಸೊಳ್ನುಡಿಯ ಒಂದರ್ಥ ಗಳಿಗೆ ಕಾಲ ಕೊಟ್ಟುದೇ ಆದರೆ, ದೇವನನ್ನು ಸಹ ತ್ಯಾಗ ಮಾಡಲು ಸಿದ್ಧವಂತೆ ! ಇದರರ್ಥ ದೇವರನ್ನು ತೊರೆಯುವರೆಂದಲ್ಲ ; ಅವನ ದಿವ್ಯಾನುಭವಕ್ಕಿಂತ ಮಿಗಿಲಾದುದು ಶರಣರ ಸಂಗ ಎಂಬ ಭಾವವಿದೆ ಅಷ್ಟೆ. ಸುಂದರವಾದ ತೈಲಚಿತ್ರವೊಂದು ಚೌಕಟ್ಟಿನಲ್ಲಿ (frame) ಹಾಕಿಟ್ಟಾಗಲೇ ಅದು ಅರ್ಥಸಹಿತ. ಅದರ ಮೌಲ್ಯದ ಮಾಪನ ಸಾಧ್ಯ. ಹಾಗೆ ದಿವ್ಯಾನುಭವ (Mystic Experience) ದ ತೈಲಚಿತ್ರವು ಶರಣರ ಸಂಗದ ಚೌಕಟ್ಟಿನಲ್ಲಿರಬೇಕೆಂಬ ಭಾವ ಈ ವಚನದಲ್ಲಿದೆ.

ಇನ್ನೊಂದು ವಚನದಲ್ಲಿ ಸಮಾಜಕ್ಕೆ ನೈತಿಕ–ಧಾರ್ಮಿಕ ಮೌಲ್ಯಗಳ ಅವಶ್ಯಕತೆ ಏನೆಂಬ ಮಾರ್ಗದರ್ಶನವಿದೆ. ಕೀಲು ಇಲ್ಲದ ಬಂಡಿ ಉರುಳಿ ಬೀಳುವಂತೆ ನೈತಿಕ, ಧಾರ್ಮಿಕ ಮೌಲ್ಯಗಳನ್ನೊಳಗೊಂಡ ಶರಣರ ನುಡಿಮುತ್ತುಗಳೆಂಬ ಕಡೆಗೀಲುಗಳು ವ್ಯಕ್ತಿ-ಸಮಾಜಗಳಿಗೆ ಹಾಕಲ್ಪಡದಿದ್ದರೆ ಅವು ಹಾದಿ ತಪ್ಪದಿರವು. ದರ್ಪವೇರಿದ, ಬೀಗಿದ ಸ್ಥಿತಿಗೆ ಏರಿ ಪತನಗೊಳ್ಳದಿರವು. ಸಮುದ್ರಯಾನ ಕೈಗೊಂಡ ನಾವಿಕನಿಗೆ ದಿಕ್ಸೂಚಿ ಸಹಾಯಕವಾಗುವಂತೆ, ಜೀವನ ನೌಕೆಯನ್ನೇರಿ ಲೋಕಸಾಗರದಲ್ಲಿ ಹೊರಟ ಜೀವಿಯು ಮುಕ್ತಿದಡ ಮುಟ್ಟಲು ಶರಣರ ನುಡಿಗಡಣ ದಿಕ್ಸೂಚಿಗಳು.

ಶರೀರದಲ್ಲಿಹ ಆತ್ಮ

೩. ಮರನೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ.
ಶರೀರದೊಳಗೆ ಆತ್ಮವನಾರೂ ಕಾಣದಂತಿರಿಸಿದೆ.
ನೀ ಬೆರಸಿಹ ಭೇದಕ್ಕೆ ಬೆರಗಾದೆನಯ್ಯ ರಾಮನಾಥ.

ಕಟ್ಟಿಗೆಯೊಳಗೆ ಸುಪ್ತವಾಗಿ, ಗುಪ್ತವಾಗಿ, ಅವ್ಯಕ್ತವಾಗಿ ಇರುವ ಅಗ್ನಿಯಂತೆ, ನೊರೆ ಹಾಲೊಳಗೆ ಕಂಪಾದ ತುಪ್ಪ ಗೋಚರವಾಗದಿರುವಂತೆ, ಶರೀರದಲ್ಲಿ ಆತ್ಮವು ಅಗೋಚರವಾಗಿರುತ್ತದೆ. ಇಲ್ಲಿ ಆಗಿರುವ ಒಂದು ಸೋಜಿಗದ ಸಂಯೋಜನೆಯ ಬಗ್ಗೆ ಆಶ್ಚರ್ಯಪಡುತ್ತಾರೆ ದಾಸಿಮಯ್ಯನವರು.

ದೇಹವು ಪ್ರಕೃತಿಯ ಕೂಸು : ಆತ್ಮವು ಪರಮಾತ್ಮನ ಅಂಶ. ದೇಹವು ಜಡ, ಆತ್ಮವು ಚೈತನ್ಯ. ದೇಹವು ವಾಹನ, ಆತ್ಮವು ವಾಹಕ. ಆದರೆ ಇವೆರಡರ

ಸಂಯೋಜನೆ ತೀರಾ ವಿಲಕ್ಷಣ. ಆತ್ಮವಿಲ್ಲದ ದೇಹ ನಿರ್ಜೀವ : ದೇಹವಿಲ್ಲದ ಆತ್ಮ ನಿಸ್ಸಹಾಯಕ, ಪರಮ ಚೈತನ್ಯಮಯವಾದ ಆತ್ಮವು ದೇಹದಲ್ಲಿ ಗುಪ್ತ-ಸುಪ್ತವಾಗಿ ಇರುತ್ತದೆ. ಅದಕ್ಕೆ ಸ್ವಲ್ಪ ಸಂಸ್ಕಾರದ ಅಗತ್ಯವಿದೆ. ಮರದೊಳಗೆ ಸುಪ್ತವಾಗಿರುವ ಬೆಂಕಿಗೆ ಜಾಗೃತಗೊಳ್ಳಲು ಹೊರಗಿನ ಕಿಡಿಯೊಂದರ ಅವಶ್ಯಕತೆ ಇರುವಂತೆ, ಹಾಲಿನ ಗರ್ಭದಲ್ಲಿ ಹುದುಗಿರುವ ತುಪ್ಪ ಗಟ್ಟಿಗೊಳ್ಳಲು ಅನೇಕ ಸಂಸ್ಕಾರಗಳ ಅವಶ್ಯಕತೆ ಇರುವಂತೆ, ದೇಹದ ಮರೆಯಲ್ಲಿರುವ ಆತ್ಮ ಜಾಗೃತಗೊಳ್ಳಲೂ, ಸಂಸ್ಕಾರ ಬೇಕು.

ಬೆಂಕಿಯ ಸಂಪರ್ಕದಿಂದ ದಗ್ಧಗೊಳ್ಳುವ ಕಟ್ಟಿಗೆ ತನ್ನ ಹೊಟ್ಟೆಯಲ್ಲೇ ಬೆಂಕಿಯನ್ನು ಅಡಗಿಸಿಕೊಂಡಿರುವದು ಸೋಜಿಗವಲ್ಲದೆ ಮತ್ತೇನು ? ಕಾಯಗಳನ್ನು ದಗ್ಧಗೊಳಿಸಬಲ್ಲ ಆತ್ಮದ ಚಿದಗ್ನಿಯು ಪ್ರಕೃತಿಯ ಜಾಲದಲ್ಲಿ ಸಿಕ್ಕಿಬಿದ್ದು ಬಂಧಿತವಾಗಿರುವುದು ; ಸಂಸ್ಕಾರಾನಂತರ ಅದುವೇ ಜಾಗೃತವಾಗಿ ತನ್ನನ್ನವಧರಿಸಿಕೊಂಡಿರುವ ಶರೀರದ ಗುಣಗಳನ್ನೇ ಕಳೆಯುವುದು ಸೋಜಿಗವಲ್ಲವೆ ? ಇಂಥ ಎಲ್ಲ ವಿಲಕ್ಷಣ ಸಂಯೋಜನೆಗಳು (combinations) ದೇವರ ಲೀಲೆ ಎಂದು ಈ ಶರಣನ ಅಭಿಪ್ರಾಯ.

ಮಾಯೆಯ ಮುಸುಕು

೪. ತಾಯಗರ್ಭದ ಶಿಶು ತಾಯ ಕುರುಹನರಿಯದು.
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು.
ಮಾಯಾ ಮೋಹದಲ್ಲಿಪ್ಪ ಭಕ್ತರು ದೇವರನರಿಯರು.
ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ ರಾಮನಾಥ.

ತಾಯಗರ್ಭದಲ್ಲಿಹ ಮಗು ತಾಯಿಯ ಅಸ್ತಿತ್ವವನ್ನರಿಯದು, ಪ್ರೇಮವನ್ನರಿಯದು. ಆಕೆಯ ಇರುವನ್ನರಿದು ಆನಂದಿಸದು. ಗರ್ಭದಲ್ಲಿಹ ಶಿಶುವಿನ ರೂಪ, ಗುಣಗಳನ್ನು ತಾಯಿಯು ಅರಿಯಳು. ಏಕೆಂದರೆ ಯಾವುದೋ ಒಂದು ಆವರಣ ಅವರೀರ್ವರನ್ನು ಬೇರ್ಪಡಿಸಿದೆ. ಹಾಗೆಯೇ ಅಜ್ಞಾನ-ಮೋಹಗಳ ಆವರಣ ಭಕ್ತರನ್ನು ಬಂಧಿಸಿರುವ ಕಾರಣ ಅವನಿಗೆ ಕರ್ತನ ಇರುವು, ಅವನ ಪ್ರೇಮದ ಅನುಭವ ಆಗದು. ಯಾವಾಗ ಭಕ್ತನು ತನ್ನ ಮಾಯಾಮೋಹದ ಪರದೆಯನ್ನು ಹರಿದು ಪರಮಾತ್ಮನನ್ನು ಕರೆಯಲು ಸಿದ್ಧನಿಲ್ಲವೋ, ಆಗ ದೇವನ ಚಿತ್ತವೂ ಭಕ್ತನ ಕಡೆಗೆ ಹರಿಯದು. ಏಸುವು ಹೇಳುವಂತೆ "ತಟ್ಟಿರಿ, ತೆರೆಯುತ್ತದೆ" ; ತಟ್ಟದಿದ್ದರೆ ಬಾಗಿಲು ತೆರೆವುದೆಂತು ? ಸ್ವಿಚ್

ಒತ್ತದಿದ್ದರೆ ವಿದ್ಯುತ್ ಹರಿವುದೆಂತು ? ಹೀಗೆ ಅಜ್ಞಾನದ ಪರದೆ ಭಕ್ತನನ್ನು ದೇವನಿಂದ ಬೇರ್ಪಡಿಸಿರುತ್ತದೆ.

ಸಂಸ್ಕಾರವಂತರ ಲಕ್ಷಣ

೫. ಭಕ್ತಿಯ ಬಲ್ಲವರು ನಚ್ಚಿ ಮಚ್ಚಿ
ಮನವನೊಚ್ಚತಗೊಡುವರು ;
ಭಕ್ತಿಯನರಿಯದ ಬಲುಪಾಪಿ ಜೀವಿಗಳು
ಕಚ್ಚುವರು ಬೊಗಳುವರು ರಾಮನಾಥ.

ಭಕ್ತರು ನಂಬುವರು. ಪ್ರೀತಿಸುವರು. ಮನಸ್ಸನ್ನು ತಲ್ಲೀನಗೊಳಿಸುವರು. ಭಕ್ತಿಯ ಸೋಂಕೂ ಇಲ್ಲದವರು ಸದಾ ಕಚ್ಚುತ್ತ, ಬೊಗಳುತ್ತಲಿರುವರು.

ಅಧ್ಯಾತ್ಮ ಜೀವಿಗಳು, ಸಂಸ್ಕಾರವಂತರು ದೇವನನ್ನು ನಂಬುವರು ; ಪ್ರೇಮಿಸಿ ಆರಾಧಿಸುವರು, ತಮ್ಮ ಮನವನ್ನು ಅವನಲ್ಲಿ ಲೀಯಮಾಡುವರು. ಭಕ್ತಿಯ ಸಂಸ್ಕಾರವಿಲ್ಲದ, ಅಧ್ಯಾತ್ಮ ಜೀವಿಗಳಲ್ಲದವರು ದೇವರಿಲ್ಲ, ಧರ್ಮವಿಲ್ಲ, ಮುಕ್ತಿಯಿಲ್ಲ ಎಂದು ಗಳಹುವದೇ ಅಲ್ಲದೇ ಸಜ್ಜನರನ್ನು, ಭಕ್ತಿ ಮಾಡುವವರನ್ನು ನಿಂದಿಸುವರು, ವಿಘ್ನ ಒಡ್ಡಲು ಎಳಸುವರು.

ದೇವ-ಭಕ್ತ ಸಂಬಂಧದ ದೃಷ್ಟಿ ಇದಾದರೆ, ವ್ಯಕ್ತಿ-ವ್ಯಕ್ತಿಗಳ ಸಂಬಂಧದಿಂದಲೂ ಈ ವಚನಕ್ಕೆ ಅರ್ಥಮಾಡಬಹುದು. ಅಧ್ಯಾತ್ಮ ಸಂಸ್ಕಾರಗೊಂಡ ಸುಸಂಸ್ಕೃತರು ಬೇರೆ ಸಜ್ಜನರು ಹೇಳುವ ಜ್ಞಾನದ ಮಾತುಗಳಲ್ಲಿ ವಿಶ್ವಾಸವಿಡುವರು, ಹೇಳುವವರನ್ನು ಗೌರವಿಸಿ, ಅವರ ಹಿತೋಪದೇಶವನ್ನು ಅನುಷ್ಠಾನಕ್ಕೆ ತರಲು ಯತ್ನಿಸುವರು. ಈ ಯಾವ ಸಂಸ್ಕಾರವಿಲ್ಲದವರು ಬುದ್ಧಿವಾದ ಹೇಳುವ, ಹಿತಮಾಡಬರುವ ಮಹಂತರಿಗೆ ಕಚ್ಚಿ, ಜೊಗಳಿ ತೊಂದರೆ ಕೊಟ್ಟು ನಿಂದಿಸುವರು.

ಮಧ್ಯಸ್ಥಿಕೆ ಬೇಡ

೬. ಸತಿಯರ ಸಂಗವನು
ಅತಿಶಯದ ಗ್ರಾಸವನು
ಪೃಥಿವಿಗೀಶ್ವರನ ಪೂಜೆಯನು
ಅರಿವುಳ್ಳಡೆ ಹೆರರ ಕೈಯಿಂದ
ಮಾಡಿಸುವರೇ ರಾಮನಾಥ ?

ಸ್ತ್ರೀ ಸೌಖ್ಯವನ್ನು, ಭೋಜನ ಸುಖವನ್ನು ಬೇರೆಯವರಿಂದ ಯಾವ ಮೂರ್ಖನೂ ಮಾಡಿಸನು; ಮಾಡಿಸಲೂ ಸಾಧ್ಯವಿಲ್ಲ. ಹಾಗೆಯೇ ತಾನೇ ದೇವನ ಪೂಜೆ ಮಾಡ ಬೇಕಲ್ಲದೆ ಇನ್ನೊಬ್ಬರಿಂದ ಮಾಡಿಸಲುಬಹುದೆ ?

ಇಲ್ಲಿ ಪೂಜಾರಿಯ ಮಧ್ಯಸ್ಥಿಕೆಯನ್ನು ಕಠೋರ ಬುದ್ಧಿವಾದದೊಡನೆ ತೊಡೆದು ಹಾಕುತ್ತಿದ್ದಾರೆ ದಾಸಿಮಯ್ಯನವರು. ತೀರಾ ಖಾಯಿಲೆ ಉಲ್ಬಣಿಸಿದಾಗ ಶಸ್ತ್ರ ಚಿಕಿತ್ಸೆ ಅನಿವಾರ್ಯವಷ್ಟೆ. ಪೂಜಾರಿ ಪದ್ಧತಿಯಿಂದ ಆಗಿರುವ ಧಾರ್ಮಿಕ ಅಸಮಾನತೆ, ಸ್ವಾತಂತ್ರ್ಯಹರಣಗಳ ನಿರ್ಮೂಲನೆಗೆ ಶರಣರು ಶಸ್ತ್ರಚಿಕಿತ್ಸೆ ಮಾಡ ಬಯಸಿದರು. "ಪೂಜಾರಿಯ ಮೂಲಕವೇ ಪೂಜಿಸಬೇಕು" ಎಂಬ ಶತಮಾನಗಳಿಂದ ಬೇರು ಬಿಟ್ಟ ಮೂಢನಂಬಿಕೆಯನ್ನು ಖಂಡತುಂಡವಾಗಿ ಟೀಕಿಸಿದರು. "ತನಗೆ ಇಚ್ಛೆಯಾದಾಗ ಪತ್ನಿಯ ಸೌಖ್ಯ ಹೊಂದುವಂತೆ, ನಾಲಿಗೆ ರುಚಿಯ ತೃಪ್ತಿಗಾಗಿ ತಾನೇ ವಿಶೇಷ ಭೋಜನ ಸವಿಯುವಂತೆ ದೇವನ ಸಾಮರಸ್ಯವನ್ನು, ದಿವ್ಯಾನುಭವದ ಬಾನವನ್ನು ತಾನೇ ಭುಂಜಿಸಬೇಕು. ಹೇಗೆ ಆ ಎರಡನ್ನು ಬಾಡಿಗೆ ಕೊಟ್ಟು ಮಾಡಿಸಲು ಬರದೋ, ಮಾಡಿಸಿದರೆ ಮೂರ್ಖರಲ್ಲಿ ಮೂರ್ಖನೆನ್ನಬೇಕೋ. ಹಾಗೆ ಬಾಡಿಗೆ ಕೊಟ್ಟು ದೇವರ ಪೂಜೆ ಮಾಡಿಸುವವನು ಅರಿವು ಶೂನ್ಯವಾದವನೇ ಸರಿ ! ಜಪತಪ ಬರದಿದ್ದರೂ ಚಿಂತೆ ಯಿಲ್ಲ. ಆನಂದಕ್ಕಾಗಿ ಮಾಡುವ ಮುಗ್ಧ ಭಕ್ತನ ಪೂಜೆಗೆ ದೇವನೊಲಿವನೇ ವಿನಾ, ಹಣ ಪಡೆದು ಯಾಂತ್ರಿಕವಾಗಿ ಪೂಜಿಸುವ ಪೂಜಾರಿಯ ಕ್ರಿಯೆಗಲ್ಲ.

ಶರಣನ ಅಡಿಯಾಳು

೭. ಎತ್ತಪ್ಪೆ ಶರಣಂಗೆ ತೊತ್ತಪ್ಪೆ ಶರಣಂಗೆ
ಭೃತ್ಯನಾಗಿ ಸದ್‌ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ
ಕರ್ತಾರ ನಿನಗೆ ಹೊಡೆವಡುವ ಭಕ್ತರ ಮನೆಯ
ಹಿತ್ತಿಲ ಬೇಲಿಯಾಗಿಪ್ಪೆನಯ್ಯ ರಾಮನಾಥ.

ಶರಣನಿಗೆ ಹತ್ತುವ ವಾಹನವಾಗಿ, ದುಡಿವ ಕಿಂಕರನಾಗಿ, ಕಡೆಗೆ ಅಷ್ಟೂ ಸಾಮೀಪ್ಯ ಸಿಗದಿದ್ದರೆ ಅವನ ಮನೆಬಾಗಿಲ ಕಾಯ್ವ ನಾಯಿಯಾಗಿ, ದೇವನಿಗೆ ಅರ್ಥ ಪ್ರಾಣ ಅಭಿ ಮಾನಗಳನ್ನು ಮೀಸಲಿಟ್ಟು ದುಡಿವವರ ಮನೆಯಲ್ಲಿ ಒಂದು ನಿರ್ಜೀವ ವಸ್ತು-ಬೇಲಿ ಯಾಗಿಯಾದರೂ ಇರುವೆನು.

ಸಜ್ಜನರ ಒಡನಾಟ, ಅವರೊಡನೆ ಸಂಭಾಷಣೆ, ಅವರ ದರ್ಶನ ಎಲ್ಲವೂ ಪುಣ್ಯದ ಪ್ರತಿಫಲಗಳಷ್ಟೇ ಅಲ್ಲ, ನರನನ್ನು ಹರನನ್ನಾಗಿ ಸಂಸ್ಕರಿಸುವ ಸಾಧನಗಳು.

ಕರಗಿದ ಸಕ್ಕರೆಯ ಪಾಕ ಅಚ್ಚಿನಲ್ಲಿ ಬಿದ್ದಾಗಲೇ ವಿವಿಧ ರೂಪಾಗುವಂತೆ, ದೇವನಿಗೆ ಶರಣಾದ ಅಹಂಭಾವವಳಿದು ದೇವನಿಗೆ ಹೃದಯದಲ್ಲಿ ಎಡೆಗೊಟ್ಟು ಶರಣರ ಸಂಗದಲ್ಲಿ; ಮನೆಯಲ್ಲಿ, ಸನಿಹದಲ್ಲಿ ಒಡನಾಡುವುದರಿಂದ ಕಾಯಗುಣ, ಮನೋಗುಣಗಳಳಿದು ಹುಟ್ಟುಗುಣ ಪ್ರಚೋದಿತವಾದ ನರಜನ್ಮ ತೊಡೆದು ದೈವೀಗುಣ ಸಹಿತವಾದ ಹರಜನ್ಮಕ್ಕೆ ವ್ಯಕ್ತಿ ಹೋಗುವ ಕಾರಣ, ಆ ಶರಣ – ಗುರುವಿನ ಸನ್ನಿಧಿಯನ್ನು ಇಲ್ಲಿ ದಾಸಿಮಯ್ಯನವರು ಬಯಸುತ್ತಾರೆ.

ಮಹಾದಾತನಾರು ?

೮. ನೀನೀಸನೀಯದೆ ಮಾನೀಸನೀವನೆ ?
ನೀನೀಸುವ ಕಾರಣ ಮಾನೀಸನೀವನು
ಆ ಮಾನಿಸನ ಹೃದಯದೊಳು ಹೊಕ್ಕು
ನೀನೀಸುವ ಕಾರಣ ನೀನೆ ಶರಣೆಂಬೆನಯ್ಯ ರಾಮನಾಥ.

ದೇವಾ, ನೀನು ಇಷ್ಟನ್ನು ಕೊಡದಿದ್ದರೆ ಮನುಷ್ಯನು ಏನು ಮಾತ್ರ ಕೊಡಬಲ್ಲ ? ನೀನು ಕೊಡಲು ಪ್ರೇರೇಪಿಸುವ ಕಾರಣ ಮನುಷ್ಯನು ಕೊಡುವನು. ಆದ್ದರಿಂದ ಮಾನವನ, ಅಂದರೆ ದಾನಿಯ ಹೃದಯದಲ್ಲಿ ಪ್ರೇರಕ ಶಕ್ತಿಯಾಗಿ ಕುಳಿತು ನೀನು ಕೊಡಿಸುವ ಕಾರಣ ನಿನಗೆ ಶರಣೆಂಬೆ.

"ಈಸು" ಎಂಬುದಕ್ಕೆ ದೇವರು ಲೋಕಕ್ಕೆ ಕೊಟ್ಟ ಇಳೆ, ಬೆಳೆ, ಗಾಳಿ, ನೀರು, ಅಗ್ನಿ- ಮುಂತಾದುವು ಎಂದು ಅರ್ಥೈಸಬಹುದು. ಅಥವಾ ಓರ್ವ ವ್ಯಕ್ತಿಗೆ ಕೊಟ್ಟ ಸಕಲ ಸಂಪತ್ತು ಎಂದೂ ಅರ್ಥೈಸಬಹುದು.

"ಇಳೆ ನಿಮ್ಮ ದಾನ" ಎಂಬ ಮತ್ತೊಂದು ವಚನದಲ್ಲಿ ನಿಸರ್ಗದಲ್ಲಿರುವ ಪಂಚಭೂತಗಳನ್ನು ದೇವನ ದಾನ ಎಂದು ಕರೆದಿದ್ದಾರೆ. ವ್ಯಕ್ತಿಗತವಾಗಿ ಅರ್ಥವಿಸಿದಾಗ ಓರ್ವ ವ್ಯಕ್ತಿಗೆ ಲಭ್ಯವಾಗಿರುವ ಧನ, ಕನಕ, ಸಂಪತ್ತು ಎಂದಾಗುವುದು. ಇಂಥೆಲ್ಲ ಸಂಪತ್ತುಗಳನ್ನು ದೇವನು ಕೊಡದಿದ್ದರೆ ಮನುಷ್ಯನೆಲ್ಲಿಂದ ಕೊಡಲು ಸಾಧ್ಯ ? ದೇವನು ಅಷ್ಟೆಲ್ಲ ಕೊಟ್ಟೂ, ದಾನ ಮಾಡುವ ಪ್ರೇರಣೆ ಕೊಡದಿದ್ದರೂ ಅವನು ಕೊಡಲಾರ. ಹೀಗೆ ಮಹಾದಾನಿಯಾದ ದೇವನು ಸಂಪದವುಳ್ಳವನಿಗೆ ಪ್ರೇರಣೆ ಕೊಟ್ಟು ಕೊಡಿಸುವ ಕಾರಣ "ಮತಿಗೆಟ್ಟು ಮಾನವರನ್ನು ಹೊಗಳದ" ನಿಜ ಶರಣನು ಪ್ರೇರಕದಾನಿಯಾದ ಪರಮಾತ್ಮನ ಪ್ರಸಾದವೆಂದರಿಯಬೇಕು.

ದೇವನಿಗೆ ಮೀಸಲಾದ ದಿವ್ಯ ಜೀವನ

೯. ಕಣ್ಣು ಮೀಸಲು ಶಿವನ, ಕೈಮೀಸಲು ಶಿವನ, ಕಾಲು ಮೀಸಲು ಶಿವನ
ನಾಲಿಗೆ ಮೀಸಲು ಶಿವನ, ಕಿವಿ ಮೀಸಲು ಶಿವನ, ನಾಸಿಕ ಮೀಸಲು ಶಿವನ
ತನು-ಮನವೆಲ್ಲ ಮೀಸಲು ಶಿವನ, ಈ ಮೀಸಲು ಬೀಸರವೋಗದಂತಿದ್ದರೆ
ಆತನೇ ಜಗದೀಶ ಕಾಣಾ ರಾಮನಾಥ.

ಪರಮಾತ್ಮನಿಗೆ ಜ್ಞಾನೇಂದ್ರಿಯ, ಕರ್ಮೇಂದ್ರಿಯ. ತನು-ಮನ ಎಲ್ಲವೂ ಮೀಸಲಾಗಬೇಕು. ಈ ಮೀಸಲು ಕೆಡದಂತೆ ಜಾಗ್ರತಿಯನ್ನು ವಹಿಸಿದರೆ ಆತನು ದೈವೀಪುರುಷ.

ಆಧ್ಯಾತ್ಮಯೋಗದ ಗುರಿ ಜೀವನದ ದೈವೀಕರಣ. ಸಮಸ್ತ ಇಂದ್ರಿಯಗಳು ದುರಾಚಾರ ದುರ್ಮಾರ್ಗ ತೊರೆಯಬೇಕು ; ಸದಾಚಾರದ ಸನ್ಮಾರ್ಗ ಹಿಡಿಯಬೇಕು. ಅಷ್ಟೇ ಅಲ್ಲ ದೈವೀಜ್ಞಾನದ ದಿವ್ಯಪಥದಲ್ಲಿ ತಲ್ಲೀನವಾಗಬೇಕು. ಸನ್ಮಾರ್ಗ ಬೇರೆ, ದೈವೀಮಾರ್ಗ ಬೇರೆ. ಇಂದ್ರಿಯಗಳನ್ನು ಉತ್ತಮ ವಿಚಾರದಲ್ಲಿ ತೊಡಗಿಸುವುದು ಸನ್ಮಾರ್ಗ : ಪರಮಾತ್ಮ ಸಂಬಂಧವಾದ ವಿಚಾರಗಳಲ್ಲಿ ತಲ್ಲೀನವಾಗಿಸುವುದು ದೈವೀ ಮಾರ್ಗ. ಕಣ್ಗಳನ್ನು ಅವನನ್ನು ದೃಷ್ಟಿಸಲಿಕ್ಕೆ, ಕೈಯನ್ನು ಅವನನ್ನು ಪೂಜಿಸಲಿಕ್ಕೆ. ಕಾಲನ್ನು ಅವನ ಸೇವೆಗೈಯಲಿಕ್ಕೆ, ನಾಲಿಗೆಯನ್ನು ಅವನನ್ನು ಹೊಗಳಿ ಹಾಡಲಿಕ್ಕೆ. ಕಿವಿಯನ್ನು ಅವನ ನಾಮಾಮೃತ ಕೇಳಲಿಕ್ಕೆ, ನಾಸಿಕವನ್ನು ಶಿವಪರಿಕರಗಳನ್ನು ಆಸ್ವಾದಿಸಲಿಕ್ಕೆ, ಮೀಸಲಾಗಿಸಿ ತನುವನ್ನು ಅಂದರೆ ಸರ್ವಾಂಗವನ್ನು ದೈವೀಪಥದಲ್ಲಿ ತೊಡಗಿಸಿ ಮನವನ್ನು ಅವನನ್ನು ತುಂಬಿಕೊಳ್ಳಲಿಕ್ಕೆ ಬಳಸಬೇಕು. ಹೀಗೆ ಜೀವವೆಲ್ಲ ಶಿವನ ಮೀಸಲಾಗಿ, ಸರ್ವಾಂಗವೂ ದೈವೀಕರಣಗೊಳ್ಳಬೇಕು.

ಮಾನವ ಸಹಜ ದೌರ್ಬಲ್ಯ

೧೦. ಒಡಲುಗೊಂಡವ ಹಸಿವ, ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ !
ನೀನೆನ್ನಂತೊಮ್ಮೆ ಒಡಲುಗೊಂಡು ನೋಡಾ ರಾಮನಾಥ.

ಶರೀರಧಾರಿಯಾದವನು ಹಸಿವು, ತೃಷೆ, ನಿದ್ರೆಗಳಿಂದ ಬಾಧಿತನಾಗುವನು. ಶರೀರಧಾರಿಯಾದವನು ಅನೃತ. ಅಹಂಕಾರ ಮುಂತಾದ ಮನೋದೌರ್ಬಲ್ಯಕ್ಕೆ ಈಡಾಗುವನು. ಆದ್ದರಿಂದ ಒಡಲುಧಾರಿಯಾದ ನರನನ್ನು ತೀರಾ ಕಾಡಿಸದೆ ಸಹಾನುಭೂತಿಯಿಂದ ನೋಡು ; ಎನ್ನಂತೆ ನೀನು ಒಡಲುಧಾರಿಯಾಗು; ಮಾನವರ ಸೀಮೆ ಏನೆಂಬುದು ಅರ್ಥವಾದೀತು.

ಒಂದು ಬಗೆಯ ತಿಳಿಹಾಸ್ಯದಲ್ಲಿ ದೇವನಿಗೆ ಸವಾಲನ್ನು ಹಾಕುತ್ತಿದ್ದಾರೆ. ದೇವರು ತನ್ನ ಶುದ್ಧ ನಿರಂಜನತ್ವದ ಸ್ಥಿತಿಯಲ್ಲಿ ನಿಂತು, ದೇಹಧಾರಿಯಾದ ಮಾನವನಲ್ಲಿ ಕುಂದು ಕೊರತೆಗಳನ್ನೇ ಎಣಿಸುತ್ತಾ ಹೋದರೆ ಹೇಗೆ ? ಮಾನವನಿಗಾಗಿ ಸಹಾನುಭೂತಿ, ರಿಯಾಯಿತಿ ಇರಬೇಕು. ಹಸಿವು, ತೃಷೆ, ವಿಷಯ, ನಿದ್ರೆ ಮುಂತಾದವು ತೀರಾ ಸ್ವಾಭಾವಿಕ ಶರೀರಗುಣಗಳು. ಮಳೆಯ ನೀರು ಸಿಹಿಯಾಗಿದ್ದರೂ ಭೂಮಿಯ ಸಂಪರ್ಕದಿಂದ ಭಾವಿಯಲ್ಲಿ ಸೆಲೆಯಾಗಿ ಬಂದಾಗ ಮಣ್ಣಿನ ಗುಣದಂತೆ ರುಚಿತಾಳುವ ಹಾಗೆ, ಶುದ್ಧ ನಿರಂಜನ ಆತ್ಮವು ದೇಹಸಂಪರ್ಕಿತವಾಗುತ್ತಲೇ ಕಾಯರಿಪುಗಳಿಂದ, ಮನೋ ಸಂಬಂಧಿತವಾಗುತ್ತಲೇ ಮನೋರಿಪುಗಳಿಂದ ಕಾಡಲ್ಪಡುವುದು. ಈ ಬಾಧೆ ಅರ್ಥವಾಗಬೇಕಾದರೆ ನೀನೂ ದೇಹಧಾರಿಯಾಗಿ ನೋಡು ಎಂದು ಆಹ್ವಾನವೀಯುತ್ತಿದ್ದಾರೆ. "To err is human and to forgive is divine" ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ.

ಆತ್ಮವು ಹೆಣ್ಣಲ್ಲ ಗಂಡಲ್ಲ

೧೧. ಮೊಲೆ ಮುಡಿ ಬಂದರೆ ಹೆಣ್ಣೆಂಬರು
ಗಡ್ಡ ಮೀಸೆ ಬಂದರೆ ಗಂಡೆಂಬರು
ನಡುವೆ ಸುಳಿವಾತ್ಮನು
ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮನಾಥ.

ಕುಚಗಳು ದೇಹದಲ್ಲಿ ಕಂಡರೆ, ಉದ್ದನಾದ ಕೂದಲಿದ್ದರೆ ಸ್ತ್ರೀ ಎಂಬ ಅಭಿದಾನ, ಗಡ್ಡ-ಮೀಸೆ ಕಂಡರೆ ಪುರುಷನೆಂಬ ಅಭಿದಾನ. ಈ ಎಲ್ಲ ಕುರುಹುಗಳು ದೇಹಕ್ಕೇ ವಿನಾ ಆತ್ಮನಿಗಲ್ಲ. ಅದು ಸ್ತ್ರೀಯಲ್ಲ-ಪುರುಷನಲ್ಲ. ಅದು "ಅದು = That (Tat)". ವೈದಿಕ ಧರ್ಮವು ಪುರುಷ-ಸ್ತ್ರೀಯರ ನೈಸರ್ಗಿಕ, ಶಾರೀರಿಕ ವ್ಯತ್ಯಾಸವನ್ನೇ ಪ್ರಮುಖವಾಗಿರಿಸಿಕೊಂಡು ಸ್ತ್ರೀಯರಿಗೆ ಧಾರ್ಮಿಕ ಸಮಾನತೆ ಕೊಡದಿದ್ದಾಗ, ಸ್ತ್ರೀ ಸ್ವಾತಂತ್ರ್ಯಕ್ಕಾಗಿ ಶರಣರು ಆಂದೋಲನವೊಂದನ್ನು ಆರಂಭಿಸಿದರು. ಅದರ ಸೂತ್ರವಾದ ಈ ವಚನದಲ್ಲಿ ನುಡಿದಿದ್ದಾರೆ: 'ಆಕಾರ ವ್ಯತ್ಯಾಸ ದೇಹಕ್ಕೇ ವಿನಾ ಆತ್ಮಂಗಲ್ಲ. ಪರಮಾತ್ಮನೊಡನೆ ಮಿಲನ ಹೊಂದುವದು ಆತ್ಮವೇ ಹೊರತು ದೇಹವಲ್ಲ. ಆದ್ದರಿಂದ ಸ್ತ್ರೀದೇಹವು ಮುಕ್ತಿಸಾಧನೆಗೆ ಬಾಧಕವಲ್ಲ'.

(ಸಶೇಷ)

ವಿಜ್ಞಾನವನ್ನು ಕಂಡರೆ ಭಯಪಡುವ ಧರ್ಮವು ದೇವರನ್ನು ಅಗೌರವಿಸಿದಂತಾಗುತ್ತದೆ ಮತ್ತು ತನ್ನ ಆತ್ಮಹತ್ಯೆ ತಾನೇ ಮಾಡಿಕೊಳ್ಳುತ್ತದೆ.

—ಎಮರ್ಸನ್.

ವಿಶ್ವಕಲ್ಯಾಣ ಮಿಷನ್ ವಿಶ್ವಸ್ತ ಸಂಸ್ಥೆಯ


ಬಸವ ಗಂಗೋತ್ರಿ

ಶೈಕ್ಷಣಿಕ, ಸಾಂಸ್ಕೃತಿಕ, ಅಧ್ಯಾತ್ಮಿಕ ಕೇಂದ್ರ

ವಿಳಾಸ: ಬಸವ ಗಂಗೋತ್ರಿ,
ಅಂಚೆ : ಕುಂಬಳಗೋಡು, ಹೋಬಳಿ : ಕೆಂಗೇರಿ.
ಬೆಂಗಳೂರು ಜಿಲ್ಲೆ. 562118.

ಸ್ಥಳ ನಿರ್ದೇಶನ :

ಬೆಂಗಳೂರು—ಮೈಸೂರು ರಸ್ತೆ ಮೇಲೆ, ಹತ್ತೊಂಭತ್ತು ಕಿಲೋ ಮೀಟರ್ ದೂರದಲ್ಲಿ, ಕುಂಬಳಗೋಡು ಗ್ರಾಮ ವಲಯದಲ್ಲಿದೆ. ಮೈಸೂರು ರಸ್ತೆಯಿಂದ ದೊಡ್ಡಾಲದ ಮರದ ಕಡೆಗೆ ತಿರುಗುವ ಕೂಟದ ಬಳಿ ಇಳಿದರೆ, ಅಲ್ಲಿಂದ ಮುಂದೆ ಒಂದು ಪರ್ಲಾಂಗ್ ದೂರದಲ್ಲಿ ಹೆದ್ದಾರಿಯ ಮೇಲಿದೆ.
ಬಸ್ ರೂಟ್ ನಂಬರ್ : ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ. 225, 226, 227 ಮತ್ತು 228. ಬೆಂಗಳೂರು — ಮೈಸೂರು ಸಾಮಾನ್ಯ ವೇಗದ ಬಸ್‌ಗಳಲ್ಲಿಯೂ ಬಂದು ಇಳಿಯಬಹುದು.



ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ
ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರು
ಇಲ್ಲಿ ಸಲ್ಲದವರು ಅಲ್ಲಿ ಸಲ್ಲರಯ್ಯಾ.
ಕೂಡಲಸಂಗಮದೇವ.

ಸನ್ಮಾನ್ಯ ಶರಣರೇ,

ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಸ್ಥಾಪನೆಗೊಂಡು ಎರಡೇ ವರ್ಷಗಳ ಅವಧಿಯಲ್ಲಿ ಅಪೂರ್ವ ಸೇವೆಯನ್ನು ಸಮಾಜಕ್ಕೆ ಸಲ್ಲಿಸಿದೆ.

೧. ಕನ್ನಡ ನಾಡಿನ ರಾಜಧಾನಿಯಾದ ಬೆಂಗಳೂರಿನಲ್ಲಿ "ಬಸವ ಮಂಟಪ" ಎಂಬ ಅಧ್ಯಾತ್ಮಿಕ ಕೇಂದ್ರವನ್ನು ಸ್ವಂತ ಕಟ್ಟಡದಲ್ಲಿ ಆರಂಭಿಸಿದೆ.

೨. ಸುಯಿಧಾನ ಸುಗ್ರಂಥ ಮಾಲೆಯನ್ನು ತೆರೆದು ಈಗಾಗಲೆ ೪೩ ಗ್ರಂಥಗಳನ್ನು ಪ್ರಕಟಿಸಿದೆ.

೩. ವಿಶ್ವಧರ್ಮ ಪ್ರವಚನ ಸಮಿತಿಯ ಮೂಲಕ ನಾಡಿನಾದ್ಯಂತ ಪ್ರವಚನ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

೪. ಕಲ್ಯಾಣ ಕಿರಣ ಎಂಬ ಮಾಸಪತ್ರಿಕೆಯನ್ನು ಪ್ರಕಟಿಸುತ್ತಿದೆ.

೫. ವಾರ್ಷಿಕ ಯೋಗ ಶಿಬಿರಗಳನ್ನು ಏರ್ಪಡಿಸುತ್ತದೆ.

೬. ವೈಚಾರಿಕ ಜಾಗೃತಿಗಾಗಿ ವಿಚಾರ ಗೋಷ್ಠಿಗಳನ್ನು ಆಗಾಗ ಸಂಯೋಜಿಸುತ್ತದೆ.

೭. ಸಾಮೂಹಿಕ ಪೂಜೆ-ಪ್ರಾರ್ಥನೆ, ಮಂತ್ರೋಪದೇಶ, ಸಾಮೂಹಿಕ ಭೋಜನಗಳನ್ನೇರ್ಪಡಿಸುತ್ತದೆ.

೮. ವಧು-ವರಾನ್ವೇಷಣ ವಿಭಾಗವನ್ನು ತೆರೆದು, ಅನೇಕರ ಮಧ್ಯೆ ಪರಿಚಯ ಉಂಟುಮಾಡಿ, ಲಗ್ನ ಕಾರ್ಯಗಳಲ್ಲಿ ಸಹಕರಿಸುತ್ತದೆ.

೯. ಅಕ್ಕಮಹಾದೇವಿ ವಿದ್ಯಾಲಯ ತೆರೆದು, ನರ್ಸರಿ ಹಂತದಿಂದಲೇ ಆದರ್ಶ ಶಿಕ್ಷಣ ಕೊಡಲು ಶ್ರಮಿಸುತ್ತಿದೆ.

೧೦. ರವಿವಾರಕ್ಕೊಮ್ಮೆ ಸಾಮೂಹಿಕ ಪ್ರಾರ್ಥನೆಗಳನ್ನೇರ್ಪಡಿಸಿ ಅಧ್ಯಾತ್ಮಿಕ ಪ್ರಜ್ಞೆಯನ್ನು ಉದ್ದೀಪಿಸುತ್ತಿದೆ.

ಬಸವ ಗಂಗೋತ್ರಿ ಸ್ಥಾಪನೆ

ಈ ಶತಮಾನದ ಸುಂದರ ಆಧ್ಯಾತ್ಮ ವಿದ್ಯಾಲಯ : ಬೆಂಗಳೂರು ದಕ್ಷಿಣ ತಾಲ್ಲೋಕಿನ ವಲಯಕ್ಕೆ ಸೇರಿದ ಕುಂಬಳಗೋಡು ಗ್ರಾಮ ವ್ಯಾಪ್ತಿಗೆ ಒಳಪಟ್ಟ ಬೆಂಗಳೂರು - ಮೈಸೂರು ಹೆದ್ದಾರಿಯ ಮೇಲಿರುವ ೩೨ ಎಕರೆ ವಿಸ್ತೀರ್ಣದ ಪ್ರಶಾಂತ ನೆಲದಲ್ಲಿ ರೂಪಿಸಲಿದೆ ಈ ಶತಮಾನದ ಸುಂದರ ಆಧ್ಯಾತ್ಮ ವಿದ್ಯಾಲಯವನ್ನು. ಬೆಂಗಳೂರು ನಗರದಿಂದ ಕೇವಲ ಹತ್ತೊಂಭತ್ತು ಕಿಲೋಮೀಟರ್ ದೂರದಲ್ಲಿರುವ ಅತ್ಯುತ್ತಮ ನಗರ ವಾಹನ ಸೌಕರ್ಯವಿರುವ ಪ್ರಶಾಂತತೆಯ ನೆಲೆ ಬೀಡು "ಬಸವ ಗಂಗೋತ್ರಿ". ಅಲ್ಲಿದೆ ಚಿನ್ನಕ್ಕೆ ಸುವಾಸನೆ ಬಂದಂತೆ ನಿಸರ್ಗದೇವತೆಯ ಮಡಿಲಲ್ಲಿ ಹರಿಯುವ, ವೃಷಭಾವತಿಯ ಒಡಲನ್ನು ಬೆರೆಯುವ ಸುಂದರ ಉಪನದಿ "ಬಸವಗಂಗಾ".

ವಿಶ್ವ ಕಲ್ಯಾಣ ಮಿಷನ್ (ಸಾರ್ವಜನಿಕ ಧಾರ್ಮಿಕ ಟ್ರಸ್ಟ್) ಈ ನಿವೇಶನದಲ್ಲಿ ಹಲವಾರು ಯೋಜನೆಗಳನ್ನು ಕಾರ್ಯಗತಗೊಳಿಸಲು ಉದ್ದೇಶಿಸಿದೆ.

೧. **ಬಸವ ಭಾರತಿ ವಿದ್ಯಾಶಾಲೆ :** ವಸತಿ ಸಹಿತ ವಿದ್ಯಾಲಯ (Residential School) ಭಾರತೀಯ ಸಾಂಸ್ಕೃತಿಕ ಪರಂಪರೆಯ ಮೇಲೆ ಆಧಾರಿತವಾದ ಶಿಕ್ಷಣ ನೀಡುವ ಗುರುಕುಲ. ಐದನೇ ತರಗತಿಯಿಂದ ಆರಂಭವಾಗಲಿದೆ ಈ ಶಾಲೆ.

೨. **ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ :** ಧರ್ಮ ಪ್ರಸಾಕರರನ್ನು ತರಬೇತಿ ಮಾಡುವ ಯೋಜನೆಯು ಕಳೆದೊಂದು ವರ್ಷದಿಂದ ಆರಂಭವಾಗಿದ್ದು. ಇದಕ್ಕೆ ಸ್ವತಂತ್ರ ತರಬೇತಿ ವಿದ್ಯಾಲಯವನ್ನು ನಿರ್ಮಾಣ ಮಾಡಲಾಗುವುದು.

೩. **ವಿವೇಕಾನಂದ ವೈದ್ಯಕೇಂದ್ರ.**

೪. **ಬಾಪೂಜಿ ಅನಾಥ ಸೇವಾ ಮಂದಿರ.**

೫. **ಸರ್ವಜ್ಞ ವೃದ್ಧಾಲಯ :** ಮಕ್ಕಳಿಲ್ಲದವರು, ಮಕ್ಕಳಿದ್ದೂ ನೋಡಿಕೊಳ್ಳದ ನಿಸ್ಸಹಾಯಕರು, ಮಕ್ಕಳ ಸೇವಾಲಭ್ಯವಿದ್ದೂ ಸಹ ತಮ್ಮ ವೆಚ್ಚವನ್ನು ಕೊಟ್ಟು, ಬಾಳಿನ ಸಂಧ್ಯಾದಿನಗಳನ್ನು ನೆಮ್ಮದಿಯಿಂದ ಕಳೆಯಲು ಸಹಾಯಕವಾಗುವ ಯೋಜನೆ.

೬. **ಸರ್ವಧರ್ಮ ಮಹಾಲಯ :** ವಸ್ತುಸಂಗ್ರಹಾಲಯದ ಮಾದರಿಯಲ್ಲಿ ಈ ಭವನವನ್ನು ರೂಪಿಸಿ ವಿಶ್ವದ ಎಲ್ಲ ಧರ್ಮಗಳ ಅನುಯಾಯಿಗಳ ಆರ್ಥಿಕ ನೆರವಿ

ನಿಂದ ಅವರವರ ಧರ್ಮದ ಇತಿಹಾಸ-ಸಂಸ್ಕೃತಿಗಳ ಒಂದು ವಿಹಂಗಮ ನೋಟ ನೀಡುವ ಕೋಣೆಗಳನ್ನು ರಚಿಸಿ, ಪ್ರವಾಸಿಗರಿಗೆ ಸರ್ವಧರ್ಮ ಪರಿಚಯ ಮಾಡಿ ಕೊಡುವ ಯೋಜನೆ.

೭. **ಶ್ರೀ ಕುವೆಂಪು ವಸ್ತುಸಂಗ್ರಹಾಲಯ :** ಶಬ್ದ ಮತ್ತು ಧ್ವನಿ ಸಹಿತವಾದ, ಐತಿಹಾಸಿಕ ಮತ್ತು ಧಾರ್ಮಿಕ ಘಟನೆಗಳನ್ನು ಒಳಗೊಂಡ ದೃಶ್ಯಗಳ ರಚನೆ, ತೈಲಚಿತ್ರಗಳ ಸಂಗ್ರಹ ಇವೇ ಮುಂತಾದ ಸಾಹಿತ್ಯವನ್ನೊಳಗೊಂಡ ವಸ್ತು ಸಂಗ್ರಹಾಲಯ.

೮. **ಶ್ರೀ ಬಸವೇಶ್ವರ ದಿವ್ಯಾಲಯ :** ದಕ್ಷಿಣ ಭಾರತದ ಶಿಲ್ಪಕಲೆ ಮತ್ತು ಷಟಸ್ಥಲ ಸಂಕೇತದ ಶಿಲ್ಪವನ್ನೊಳಗೊಂಡ ಮಹಾದ್ವಾರ ಸಹಿತವಾದ ಸುಂದರವಾದ ಶ್ರೀ ಬಸವೇಶ್ವರ ದಿವ್ಯಾಲಯ ಮತ್ತು ಧ್ಯಾನಮಂದಿರ ನಿರ್ಮಿಸುವ ಯೋಜನೆ.

೯. **ಶ್ರೀ ಅರವಿಂದ ಆತ್ಮಶಾಂತಿಧಾಮ :** ಬುದ್ಧಿಜೀವಿಗಳು, ಸಾಹಿತಿಗಳು, ಯೋಗಾಭ್ಯಾಸಿಗಳು, ಅಂತರ್ಮುಖಿಗಳು ಮೌನವಾಗಿಯೋ ಅಥವಾ ಜನ ಸಂಪರ್ಕವಿಲ್ಲದೆಯೋ ಶಾಂತರಾಗಿದ್ದುಕೊಂಡು ತಮ್ಮ ಸಾಹಿತ್ಯ ರಚನೆಯಲ್ಲಿ ತೊಡಗಲು ಅಥವಾ ಚಿಂತನೆಯಲ್ಲಿ ಮಗ್ನರಾಗಲು ತಮಗೆ ಬೇಕೆನಿಸಿದಷ್ಟು ಕಾಲ ಇರುವವರಿಗೆ "ಆತ್ಮಶಾಂತಿ ಧಾಮ"ವೆಂಬ "ವಿಶ್ರಾಂತಿ ಧಾಮ" ಸ್ನಾನ, ಧ್ಯಾನ, ಪ್ರಸಾದ ಮುಂತಾದ ಎಲ್ಲ ವ್ಯವಸ್ಥೆಯನ್ನು ಅತ್ಯಲ್ಪ ದರದಲ್ಲಿ ಒದಗಿಸಿಕೊಡುವುದು.

೧೦. **ಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂದಿರ :** ಪ್ರಶಾಂತ ನಿಸರ್ಗದ ಮಧ್ಯೆ ಇರುವ, ಹರಿಯುವ ನೀರಿನ ಉತ್ತಮ ಸೌಲಭ್ಯವಿರುವ ವಿಶಾಲ ಮೈದಾನದಲ್ಲಿ ವಿವಾಹ ಕಾರ್ಯಗಳಿಗನುಕೂಲವಾಗುವ ಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂದಿರ.

೧೧. **ಬಸವೇಶ್ವರ ಬಯಲ ಪುತ್ಥಳಿ :** ಪ್ರೇಕ್ಷಣೀಯ ತಾಣ, ಪ್ರವಾಸಿ ಕೇಂದ್ರ ಮತ್ತು ಧಾರ್ಮಿಕ ಕ್ಷೇತ್ರವಾಗಿ ರೂಪುಗೊಳ್ಳಲಿರುವ ಬಸವ ಗಂಗೋತ್ರಿಯಲ್ಲಿ ಬೃಹದಾಕಾರದ ಬಸವೇಶ್ವರ ಬಯಲ ಪುತ್ಥಳಿಯನ್ನು ಸ್ಥಾಪಿಸಲಾಗುವುದು.

೧೨. **ಶರಣೋದ್ಯಾನ :** ನಗರ ನಿವಾಸಿಗಳು, ಪ್ರವಾಸಿಗಳು ಮನಃಶಾಂತಿ ಪಡೆಯಲು ಬರುವ ಬಸವ ಗಂಗೋತ್ರಿಯಲ್ಲಿ ಸುಂದರವಾದ ಉದ್ಯಾನವನ್ನು ನಿರ್ಮಾಣ ಮಾಡಲಾಗುತ್ತದೆ. ಅಲ್ಲಿ ಅಲ್ಲಲ್ಲೇ ಲತಾಮಂಟಪ, ಶಿಲಾಸನಗಳು, ಶರಣರ-ಸಂತರ ದಿವ್ಯೋಕ್ತಿಗಳ ಫಲಕಗಳು ರಾರಾಜಿಸುತ್ತವೆ. ಅನೇಕ ಮಹಾತ್ಮರ, ಪ್ರವಾದಿಗಳ ಶಿಲಾಪುತ್ಥಳಿಗಳನ್ನು ಉದ್ಯಾನದ ವೃಕ್ಷದ ಕೆಳಗಿನ ಕಟ್ಟೆಗಳ ಮೇಲೆ ನಿರ್ಮಿಸಲಾಗುವುದು. ಹೀಗೆ ಧಾರ್ಮಿಕ ರಂಗದ ಕನಸಿನ ಕ್ಷೇತ್ರವಾಗಲಿದೆ ಬಸವ ಗಂಗೋತ್ರಿ.

★

ವಿಶ್ವಕಲ್ಯಾಣ ಮಿಷನ್ ವಿಶ್ವಸ್ಥ ಸಂಸ್ಥೆಯ ಬೃಹತ್ ಯೋಜನೆಯ ವೆಚ್ಚದ ರೂಪುರೇಷೆ

ವಿಶ್ವಕಲ್ಯಾಣ ಮಿಷನ್ ತನ್ನ ಭವಿಷ್ಯದಲ್ಲಿ ಕೆಳಕಂಡಂತಹ ಯೋಜನೆಗಳನ್ನು ಕೈಗೊಳ್ಳಲು ಮಾಸ್ಟರ್ ಪ್ಲ್ಯಾನ್ ಹಾಕುತ್ತಲಿದೆ. ಆರ್ಥಿಕ ನೆರವು ಮಹಾಜನತೆಯಿಂದ ಒದಗಿದಂತೆಲ್ಲ ಹಂತ ಹಂತವಾಗಿ ಪೂರೈಸುವುದು. ಜನರು ತಮ್ಮ ತಮ್ಮ ಕೈಲಾದಷ್ಟು ನೆರವನ್ನು ನೀಡಿ ಅಥವಾ ಸಿರಿವಂತರು ಇಡಿಯಾಗಿಯೇ ದಾನಮಾಡಿ ಸಹಕರಿಸಿದಲ್ಲಿ ನಮ್ಮ ಕೆಲಸ ಹಗುರಾಗುವುದು, ಸೇವೆ ತ್ವರಿತಗೊಳ್ಳುವುದು. ದಾನಿಗಳ ಹೆಸರನ್ನು ಕಲ್ಯಾಣ ಕಿರಣದಲ್ಲಿ ಪ್ರಕಟಿಸಲಾಗುವುದು, ಸಂಸ್ಥೆಗಳಿಗೆ ಅವರ ಹೆಸರನ್ನಿಡಲಾಗುವದು, ಆನರ್ ಫಲಕದಲ್ಲಿ ಬರೆಸಲಾಗುವುದು.

ಅ.ಸಂ.	ವಿವರ	ಅಂದಾಜು ವೆಚ್ಚ
೧.	ಬಸವ ಭಾರತಿ ಗುರುಕುಲ (Residential School)	ಐದು ಲಕ್ಷ
೨.	ಗಂಗಾಂಬಿಕಾ ಪ್ರಸಾದ ನಿಲಯ	ಒಂದು ಲಕ್ಷ
೩.	ಹೇಮರೆಡ್ಡಿ ಮಲ್ಲಮ್ಮ ಗೋಶಾಲೆ	ಎರಡು ಲಕ್ಷ
೪.	ನಾಗಲಾಂಬಿಕಾ ಅತಿಥಿಗೃಹ	ಒಂದು ಲಕ್ಷ
೫.	ಸಿದ್ಧಲಿಂಗೇಶ್ವರ ಮುದ್ರಣಾಲಯ	ಎರಡು ಲಕ್ಷ
೬.	ಪ್ರಭುದೇವ ದಿವ್ಯಜ್ಞಾನ ವಿದ್ಯಾಲಯ (College of Divinity)	ಎರಡು ಲಕ್ಷ
೭.	ಸರ್ವಜ್ಞ ವೃದ್ಧಾಲಯ	ಎರಡು ಲಕ್ಷ
೮.	ನೀಲಾಂಬಿಕಾ ಧ್ಯಾನಮಂದಿರ	ಎರಡು ಲಕ್ಷ
೯.	ಸಿದ್ಧರಾಮ ಯೋಗಮಂದಿರ (ವ್ಯಾಯಾಮ ಶಾಲೆ)	ಒಂದು ಲಕ್ಷ
೧೦.	ಬಸವ ಮಂದಿರ (ಮಂಟಪ)	ಐದು ಲಕ್ಷ
೧೧.	ಶರಣೋದ್ಯಾನ	ಒಂದು ಲಕ್ಷ

೧೨.	ಬಸವೇಶ್ವರ ಬಯಲ ಪುತ್ಥಳಿ	ಹತ್ತು ಲಕ್ಷ
೧೩.	ವಿವೇಕಾನಂದ ವೈದ್ಯಕೇಂದ್ರ	ಎರಡು ಲಕ್ಷ
೧೪.	ಬಾಪೂಜಿ ಅನಾಥಾಲಯ	ಎರಡು ಲಕ್ಷ
೧೫.	ಕನ್ನಿಕಾ ಪರಮೇಶ್ವರಿ ಕಲ್ಯಾಣ ಮಂದಿರ	ಮೂರು ಲಕ್ಷ
೧೬.	ಚನ್ನಬಸವೇಶ್ವರ ಸಂಶೋಧನ ಗ್ರಂಥಾಲಯ	ಒಂದು ಲಕ್ಷ
೧೭.	ಕಿತ್ತೂರು ಚೆನ್ನಮ್ಮ ವಾಚನಾಲಯ	ಒಂದು ಲಕ್ಷ
೧೮.	ಅರವಿಂದ ಆತ್ಮಶಾಂತಿಧಾಮ	ಒಂದು ಲಕ್ಷ
೧೯.	ಶಿವಾಜಿ ಈಜುಗೊಳ	ಒಂದು ಲಕ್ಷ
೨೦.	ಕುವೆಂಪು ವಸ್ತು ಸಂಗ್ರಹಾಲಯ	ಐದು ಲಕ್ಷ
೨೧.	ಅಕ್ಕಮಹಾದೇವಿ ಸಭಾಗೃಹ (Auditorium)	ನಾಲ್ಕು ಲಕ್ಷ
೨೨.	ಕೈಲಾಸ ದ್ವಾರ	ಎರಡು ಲಕ್ಷ
೨೩.	ವಿಶ್ವಶಾಂತಿ ಸರ್ವಧರ್ಮ ಮಹಾಸಭಾ	ನಾಲ್ಕು ಲಕ್ಷ
	ಒಟ್ಟು	ಅರವತ್ತು ಲಕ್ಷ

ಇನ್ನಿತರ ರೂಪದಲ್ಲಿ ಸಹಾಯ

ಬಸವೇಶ್ವರ ಅಮೃತಶಿಲಾ ಪುತ್ಥಳಿ	ಹತ್ತು ಸಾವಿರ ರೂಪಾಯಿಗಳು.
ಕೊಠಡಿಯ ನಿರ್ಮಾಣಕ್ಕೆ	ಹತ್ತು ಸಾವಿರ ರೂಪಾಯಿಗಳು.
ಗ್ರಂಥಗಳ ಪ್ರಕಟಣೆ	ಎರಡು ಸಾವಿರದಿಂದ ಐದು ಸಾವಿರದವರೆಗೆ.
ಮಹಾಪೋಷಕರು	ಒಂದು ಸಾವಿರದ ಒಂದು
ಹಿತೈಷಿಗಳು	ಐದು ನೂರಾ ಒಂದು.
ಆಜೀವ ಸದಸ್ಯರು	ಒಂದು ನೂರಾ ಐವತ್ತೊಂದು.

ಸಂಸ್ಥೆಯಲ್ಲಿ ಉಪಯೋಗಕ್ಕೆ ಆಲ್ಮೈರಾ, ಕುರ್ಚಿಗಳು, ಬೆಂಚು, ಮಂಚ, ಅಡಿಗೆಯ ಪಾತ್ರೆಗಳು ಇತ್ಯಾದಿ ಉಪಯುಕ್ತ ಸಾಮಾನುಗಳನ್ನೂ ದಾನ ಮಾಡಬಹುದು.

ಬಸವ ಗಂಗೋತ್ರಿ ಯೋಜನೆಯ
ಕಾರ್ಯನಿರ್ವಾಹಕ ಮಂಡಳಿ

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು
ಅವರ ದಿವ್ಯ ನೇತೃತ್ವದಲ್ಲಿ

ಸಂಚಾಲಕರು
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಮಂಡಳಿಯ ಗೌರವ ಸದಸ್ಯರು
ಶರಣರುಗಳಾದ :

ಐ.ಎಂ. ಮಗದುಮ್	ಎ.ಎಂ. ಬಸವೇಗೌಡ
ಬಸವರಾಜೇಶ್ವರಿ ಎಂ.ಎಲ್.ಸಿ.	ಎಂ.ಎಲ್. ಶ್ರೀನಿವಾಸಶ್ರೇಷ್ಠಿ
ಬಿ. ಜನಾಲಿ ಎಂ.ಎಲ್.ಎ.	ಎನ್.ಎಸ್. ಮುರಿಗೆಪ್ಪ
ದೇ. ಜವರೇಗೌಡ	ಗೊ.ರು. ಚನ್ನಬಸಪ್ಪ
ಕೆ.ಆರ್. ಲಿಂಗಪ್ಪ	ಎಸ್. ಮಹಾದೇವಪ್ಪ
ಕಾಂ. ಪಂಪಾಪತಿ ಎಂ.ಎಲ್.ಎ.	ಬಸವರಾಜ ಬೆಳಹೊಂಗಲ
ಕೆ.ಬಿ. ಷಣ್ಮುಖಪ್ಪ	ಡಾ॥ ಸುಶೀಲಾ
ಹುಜೂರ್ ಚನ್ನಬಸಪ್ಪ	ಜಗದಾಂಬ ವಿಶ್ವೇಶ್ವರಯ್ಯ

ಧನ ಸಹಾಯಕ್ಕೆ ಮನವಿ

ತೊಟ್ಟು ಬಿಡದನ್ನಕ್ಕ ಮತ್ತಾ ಬಡದಾಸೆ ಬೇಕು
ಮರ್ತ್ಯದ ಹಂಗುಳ್ಳನ್ನಕ್ಕ ಸತ್ಯಶರಣರ ಸಂಗ
ನಿತ್ಯ ಜಂಗಮ (ಸಮಾಜ, ಮಾನವ ಕುಲ) ಸೇವೆ
ಕೃತ್ಯವಿರಬೇಕು. —ಆಯ್ದಕ್ಕಿ ಲಕ್ಕಮ್ಮ

ಶರಣರಾದ..

ಅವರಿಗೆ ಹೃತ್ಪೂರ್ವಕ ಶುಭಹರಕೆ.

ಮಾನ್ಯರೇ.

ಹೀಗೆ ಬಹುಮುಖವಾದ ಯೋಜನೆಯನ್ನೊಳಗೊಂಡ ವಿಶ್ವಕಲ್ಯಾಣ ಮಿಷನ್ ಜಾಗವನ್ನು ಖರೀದಿಸಿ ಮೊದಲ ಹಂತದ ಕಾರ್ಯನಿರ್ವಹಣೆಗೆ 10 ಲಕ್ಷ ರೂಪಾಯಿಗಳ ನೆರವನ್ನು ಜನತೆಯಿಂದ ಬಯಸುತ್ತಲಿದೆ. ಈ ಸಂದರ್ಭದಲ್ಲಿ, ಆದಷ್ಟು ತ್ವರಿತವಾಗಿ ಅರ್ಥಿಕ ನೆರವು ಒದಗಬೇಕಾಗಿದೆ. ಸದ್ಭಕ್ತರು ಕಾಣಿಕೆಯ ರೂಪದಲ್ಲಿ ಸಂಸ್ಥೆಗೆ ಸಲ್ಲಿಸ ಬೇಕೆಂದು ಕೋರುವೆವು. ಮಹಾಜನತೆಯಾದ ನೀವು ಕಾಣಿಕೆಯನ್ನು ಕೊಡಿರಿ ಅಥವಾ ನಿಮ್ಮ ಸ್ನೇಹಿತರಿಂದ ಕೊಡಿಸಿರಿ. ನಿಸ್ಸಂಕೋಚವಾಗಿ, ಉದಾರವಾಗಿ ಸಹಾಯಮಾಡಲು ಮುಂದೆ ಬರುವಿರೆಂದು ಆಶಿಸುವೆವು. ನಮ್ಮ ಮನವಿಗೆ ಓ ಗೊಡಿ, ಸಹಾಯನೀಡಿ.

ವಿಶೇಷ ಸೂಚನೆ.

ಯಾರಾದರೂ ದಾನಿಗಳು ಬೃಹತ್ ಯೋಜನೆಯ ಇಡೀ ವೆಚ್ಚವನ್ನು ಭರಿಸಿದರೆ, ಅವರ ಹೆಸರನ್ನು ಸಂಸ್ಥೆಗಳಿಗೆ ಇರಿಸಲಾಗುವುದು. ಇಂಥದೊಂದು ಪುಣ್ಯಕಾರ್ಯ ಮಾಡಿ ನಿಮ್ಮ ಹೆಸರನ್ನೂ ಚಿರಸ್ಮರಣೀಯ ಮಾಡಿಕೊಂಡು ದೈವೀಕೃಪೆಗೆ ಪಾತ್ರರಾಗುವಿರಾಗಿ ನಂಬುತ್ತೇವೆ.

ವಿಶ್ವಕಲ್ಯಾಣ ಮಿಷನ್,
ದೂರವಾಣಿ :82335

ಸಂಚಾಲಕರು :
ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ
ನಂ. 24, 2ನೇ ಬ್ಲಾಕು, ಕಾರ್ಡ್ ರೋಡ್
ರಾಜಾಜಿನಗರ, **ಬೆಂಗಳೂರು**–560010

ವಧು ವರಾನ್ವೇಷಣ ವಿಭಾಗ

ವಧು ಬೇಕಾಗಿದೆ

ವ.ವ.ವಿ.ಸಂ. 6

ವಯಸ್ಸು : 27 ವರ್ಷ : ಎತ್ತರ : 5 ಅಡಿ 8 ಅಂಗುಲ. : ವಿದ್ಯೆ : ಎಂ.ಎಸ್‌ಸಿ ಎಂ.ಟೆಕ್; ರೂಪ : ಬಿಳಿ ಬಣ್ಣ, ದೃಢಕಾಯ; ಧರ್ಮ: ಲಿಂಗಾಯಿತ, ಕೇಂದ್ರ ಸರ್ಕಾರದ ಕಾರ್ಖಾನೆಯೊಂದರಲ್ಲಿ ಉತ್ತಮ ನೌಕರಿ.

ವಧುವಿನ ಅರ್ಹತೆ : ಪದವಿಧರೆಯಾಗಿರಬೇಕು. ವಯಸ್ಸು 23 ರಿಂದ 25 ರವರೆಗಿರಬೇಕು. ಎತ್ತರ 5 ಅಡಿ 3 ಅಂಗುಲದಿಂದ 5 ಅಡಿ 6 ಅಂಗುಲದವರೆಗಿರಬೇಕು. ಲಕ್ಷಣವಾಗಿದ್ದು, ಸುಸಂಸ್ಕೃತ ಮನೆತನಕ್ಕೆ ಸೇರಿದ ಲಿಂಗಾಯತ ಧರ್ಮದವರಾಗಿರಬೇಕು.

ಇತರೆ : ಸರಳ ವಿವಾಹ. c/o ಕಲ್ಯಾಣ ಕಿರಣದ ಮೂಲಕ ವ್ಯವಹರಿಸಬೇಕು.

ವ.ವ.ವಿ.ಸಂ. 7 ಹೆಸರು : ಜಿ. ಕಾಶೀನಾಥ

ವಯಸ್ಸು : 27 ವರ್ಷಗಳು, ಎತ್ತರ : 5 ಅಡಿ 5 ಅಂಗುಲ. ಆರೋಗ್ಯ : ಉತ್ತಮ (ವ್ಯಾಯಾಮ ಪಟು). ಬಣ್ಣ : ಉತಮ. ಧರ್ಮ : ಲಿಂಗಾಯತ ಧರ್ಮ (ಪಾಕನಾಟಿ ರಡ್ಡಿ) ವಿದ್ಯೆ : ಎಂ.ಎ. ಪದವೀಧರ (ಪಿಎಚ್.ಡಿ. ಮಾಡುತ್ತಿದ್ದಾರೆ). ಸಧ್ಯದ ವೃತ್ತಿ : ಶಾಲಾ ಶಿಕ್ಷಕ (ರಾಜ್ಯ ಪ್ರಶಸ್ತಿ ವಿಜೇತ).

ವಧುವಿನ ಅರ್ಹತೆ: B.A., B.Sc. ಅಥವಾ M.A., M.Sc., ಪದವಿಧರೆಯಾಗಿರಬೇಕು. ಸುಸಂಸ್ಕೃತ ಮನೆತನದವರಾಗಿದ್ದು ಬಸವ ಧರ್ಮದ ಅಭಿಮಾನಿಯಾಗಿರಬೇಕು. ಸರಕಾರಿ ಹುದ್ದೆಯಲ್ಲಿದ್ದರೂ ಸರಿ.

ಇತರೆ : ತಂದೆ-ತಾಯಿಗೆ ಒಬ್ಬನೇ ಮಗ. ತಂದೆಯಿಲ್ಲ, ತಾಯಿ ಇದ್ದಾರೆ ವ್ಯವಹಾರ c/o ಕಲ್ಯಾಣ ಕಿರಣ.

ವ.ವ.ವಿ.ಸಂ. 8 : ಹೆಸರು : ಟಿ. ಎ. ಮೋಹನ್

ವಯಸ್ಸು : 28 ವರ್ಷ, ಎತ್ತರ : 5 ಅಡಿ 4½ ಅಂಗುಲ. ಬಣ್ಣ : ಉತ್ತಮ. ಧರ್ಮ : ಲಿಂಗಾಯತ ಧರ್ಮ (ಜಂಗಮ), ವಿದ್ಯೆ : D.A.M., ವೃತ್ತಿ : ಡಾಕ್ಟರ್.

ವ.ವ.ವಿ.ಸಂ. 9 : ಹೆಸರು : ಅಲ್ಲಮಪ್ರಭು

ಸುಲಕ್ಷಣವಂತ, ದೃಢಕಾಯವಂತನಾಗಿದ್ದು, ಹುಟ್ಟಿನಿಂದ ಹರಿಜನನಾಗಿದ್ದು, ಬಸವ ಧರ್ಮದ ಅನುಯಾಯಿ ಆಗಿರುವರು. ವಯಸ್ಸು 26 ವರ್ಷ : ಉದ್ಯೋಗ : ಹಾಸನದಲ್ಲಿ ಸರಕಾರಿ ನೌಕರಿಯಲ್ಲಿದ್ದಾರೆ, ಬಣ್ಣ : ಉತ್ತಮ.

ವಧುವಿನ ಅರ್ಹತೆ: ಶರಣ ಸಂಸ್ಕೃತಿಯ ಅನುಯಾಯಿ ಆಗಿರಬೇಕು. ವಿದ್ಯೆ : ಕನಿಷ್ಟ S.S.L.C. ವರೆಗೆ ಓದಿರಬೇಕು. ವಯಸ್ಸು : ಸುಮಾರು 20 ವರ್ಷಗಳಾಗಿರಬೇಕು. ರೂಪ : ಸುಂದರ, ಉತ್ತಮ ಬಣ್ಣ : ಎತ್ತರ : 5 ಅಡಿ 3 ಅಂಗುಲ. ವ್ಯವಹಾರ : c/o ಕಲ್ಯಾಣ ಕಿರಣ.

ಈ ತಿಂಗಳ ಮಂಗಳ ಮೂರ್ತಿ:

'ಜೀವನ ದರ್ಶನದ ದಿಗಂತ

ಡಾ|| ಕೋಟ ಶಿವರಾಮ ಕಾರಂತ

—ಗೊ.ರು ಚನ್ನಬಸಪ್ಪ

"ಅನೇಕ ಮಹನೀಯರನ್ನು ಆಶ್ರಯಿಸಿ, ನಾನಾ ಗ್ರಂಥಗಳನ್ನು ಆಧರಿಸಿ. ಅಪಾರ ಶ್ರಮವಹಿಸಿ ಬರೆದಿರುವ ಈ ಗ್ರಂಥವನ್ನು ಓದುಗ ಮಹಾಶಯರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಂಬಿದ್ದೇನೆ. ಈ ಕೃತಿಯಲ್ಲಿ ಬರುವ ಪಾತ್ರಗಳೆಲ್ಲ ಕೇವಲ ಕಲ್ಪಿತ. ಇಲ್ಲಿನ ವಿಚಾರಗಳು ಯಾರನ್ನೂ ಉದ್ದೇಶಿಸಿದವಲ್ಲ. ಇದರಿಂದ ಆಕಸ್ಮಿಕವಾಗಿ ಯಾರಿಗಾದರೂ ನೋವುಂಟಾಗುವಂತಿದ್ದರೆ ದಯಮಾಡಿ ಕ್ಷಮಿಸಬೇಕಾಗಿ ಬಿನ್ನವಿಸಿಕೊಳ್ಳುತ್ತೇನೆ. ಓದುಗರ ಸಹಾನುಭೂತಿಯೇ ನನ್ನ ಬೆನ್ನಿಗೆ ರಕ್ಷೆ".

ಇವು ನಮ್ಮ ಕೆಲವು ಗ್ರಂಥಕರ್ತರು ತಮ್ಮ ಕೃತಿಗಳ ಪೀಠಿಕೆಯಲ್ಲಿ ಸಾಮಾನ್ಯವಾಗಿ ಹೇಳುವ ಮಾತುಗಳು. ಹೀಗೆ ಹೇಳಿ ಆ ಕೃತಿಯನ್ನು 'ಮುಕ್ಕೋಟಿ ಕನ್ನಡಿಗರ ಪಾದಾರವಿಂದಗಳಿಗೆ' ಅರ್ಪಿಸುವುದು ಪದ್ಧತಿ (ಇದು ಬಹುತೇಕ ಗ್ರಂಥಕರ್ತರ ಸ್ಥಿತಿ!). ಇಂತಹ ಮಾತುಗಳನ್ನು ಕಂಡಾಗ ಓದುಗನಿಗೆ ಸ್ವಾಭಾವಿಕ ಸಹಾನುಭೂತಿ!

ಆದರೆ, ಈ ಮಾತುಗಳನ್ನು ನೋಡಿ: "ಈ ಗ್ರಂಥವನ್ನು ಓದಬೇಕೆಂದು, ಇದನ್ನು ಬರೆದವನು ಯಾರನ್ನೂ ಆಗ್ರಹ ಪಡಿಸುವುದಿಲ್ಲ. ಓದದಿರುವ ಸ್ವಾತಂತ್ರ್ಯವಿರಲು, ಓದಿ ಸಿಟ್ಟಾಗುವುದು ಥರವಲ್ಲ......................"

ಇತಿ, ಬರೆದವ, ಆ ತಪ್ಪಿಗೆ"

ಇವು ಈ ತಿಂಗಳ ಮಂಗಳ ಮೂರ್ತಿ ಡಾ|| ಕೋಟ ಶಿವರಾಮ ಕಾರಂತರು ತಮ್ಮ ಕೃತಿಯೊಂದರ ಪೀಠಿಕೆಯಲ್ಲಿ ಹೇಳಿರುವ ಮಾತುಗಳು. ಅದು ಅವರ ವಿಡಂಬನ ಸಾಹಿತ್ಯದ 'ಗ್ನಾನ' ಎಂಬ 'ಮಹಾ ಪವಿತ್ರ ಗ್ರಂಥ!' ಅದನ್ನು ಅವರು ಅರ್ಪಿಸಿರುವುದು ಓದುವವರಿಗಲ್ಲ; ಓದದವರಿಗೆ!

"ಏನು ವಿಚಿತ್ರ! ಓದಬೇಕೆಂದು ಆಗ್ರಹ ಪಡಿಸುವುದಿಲ್ಲ ಎನ್ನುವವರು. ಬರೆದುದಾ

ದರೂ ಏಕೆ?" ಎಂದು ಒಮ್ಮೆ ನನ್ನ ಓರ್ವ ಗೆಳೆಯ ಕೇಳಿದ. ಆಗ ನಾನು 'ಪದ್ಧತಿ'ಯ ಪೀಠಿಕೆಯ ಮಾತುಗಳನ್ನು ಪ್ರಸ್ತಾಪಿಸಿ, "ಇಲ್ಲಿನ ವಿಚಾರಗಳು ಯಾರನ್ನೂ ಉದ್ದೇಶಿಸಿದವಲ್ಲ ಎಂದು ಹೇಳುವವರು ಬರೆಯಬೇಕಾದರೂ ಯಾಕೆ ?" ಎಂಬ ಮರು ಪ್ರಶ್ನೆ ಹಾಕಿದೆ. ಆತ ಸುಮ್ಮನಾದ!

ಡಾ|| ಶಿವರಾಮ ಕಾರಂತರ ವಿಚಾರಧಾರೆಯ ವಿದ್ಯುತ್ ಸಂಚಾರವಾಗುವುದೇ ಇಂತಹ ಮಾತುಗಳಿಂದ. ಆ ವಿದ್ಯುಚ್ಛಕ್ತಿಯನ್ನು ಬಳಸಿಕೊಳ್ಳುವುದು 'ಬಲ್ಬ್' ಆದರೆ ಕೂಡಲೇ ಬೆಳಕು: 'ಟ್ಯೂಬ್' ಆದರೆ ಸ್ವಲ್ಪ ತಡ. ('ಬಲ'ವಿಲ್ಲದವರಿಗೆ ಕಾರಂತರು ಬರೀ 'ಎಡ'!).

ವಿಜ್ಞಾನದಲ್ಲಿ 'ರಾಮನ್ ಇಫೆಕ್ಟ್' ಇದ್ದಂತೆ ಸಾಹಿತ್ಯದಲ್ಲಿ 'ಕಾರಂತ್ ಇಫೆಕ್ಟ್!' ಬದುಕಿನ ಸಮಸ್ತ ರಂಗಕ್ಕೂ ಅವರ ವಿಚಾರದ ಸ್ಪರ್ಶವಾಗಿದೆ. ಅವರೊಂದು ವಿರಾಟ್ ಶಕ್ತಿ. ಹುಟ್ಟುತ್ತಲೇ ಕುತೂಹಲ ಕಟ್ಟಿಕೊಂಡು ಬಂದ ವ್ಯಕ್ತಿ. ಬದುಕನ್ನು ಸದಾ ಬಗೆದು ನೋಡುವಲ್ಲೇ ಆಸಕ್ತಿ!

ಕಾರಂತರ ಊರು ದಕ್ಷಿಣ ಕನ್ನಡದ ಕೋಟ. ತಂದೆ 'ಐಗಳ ವೃತ್ತಿಯಿಂದ ತಿಂಗಳಿಗೆ ಎಂಟಾಣೆ ಸಂಬಳದ ಮೂಲಕ ಜೀವನ ಆರಂಭಿಸಿದ ಶ್ರೀ ಶೇಷ ಕಾರಂತರು. ತಾಯಿ ಶ್ರೀಮತಿ ಲಕ್ಷ್ಮಿ.

ಅರಬ್ಬೀ ಸಮುದ್ರ, ಪಶ್ಚಿಮ ಘಟ್ಟ, ಮಧ್ಯೆ ಇದ್ದ ಜನ ಜೀವನ–ಇವು ಬಾಲಕ ಕಾರಂತರ ಮೇಲೆ ಬೀರಿದ ಪ್ರಭಾವ, ಮಾಡಿದ ಪರಿಣಾಮ ಅನಂತ. ಸಾಗರದ ಗಾಂಭೀರ್ಯ, ಪರ್ವತದ ಅಚಲತೆ, ಬದುಕಿನ ಸಂಕೀರ್ಣತೆ–ಒಂದೊಂದೂ ಕಾರಂತರಿಗೆ ಸ್ಫೂರ್ತಿಯಾಗಿವೆ: ಮೂರ್ತಿಯನ್ನಾಗಿಸಿವೆ; ಈ ಕೀರ್ತಿ ತಂದಿವೆ.

ಶಾಲೆ ಕಲಿತದ್ದು ಕುಂದಾಪುರದಲ್ಲಿ. ಮಂಗಳೂರಿನಲ್ಲಿ ಕಾಲೇಜಿಗೆ ಪ್ರವೇಶ. ಆಗಲೇ ಗಾಂಧೀಜಿ ಅವರ ಅಸಹಕಾರ ಚಳುವಳಿಯ ಗಾಳಿ. ಸ್ವಾಭಿಮಾನದ ಈ ಕಿಡಿಗೆ ಮರಿ ತಡಮಾಡಲೇ ಇಲ್ಲ. ಕಾಲೇಜು ಕಾಂಪೌಂಡ್ ಹೊರಕ್ಕೆ ಹಾರಿಯೇ ಬಿಟ್ಟಿತು. ಲೋಕ ಜೀವನ ಶಿಕ್ಷಣದ ಹೊರ ಆವರಣವನ್ನು ಸೇರಿಯೇ ಬಿಟ್ಟಿತು! (ಬಯಲ ಚೇತನ ಬಂಧನದಲ್ಲಿ ಹೇಗಿದ್ದೀತು?)

ಅದಮ್ಯ ಸ್ವಾತಂತ್ರ್ಯ ಪ್ರೇಮಿ. ಗಾಂಧೀಜಿ ವಿಚಾರ ಪ್ರಚಾರಕ್ಕಾಗಿ ಅಲೆದಾಟ. ಚಳುವಳಿಯ ಹೋರಾಟ. ಪರಿಣಾಮವಾಗಿ ಜೀವನದ ವಾಸ್ತವತೆಯನ್ನು ಕಣ್ಣಾರೆ ಕಂಡುಕೊಳ್ಳುವ ಅವಕಾಶ.

ಕಾರಂತರು ನೊಟ್ಟ ಮೊದಲ ಬಾರಿಗೆ ಹತ್ತು ಜನರ ಬಾಯಿಗೆ ಬಿದ್ದದ್ದು ಪುತ್ತೂರು ದಸರಾ ಹಬ್ಬದಿಂದ. ಅದು ಅವರೇ ಆರಂಭಿಸಿದ ಸಂಘಟನೆ. ಕ್ರೀಡೆ-ಸಾಹಿತ್ಯ-ಮನರಂಜನೆಗಳ ಸಂಯೋಜನೆ ಪುತ್ತೂರು ದಸರಾ ಹಬ್ಬ. ನಾಡಿನ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಒಂದು ಸ್ಮರಣೆಯ ವೇದಿಕೆ. ಕಾರಂತರು, ಅದು ನಾಡಿಗೆ ನೀಡಿದ ಕಾಣಿಕೆ!

ಸಾಹಿತ್ಯ ಲೋಕಕ್ಕೆ ಪ್ರವೇಶಿಸಿದುದು ಪತ್ರಿಕೋದ್ಯಮದ ಬಾಗಿಲ ಮೂಲಕ. 1924ರಲ್ಲಿ 'ವಸಂತ' ಪಾಕ್ಷಿಕದ ಆರಂಭ. ಸಂಪಾದನೆ, ಪ್ರಕಟನೆ ಎಲ್ಲ ಹೊಣೆಯೂ ಅವರದೇ. 'less to entertain and more to enlighten', ಆ ಪಾಕ್ಷಿಕದ ಉದ್ದೇಶ. ಕಾರಂತರ ಅಂತರಂಗದಲ್ಲಿ ಕುದಿಯುತ್ತಿದ್ದ ವಿಚಾರಗಳ ವಾಹನವಾಗಿ 'ವಸಂತ' ಸಲ್ಲಿಸಿದ ಸೇವೆ ಅನುಪಮ. ಅದರ ಒಡಲು ಗಾಂಧೀಜಿ ಆದರ್ಶದ ತತ್ತ್ವಗಳ ತೊಟ್ಟಿಲಾಗಿದ್ದಂತೆ, ವಿಧವಾ ವಿವಾಹ, ಅಂಧ ಶ್ರದ್ಧೆಗಳಂತಹ ದುಷ್ಟ ಸಂಪ್ರದಾಯದ ವಿರುದ್ಧ ಸಿಡಿದೇಳುವ ಬೆಂಕಿಯ ಮಡಿಲೂ ಆಗಿತ್ತು.

ಗೋವಿಂದ ಪೈ, ಕುವೆಂಪು, ಬೆಟಗೇರಿ, ಕಸ್ತೂರಿ, ಮೊದಲಾದವರೆಲ್ಲಾ 'ವಸಂತ' ಲೇಖಕರ ಬಳಗ. ಹಣದ ಅನುಕೂಲವೊಂದನ್ನು ಬಿಟ್ಟು ಉಳಿದಂತೆ ಅದು ಶ್ರೀಮಂತವಾಗಿತ್ತು! ಫಲವಾಗಿ ಸಹಜ ಬಾಲಗ್ರಹ ಪೀಡೆಗೆ ತುತ್ತಾಯಿತು. ಮೂರು ವರ್ಷ ಕಳೆದು ಮತ್ತೆ ಮಾಸಿಕವಾಗಿ ಉದಯವಾದ 'ವಸಂತ' ಚಂದಾದಾರರ 'ಔದಾರ್ಯದ' ಉರುಳಲ್ಲಿ ಸಿಕ್ಕಿ ಕೊನೆಗೊಮ್ಮೆ ಅಂತಿಮವಾಗಿ ಕಣ್ಮುಚ್ಚಿಕೊಂಡಿತು!

'ವಸಂತ' ಕಣ್ಮುಚ್ಚಿ ಐವತ್ತು ವರ್ಷಗಳೇ ಕಳೆದಿವೆ. ಆದರೆ ಅದು ಇಂದಿಗೂ ಹೊಂದಿಕೊಳ್ಳುವಂತಹ ಪತ್ರಿಕೆ. ಮುಂದಿನವರೂ ಒಪ್ಪುವಂತಹ ವಿಚಾರಧಾರೆ. (ಏನೇ ಇದ್ದರೂ. 'ವಸಂತ' ಬೆಳೆದು ದೊಡ್ಡದಾಗಿ ಅದರ ನಿರ್ವಹಣೆಯ ಹೊರೆಯಿಂದ ಕಾರಂತರಿಗೆ 'ಶ್ರಮ'ವಾದೀತೆಂದು 'ಮುನ್ನೆಚ್ಚರ' ವಹಿಸಿ ಆರಂಭದಲ್ಲೇ ಅದಕ್ಕೆ ಅಂತಿಮ ಗೀತೆ ಹಾಡಿದ 'ಹೆಮ್ಮೆ'ಯ ಪೀಳಿಗೆ ನಮ್ಮದು!)

'ರಾಷ್ಟ್ರಗೀತ ಸುಧಾಕರ' ಕಾರಂತರ ಏಕ ಮಾತ್ರ ಕವನ ಸಂಗ್ರಹ. ಮುದ್ರಣ ಕಂಡ ಮೊದಲ ಕೃತಿ. 'ವಿಚಿತ್ರ ಕೂಟ' ಮೊದಲ ಕಾದಂಬರಿ (ಪತ್ತೇದಾರಿ). ನಂತರ ಅವರ ಸಾಹಿತ್ಯ ಕೃತಿಗಳ 'ಮಹಾಪೂರವೇ' ಬಂದಿದೆ. ಈ ಮಹಾಪೂರ ಅನಾಹುತವಲ್ಲ. ದೊಡ್ಡ ಉಪಕಾರ. ಹರಿದ ಕಡೆ ಇದ್ದ ದುರ್ಬಲ ಗುಡಿ-ಗುಂಡಾರಗಳು ಮುಳುಗಿ ಹೋಗಿವೆ. ದೃಢ ಕಟ್ಟಡಗಳ ಕೊಳೆ ಕೊಚ್ಚಿ ಹೋಗಿದೆ! ಪಾತ್ರದ ದಡಗಳಲ್ಲಿ ಫಲವತ್ತಾದ ಮೆಕ್ಕಲು. ಅಲ್ಲಿ ಬಿತ್ತಿ ಬೆಳೆಯುವವರಿಗೆ ಒಳ್ಳೆಯ ಫಸಲು!

ಕಳೆದ ಐದು ದಶಕಗಳಲ್ಲಿ ಸೃಷ್ಟಿಯಾಗಿರುವ ಕಾರಂತರ ಸಾಹಿತ್ಯವೇ ಒಂದು ಪ್ರಪಂಚ. ಅದು ಕಾರಂತ ಪ್ರಪಂಚ. ವಿಶ್ವದ ಬದುಕಿನ ಸಾರ ಸಂಗ್ರಹ. ಕವನ, ಕಥೆ, ಕಾದಂಬರಿ, ನಾಟಕ, ಪ್ರಬಂಧ, ಹರಟೆ, ವ್ಯಂಗ್ಯ, ಕಲೆ, ವಿಜ್ಞಾನ, ಪ್ರವಾಸ, ಜೀವನ ವೃತ್ತ, ತತ್ತ್ವ, ವಿಚಾರ, ಬಾಲ ಸಾಹಿತ್ಯ, ಪಠ್ಯ ವಿಷಯ, ಅನುವಾದ, ಇತಿಹಾಸ, ಪ್ರಾಚೀನ ಕಾವ್ಯ, ಶಿಲ್ಪ, ಶಿಲಾ ಶಾಸನ, ಪತ್ರಿಕೆ, ಜಾನಪದ—ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಬಂದಿರುವ ಸಮೃದ್ಧ ಬೆಳೆ. ಒಟ್ಟು ಕೃತಿಗಳ ಸಂಖ್ಯೆ ಇನ್ನೂರಕ್ಕೆ ಹತ್ತು ಕಡಿಮೆ ಇರಬಹುದು. ಇವುಗಳಲ್ಲಿ ನಾಟಕ - ಕಾದಂಬರಿಗಳಿಗೇ ಹೆಚ್ಚಿನ ಪಾಲು. ನಾಟಕಗಳ ಸಂಖ್ಯೆ ಐವತ್ತೆಂಟಷ್ಟಿದ್ದರೆ, ಕಾದಂಬರಿಗಳ ಸಂಖ್ಯೆ ಮುವತ್ತೈದಕ್ಕೂ ಹೆಚ್ಚು. ಪಠ್ಯ ಪುಸ್ತಕಗಳೇ ಇಪ್ಪತ್ತಮೂರು. ಇನ್ನು ಬಿಡಿ ಬರಹಗಳ ಸಂಖ್ಯೆ ಐನೂರರ ಗಡಿ ದಾಟಿರುವ ಅಂದಾಜು.

ಕಾರಂತರ ವೈಯಕ್ತಿಕ ಸಾಹಸ ಸಾಮರ್ಥ್ಯಕ್ಕೆ ಅವರ 'ಬಾಲ ಪ್ರಪಂಚ' 'ವಿಜ್ಞಾನ ಪ್ರಪಂಚ'ಗಳೇ ಸಾಕ್ಷಿ. ಹತ್ತು ಜನರ ಸಂಸ್ಥೆ ಮಾಡುವಂತಹ ಕೆಲಸವನ್ನು ಒಬ್ಬರೇ ಮಾಡಿದ್ದಾರೆ. ಕನ್ನಡ ಓದುಗರಿಗೆ ಜ್ಞಾನ ಕೋಶವನ್ನೇ ಒದಗಿಸಿದ್ದಾರೆ. ಅವರೇ ಒಂದು 'ವಿಶ್ವಕೋಶ'ವೆಂದರೆ ಚೆನ್ನಾಗಿ ಸಲ್ಲುತ್ತದೆ.

ಒಪ್ಮೊಮ್ಮೆ ಲೇಖನಿಯನ್ನು ಕೈಗೆತ್ತಿಕೊಳ್ಳದ ನಿರ್ಲಿಪ್ತತೆ. ಹಿಡಿದರೆ ಮನಸ್ಸಿಗೆ ಬಂದ ಮೂರ್ತಿಯನ್ನು ಕಡದೇ ಬಿಡುವ ತಲ್ಲೀನತೆ.ಕತೆಯಾಗಲೀ. ಕಾದಂಬರಿಯಾಗಲೀ ಒಂದೇ ಹಿಡಿತದಲ್ಲಿ ಬರೆದು ಮುಗಿಸುವ ಅಭ್ಯಾಸ. 'ಚೋಮನದುಡಿ.' 'ಸರಸಮ್ಮನ ಸಮಾಧಿ'ಯಂತಹ ಕಾದಂಬರಿಗಳು ಕೇವಲ ಐದೈದು ದಿನಗಳಲ್ಲಿ ಮೂಡಿಬಂದ ಕೃತಿಗಳ. ಮುವ್ವತ್ತು ಅಧ್ಯಾಯಗಳ 'ಮರಳಿ ಮಣ್ಣಿಗೆ' ಮುದ್ರಣಕ್ಕೆ ಸಿದ್ಧವಾದುದು ಮುವ್ವತ್ತು ದಿನಗಳಲ್ಲಿ. 'ಮುಗಿದ ಯುದ್ಧ'ಕ್ಕೆ ಬೇಕಾದುದು ಮೂರು ವಾರ ಮಾತ್ರ.

ಕಾರಂತರ ಕೃತಿಗಳಲ್ಲಿ ನಾವು ಕಾಣುವುದು ಈ ಲೋಕದ ವೈವಿಧ್ಯವನ್ನು ದುರ್ಧರ ದುರಂತವನ್ನು. ವ್ಯಕ್ತಿ ಬದುಕನ್ನು. ಆ ಬದುಕಿನ ವಿಶಿಷ್ಟ ವೈಭವವನ್ನು: ದುರ್ಧರ ದುರಂತವನ್ನು. ವ್ಯಕ್ತಿ ಮತ್ತು ಸಮಾಜದ ಸುಲಕ್ಷಣ - ವಿಲಕ್ಷಣ, ಸೌಜನ್ಯ - ದೌರ್ಜನ್ಯ, ಸಾಹಸ- ಸೋಮಾರಿತನ, ಕೃತಿ - ವಿಕೃತಿ, ಎಲ್ಲವನ್ನೂ ನಾವಿಲ್ಲಿ ಕಾಣುತ್ತೇವೆ. ಇವೆಲ್ಲ ವಿರೋಧ ಗುಣಗಳು ಸಹಜ ವಿರಸದೊಡನೆ ಸರಸವಾಡಿರುವುದೂ ಉಂಟು. ಬದುಕಿನ ನಗ್ನತೆಯ ದರ್ಶನ ಮಾಡಿಸಿರುವುದುಂಟು.

ಕಾರಂತ ಸಾಹಿತ್ಯದ ಪರಮ ಗುರಿ ಬದುಕಿನ 'ಪರಿಪೂರ್ಣತೆ. ಜೀವನವಿರುವುದೇ

ಜೀವಿಸುವುದಕ್ಕೆ. ಅದನ್ನು ಉಪೇಕ್ಷಿಸುವುದು ಅಪಜಯದ ಮಾತು' ಎನ್ನುವ ಸಿದ್ಧಾಂತ. ಬದುಕು ಕಲಾತ್ಮಕವಾಗಬೇಕೆನ್ನುವ ರಸಋಷಿ ಶಿವರಾಮ ಕಾರಂತ. 'ಕಲೆ' ಎನ್ನುವುದು ಅವರ ದೃಷ್ಟಿಯಲ್ಲಿ ಶೃಂಗಾರವಲ್ಲ ; ವಿನೋದವೂ ಅಲ್ಲ. ಅದು 'ವಸ್ತುವಿನ ಅನ್ವಯ. ಅರ್ಥ. ಅಂದ ಮತ್ತು ರಹಸ್ಯಾನುಭವಕ್ಕೆ ಮಹಾದ್ವಾರ!'

ಧರ್ಮ. ದೇವರು, ಆಧ್ಯಾತ್ಮ,ಪುರಾಣ - ಇವುಗಳಿಗೆ ಕಾರಂತರು ತಮ್ಮದೇ ಆದ ಅರ್ಥ ನೀಡಿದ್ದಾರೆ. ಕೆಲವು ಸಂದರ್ಭದಲ್ಲಿ ಸರಿಯಾದ ಶಸ್ತ್ರಚಿಕಿತ್ಸೆಯನ್ನೇ ನಡೆಸಿದ್ದಾರೆ. ತಮಗೆ ಸೂಕ್ತ, ನ್ಯಾಯ ಮತ್ತು ಸತ್ಯವೆಂದು ಕಂಡದ್ದರಲ್ಲೇ ನಂಬಿಕೆ. ಅದೂ ದಿಟ್ಟ-ದೃಢ ನಂಬಿಕೆ: 'ಸನ್ನಿವೇಶ ರಾಜಿ' ಬಳಿ ಸುಳಿಯದ ಮಾತು. ಹೇಳಬೇಕಾದುದನ್ನು ಹೇಳಿಯೇ ಬಿಡುವ ಛಲ. ನಿರ್ದಾಕ್ಷಿಣ್ಯ ಪ್ರವೃತ್ತಿ: ನಿರ್ಭೀತ ವ್ಯಕ್ತಿ !

ಓದಿ ಕಲಿತುದಕ್ಕಿಂತ ನೋಡಿ ಕಲಿತುದೇ ಹೆಚ್ಚು. ನೋಟವೇ ಅವರ ಪಾಠ ! ಹೆಚ್ಚು ನೋಡಿದವರು ಹೆಚ್ಚು ಕಲಿಯುತ್ತಾರೆಂಬ ಮಾತು ಕಾರಂತರಿಗೆ ಸೂಕ್ತ ಅನ್ವಯ. ಅವರು ಭಾರತದ ಉದ್ದಗಲವನ್ನು ಅಡ್ಡಾಡಿ ಬಂದಿದ್ದಾರೆ : ಭೂಗೋಳದ ಬಹು ಭಾಗಕ್ಕೆ ಹೋಗಿ ಬಂದಿದ್ದಾರೆ. ಪ್ರವಾಸಕ್ಕಾಗಿ ಮಾಡಿದ ವೆಚ್ಚವೆಲ್ಲ ಅವರ ಅನುಭವ ವಿಕಾಸಕ್ಕೆ ಹೂಡಿದ ಬಂಡವಾಳವಾಗಿದೆ. ಆ ಬಂಡವಾಳದಿಂದ ಬಂದ ಲಾಭವು ವಿನಿಯೋಗಕ್ಕಿಂತ ಹೆಚ್ಚು ಪ್ರಮಾಣ. ಆದರಿಂದ. ಅವರಿಗಿಂತ ಉಳಿದವರಿಗೇ ಹೆಚ್ಚು ಪ್ರಯೋಜನ !

ಪ್ರವಾಸದಲ್ಲಿ ಕಾರಂತರು ಕಂಡ (ನಾವು ಕಾಣಲಾಗದ) ಜನ - ಜನಾಂಗ, ಪದ್ಧತಿ - ಪರಂಪರೆ. ಅಭಾವ - ಸ್ವಭಾವ. ರೂಪ - ಸ್ವರೂಪ ಎಲ್ಲವನ್ನೂ ಅವರ ಕೃತಿಗಳಲ್ಲಿ ಬರುವ ಪಾತ್ರಗಳಲ್ಲಿ ಕಾಣುತ್ತೇವೆ. ಅವರ ಪ್ರವಾಸಾನುಭವ ಕೇವಲ ಸಿಹಿ ತಿನಿಸಿನ ಪೊಟ್ಟಣವಲ್ಲ ; ಸಾಕಷ್ಟು ಕಹಿಯ ಕಂತೆಯೂ ದೊರೆತಿದೆ. ಇವೆರಡನ್ನೂ ಬದುಕಿನ ಆರೋಗ್ಯಕ್ಕಾಗಿ ಹದವಾಗಿ ಬೆರೆಸಿಕೊಟ್ಟ ವೈದ್ಯ ಶಿವರಾಮ ಕಾರಂತ! ಆದರೆ ಯಾವ ಮದ್ದನ್ನೂ ಸಿಹಿ ಹೊದಿಕೆ ಹಾಕಿ ಕೊಟ್ಟು ಗೊತ್ತಿಲ್ಲ. ಅವರ 'ಗುಳಿಗೆ' ನುಂಗುವುದು ತುಸು ಕಷ್ಟವೇ! ರೋಗಿಯೇ ಇದ್ದರೂ ತಮ್ಮ ಮದ್ದು ಕುಡಿಸಬೇಕೆಂಬ ಹುಚ್ಚು ಅವರದಲ್ಲ. ಅಗತ್ಯವಿದ್ದವರು ತೆಗೆದುಕೊಳ್ಳಬಹುದು.

ನಾಟಕ ರಂಗ ಕಾರಂತರ ಅಚು ಮೆಚ್ಚಿನ ಕ್ಷೇತ್ರ. ಪರಂಪರೆಯ ಮತ್ತು ಉದ್ಯೋಗಿ ರಂಗಕ್ಕೆ ಭಿನ್ನವಾದ ಪ್ರಯೋಗ ನಡೆಸಿದ್ದಾರೆ. ರಂಗ ಕ್ಷೇತ್ರದ ಸುಧಾರಣೆಗಾಗಿ ಹೊಸ ಹೊಸ ತಂತ್ರ ಬಳಸಿದ್ದಾರೆ. ಆ ಉದ್ದೇಶಕ್ಕಾಗಿಯೇ ಅನೇಕ ನಾಟಕಗಳನ್ನು ರಚಿಸಿದ್ದಾರೆ.

ಸಂಪ್ರದಾಯದ ಸಂಗೀತ ನಾಟಕಗಳಿಗೆ ತಮ್ಮದೇ ಆದ ಸಂಸ್ಕಾರ ನೀಡಿರುವ ಕಾರಂತರು ಗೀತ ರೂಪಕ, ನೃತ್ಯ ನಾಟಕ, ಛಾಯಾ ನಾಟಕ. ಏಕಾಂಕ ನಾಟಕ. ಮೂಕ ನಾಟಕಗಳ ಒಂದು ಪರಂಪರೆಯನ್ನೇ ಬೆಳೆಸಿದ್ದಾರೆ. ಅವರ ಕೆಲವು ಪ್ರಯೋಗ ತಂತ್ರಗಳು ಕಾಲದೊಡನೆ ಮರೆಯಾಗಿರಬಹುದು : ಆದರೆ ಕೆಲವಂತೂ ಇಂದಿನ ರಂಗಭೂಮಿಯಲ್ಲಿ ಜೀವಂತವಾಗಿವೆ.

ನಾಟಕ ರಚನೆಯಲ್ಲಿ ಅವರದು ವಿಶಿಷ್ಟ ಹಸ್ತ. ರಚನೆಯಲ್ಲಷ್ಟೇ ಅಲ್ಲ : ಅಭಿನಯ, ನಿರ್ದೇಶನ, ನೃತ್ಯ. ಸಂಗೀತ ಎಲ್ಲದರಲ್ಲೂ ಎತ್ತಿದ ಕೈ. ಕಥಾ ವಸ್ತುವಿನ ವೈಚಾರಿಕ, ಆಯ್ಕೆ. ವಾಸ್ತವತೆಯ ಚಿತ್ರಣಕ್ಕೆ ಬೇಕಾದ ಪಾತ್ರಸೃಷ್ಟಿ, ಪಾತ್ರದ ಭಾವಾಭಿವ್ಯಕ್ತಿಗೆ ಸೂಕ್ತವಾದ ಸಂಭಾಷಣೆ, ಕಥಾ ಸಂದೇಶ ನಿರೂಪಣೆಗೆ ಅಗತ್ಯವಾದ ಹಾಗೂ ಪರಿಣಾಮಕಾರಿಯಾದ ಸಂಗೀತ. ದೃಶ್ಯ ಜೋಡಣೆಯ ಜಾಣ್ಮೆ. ನೃತ್ಯ - ಸಂಗೀತಗಳ ಅರ್ಥಪೂರ್ಣ ಸಂಯೋಜನ - ಇವು ಕಾರಂತರ ನಾಟಕಗಳಲ್ಲಿ ಕಂಡು ಬರುವ ವೈಶಿಷ್ಟ್ಯ.

ಜಾನಪದ ಕಾರಂತರ ಉಸಿರು. ಅದರ ಅಮಾಯಕತೆಗೆ ಬೆರಗಾದವರು ಅವರು. ಹಳ್ಳಿ ಹಳ್ಳಿ ತಿರುಗಿ. ಕಾಡು ಮೇಡು ಅಲೆದು ಜಾನಪದದ ಅಂತರಂಗ ಸೌಂದರ್ಯವನ್ನು ಕಂಡವರು.

ಯಕ್ಷಗಾನ ಕಲೆಗೆ ಕಾರಂತರು ಬೆಲೆ ತಂದು ಕೊಟ್ಟವರು. ಕಡಲ ತೀರದಲ್ಲಷ್ಟೇ ಕೇಳಿ ಬರುತ್ತಿದ್ದ ಚಂಡೆಯ ಸದ್ದು ಭಾರತದ ಅನೇಕ ಕಡೆ ಕೇಳುವಂತಾಯಿತು: ಅದಕ್ಕೆ ವಿಶ್ವ ಖ್ಯಾತಿ ಗಳಿಸಿಕೊಟ್ಟವರು ಕಾರಂತರು.

ಯಕ್ಷಗಾನದ ಸಂಗೀತ. ಸಾಹಿತ್ಯ, ನೃತ್ಯ. ಸಂಭಾಷಣೆ. ವೇಷ ಭೂಷಣಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ. ಅವುಗಳಿಗೆ ನಯ - ನವುರುಗಳನ್ನು ನೀಡಿರುವ ಕಾರಂತರು ಆಧುನಿಕ ಪರಿಸರದಲ್ಲಿ ಕಣ್ಮರೆಯಾಗಿ ಹೋಗಬಹುದಾಗಿದ್ದ ಈ ಜಾನಪದ ಕಲೆಗೆ ಜೀವ ತುಂಬಿದ್ದಾರೆ! (ಇತರ ಕಲೆಗಳಲ್ಲೂ ಇಂತಹ ಜೀವ ತುಂಬುವ ಪುಣ್ಯಾತ್ಮರು ಬೇಕಾಗಿದ್ದಾರೆ!)

ಕಾದಂಬರಿ ಕ್ಷೇತ್ರದಲ್ಲಂತೂ ಕಾರಂತರದು ಶಾಶ್ವತ ದಾಖಲೆ. 'ಚೋಮನ ದುಡಿ'. 'ಸರಸಮ್ಮನ ಸಮಾಧಿ', 'ಮರಳಿ ಮಣ್ಣಿಗೆ'. ಬೆಟ್ಟದ ಜೀವ', 'ಮುಗಿದ

ಯುದ್ಧ', 'ಕರುಳಿನ ಕರೆ', 'ಕುಡಿಯರ ಕೂಸು', 'ಅಳಿದ ಮೇಲೆ', 'ಔದಾರ್ಯದ ಉರುಳಲ್ಲಿ', 'ಮೂಕಜ್ಜಿಯ ಕನಸುಗಳು', 'ಬೆಟ್ಟದ ತೊರೆ', - ಮೊದಲಾದ ಕಾದಂಬರಿಗಳಲ್ಲಿ ನಡೆದಿರುವ ಬದುಕಿನ ಮಂಥನ ಅನನ್ಯ. ಅನುಪಮ.

ಪ್ರಬಂಧವಿರಲಿ, ಪರಿಚಯವಿರಲಿ, ಪ್ರವಾಸ ಕಥನವಿರಲಿ, ವಿಜ್ಞಾನ ವಿಷಯವಿರಲಿ, ವಿಶ್ವಕೋಶವಿರಲಿ ಒಂದೊಂದೂ ಒಂದು ದಾಖಲೆ. ಅವರ ಪ್ರತಿಯೊಂದು ಕೃತಿಯಲ್ಲಿ ಜೀವನ ಮೌಲ್ಯಗಳ ರಹಸ್ಯ ದರ್ಶನವಿದೆ. ಕಾರಂತರು ಆದರ್ಶದ ಹಿಂದೆ ನಡೆದವರಲ್ಲ; ಅದರ ಮುಂದೆ ನಡೆದವರು.

ಕಾರಂತರ ಸಾಹಿತ್ಯ ಕನ್ನಡಕ್ಕೇನು ವಿಶ್ವ ಸಾಹಿತ್ಯಕ್ಕೇ ವಿಶಿಷ್ಟ ಕೊಡುಗೆ. ಅವರ ಕೆಲವು ಕೃತಿಗಳಾದರೂ ಆಂಗ್ಲ ಭಾಷೆಗೆ ಅನುವಾದವಾಗುವಂತಾಗಬೇಕು. ಆಗ 'ನೊಬೆಲ್' ಪ್ರಶಸ್ತಿ ಅವರ ಸಾಹಿತ್ಯಕ್ಕೆ ದೂರವಾಗಲಾರದು !

ಕಾರಂತರು 1956ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. ಯಕ್ಷಗಾನ ಕಲೆಗೆ ಸಲ್ಲಿಸಿದ ಸೇವೆಗಾಗಿ 1958ರಲ್ಲಿ ಸ್ವೀಡಿಷ್ ಅಕಾಡೆಮಿಯ ಕಂಚಿನ ಪದಕ. ಅದೇ ವರ್ಷ ಅವರ ಯಕ್ಷಗಾನ ಬಯಲಾಟ ಕೃತಿಗೆ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ. ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾನಿಲಯಗಳು ಕಾರಂತರಿಗೆ ಗೌರವ ಡಾಕ್ಟರೇಟ್ ನೀಡಿದುದು 1963ರಲ್ಲಿ.

1968ರಲ್ಲಿ ಭಾರತ ಸರ್ಕಾರದಿಂದ ಪದ್ಮಭೂಷಣ ಪ್ರಶಸ್ತಿ. ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತಗುಲಿದಾಗ ಪ್ರತಿಭಟನೆಯ ಸಂಕೇತವಾಗಿ ಆ ಪ್ರಶಸ್ತಿಯನ್ನು ಸರ್ಕಾರಕ್ಕೆ ಹಿಂತಿರುಗಿಸಿದ ಧೀಮಂತ ವ್ಯಕ್ತಿ. ಮಹಾ ಸ್ವಾಭಿಮಾನಿ. 'ತಲೆ ಇರುವುದು ತಗ್ಗಿಸಲಿಕ್ಕಲ್ಲ' ಎನ್ನುವ ಸಿದ್ಧಾಂತಿ !

ಕಾರಂತರ ಬದುಕಿನಲ್ಲಿ ಸನ್ಮಾನ - ಅಭಿನಂದನ ಸಮಾರಂಭಗಳಿಗೆ ಲೆಕ್ಕವಿಲ್ಲ. ಆದರೆ ಯಾವುದರಿಂದಲೂ ಕಾರಂತರು 'ಹೆಚ್ಚು - ಕಡಮೆಯಾಗಿಲ್ಲ' ! ಎಂತಹ ಸಮಾರಂಭದಲ್ಲೂ ಅವರು ನಿರ್ಲಿಪ್ತರಂತೆಯೇ ಇರುತ್ತಾರೆ.

ಕಾರಂತರದು 'ಹುಚ್ಚು ಮನಸ್ಸಿನ ಹತ್ತು ಮುಖ!'. ಆದರೂ ಸಮಷ್ಟಿ ಹಿತದ ಒಂದೇ ದೃಷ್ಟಿ. ಆ ದೃಷ್ಟಿ ಬಹು ತೀಕ್ಷ್ಣ. ಏನೆಲ್ಲ ಕಂಡುಕೊಳ್ಳುವ ಶಕ್ತಿ ಅದಕ್ಕೆ !

ಕಲಿಯುದ ಮುಗ್ಧರ ಬಗೆಗಿಂತ 'ಕಲಿತ' ಮಹನೀಯರ ಬಗೆಗೇ ಹೆಚ್ಚು ಆತಂಕ.

ಅವರ 'ಟಾರ್ಜೆಟ್' ಎಲ್ಲ ಈ ಕಲಿತವರೆನ್ನುವ ವರ್ಗವೆ. 'ಕಲಿತವ'ರಿಂದಾಗುತ್ತಿರುವ ಅಪಾಯವನ್ನು ಕಾರಂತರು ಸೂಕ್ಷ್ಮವಾಗಿ ಗಮನಿಸಿದ್ದಾರೆ. ಅವರ ಗಮನವನ್ನು. ಅಂತಹ ಅಪಾಯಕಾರಿ ಶಕ್ತಿಗಳ ವಿರುದ್ಧ ಅವರು ಬೀಸಿರುವ ಖಡ್ಗದ ಮಿಂಚನ್ನು ಅವರ ಎಲ್ಲ ಕೃತಿಗಳಲ್ಲೂ ಕಾಣಬಹುದು. ಯಾವಾಗಲೂ ಕತ್ತಿ ಬೀಸುತ್ತಲೇ ಇರುತ್ತಾರೆಂಬ ಭಯದಿಂದ ಬಹಳ ಜನ ಹತ್ತಿರ ಹೋಗಲು ಹೆದರುವುದುಂಟು! ಆದರೆ 'ಪ್ರಾಮಾಣಿಕ'ವಾಗಿ ಹತ್ತಿರ ಹೋದವರು ಅವರ ಸಜ್ಜನಿಕೆಯ ಸರಳತೆಯ ಸೌಮ್ಯ ಸ್ಪರ್ಶದ ಲಾಭ ಪಡೆಯದೇ ಬಂದಿಲ್ಲ.

ಡಾ॥ ಶಿವರಾಮ ಕಾರಂತರು ಕನ್ನಡದ ಮಹಾ ದಿಗಂತ. ಅವರ 'ಮೂಕಜ್ಜಿಯ ಕನಸು' ತಂದು ಕೊಟ್ಟ ಜ್ಞಾನಪೀಠ ಪ್ರಶಸ್ತಿ ಕನ್ನಡಿಗರಿಗೆ ಅಭಿಮಾನ ಉಂಟುಮಾಡಿದೆ.

ಹೆಸರು, ಕೀರ್ತಿ, ಪ್ರಶಸ್ತಿ, ಏನೇ ಇದ್ದರೂ ಕಾರಂತರು ಎಂದಿನ ಕಾರಂತರೇ. ಯಾವ ಬೆಡಗಿಗೂ ಮರುಳಾಗದ ಶುದ್ಧ ಭಾವ : ನೆಲದ ಮೇಲೆ ನಡೆದೇ ಮುಗಿಲು ಮುಟ್ಟಿದ ದೊಡ್ಡ ಜೀವ !

"ಹಿಂದು" ಜನಾಂಗವಾಚಕ ಪದ

"ಹಿಂದು, ಇದು ಒಂದು ವಿಶಿಷ್ಟ ಧರ್ಮವಲ್ಲ, ಜನಾಂಗವಾಚಕ ಪದ. ಹಿಂದು ಎಂಬ ಜನಾಂಗವನ್ನು ಒಂದು ತೋಟಕ್ಕೆ ಹೋಲಿಸಿದರೆ, ಅಲ್ಲಿ ಬರುವ ವಿವಿಧ ಧರ್ಮಗಳು ಗಿಡಗಳಂತೆ. ಆದ್ದರಿಂದ 'ಹಿಂದು'ವು ಒಂದು ಸಮಾಜ; ಲಿಂಗಾಯಿತ, ವೈದಿಕ, ಸಿಕ್, ಭೌದ್ಧ, ಜೈನ—ಇವು ಅದರಲ್ಲಿಬರುವ ಸ್ವತಂತ್ರ ಧರ್ಮಗಳು."

—ಪೂಜ್ಯ ಶ್ರೀ ಲಿಂಗಾನಂದಸ್ವಾಮೀಜಿ

ಕಾರ್ಯಕ್ರಮಗಳ ವಿವರ

೧. ಆಶೀರ್ವಾದಂನಲ್ಲಿ ಭಾಷಣ

ದಿ. 27-8-1978 ರಂದು ಅಂತರ ಧಾರ್ಮಿಕ ಸಂಸ್ಥೆ "ಆಶೀರ್ವಾದಂ"ದ ಆಶ್ರಯದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು "ವೈಜ್ಞಾನಿಕ ಜಗತ್ತಿನಲ್ಲಿ ಆಧ್ಯಾತ್ಮಿಕ ಮೌಲ್ಯಗಳ ಅವಶ್ಯಕತೆ" ಕುರಿತು ಇಂಗ್ಲೀಷಿನಲ್ಲಿ ಭಾಷಣ ಮಾಡಿದರು. ರೆವರೆಂಡ್ ಫಾದರ್ ಪ್ರಭುರವರು ಅಧ್ಯಕ್ಷತೆ ವಹಿಸಿದ್ದರು. ವಿದ್ಯಾವಂತರೂ. ಶ್ರೀಮಂತರೂ ಆದ ಅಧ್ಯಾತ್ಮ ಜೀವಿಗಳ ಈ ವೃಂದವು ಪೂಜ್ಯ ಮಾತೆಯವರ ಭಾಷಣವನ್ನು ಆಲಿಸಿ ಬಹಳ ಪ್ರಭಾವಿತವಾಯಿತು. ಪೂಜ್ಯ ಮಾತೆಯವರು ಹಾಡಿದ ಇಂಗ್ಲೀಷ್ ವಚನಗಳೆರಡನ್ನು ಕೇಳಿ ಆನಂದ ತುಂದಿಲರಾದರು. ನೆರೆದಿದ್ದ ಶ್ರೋತೃಗಳು.

೨. ಬಸವ ಮಂಟಪದಲ್ಲಿ ಪೂಜ್ಯ ಸ್ವಾಮೀಜಿಯವರ ಜಯಂತಿ

ಕ್ರಾಂತಿಯೋಗಿಗಳು. ಮಾನವತಾವಾದಿಗಳು ಬಸವ ಧರ್ಮದ ವೀರಚೇತನವಾದ ಸದ್ಗುರು ಶ್ರೀ ಲಿಂಗಾನಂದ ಸ್ವಾಮೀಜಿಯವರ ೪೮ನೆಯ ಜನ್ಮ ದಿನೋತ್ಸವವನ್ನು ದಿ. ೭-೯-೧೯೭೮ ರಂದು ಬಸವ ಮಂಟಪದಲ್ಲಿ ಅತ್ಯಂತ ಅಧ್ಯಾತ್ಮಿಕವಾಗಿ ಆಚರಿಸಲಾಯಿತು. ಅಂದು ಬೆಳ್ಳಿಗೆ ೯ ಗಂಟೆಗೆ ಸಾಮೂಹಿಕ ಪೂಜೆ, ಪ್ರಾರ್ಥನೆ, ಜರುಗಿದವು. ಪೂಜ್ಯ ಸದ್ಗುರುಗಳ ಪಾದಪೂಜೆ ನೆರವೇರಿತು. ಸಂಜೆ ನಡೆದ ಸಾರ್ವಜನಿಕ ಸಮಾರಂಭದ ಅಧ್ಯಕ್ಷತೆಯನ್ನು ಧರ್ಮಾಭಿಮಾನಿಗಳೂ. ಗುರುಭಕ್ತರೂ ಆದ ಶಾಸಕ ಡಾ॥ ಬಸವರಾಜ ಜನಾಲಿ ವಹಿಸಿದ್ದರು. ಆಶ್ರಮದ ಸಾಧಕಿಯಾದ ಶರಣೆ ಗಂಗಮ್ಮನವರು ಅತ್ಯಂತ ಪರಿಣಾಮಕಾರಿಯಾಗಿ ಸದ್ಗುರುಗಳ ವ್ಯಕ್ತಿತ್ವ ಕುರಿತು ಮಾತನಾಡಿದರು. ಶರಣ ಗುರುಪಾದ ಸೂರಗೊಂಡ ಶ್ರೀಗಳ ಮಹೋನ್ನತ ಸೇವೆಯ ಬಗ್ಗೆ ನುಡಿಯಾಡಿದರು. ಅಪೂರ್ವ ವಾಗ್ಮಿಗಳೂ, ಜನಪದ ಸಾಹಿತಿಗಳೂ ಆದ ಗೊ. ರು. ಚನ್ನಬಸಪ್ಪನವರು ಹೃದಯಸ್ಪರ್ಶಿಯಾದ ಶೈಲಿಯಲ್ಲಿ ಶ್ರೀಗಳ ವ್ಯಕ್ತಿತ್ವ ದರ್ಶನ ಮಾಡಿದರು. "ಈ ಡೊಂಕಾದ ಸಮಾಜವನ್ನು ತಿದ್ದಲಸಾಧ್ಯ ಎಂಬ ನಿರಾಶಾವಾದದ ವ್ಯಕ್ತಿ ನಾನು. ನನಗಿ

ರುವ ಒಂದೇ ಆಶಾವಾದ ಪೂಜ್ಯ ಸ್ವಾಮಿಗಳು. ಅವರು ಅದಮ್ಯ ಉತ್ಸಾಹದ ಅಮೃತ ಕುಂಡವಾಗಿದ್ದಾರೆ" ಎಂದು ನುಡಿದರು. ಪೂಜ್ಯ ಮಾತಾಜಿಯವರ ವಾಗ್ಝರಿ ಅಪೂರ್ವವಾಗಿತ್ತು. "ಪೂಜ್ಯ ಗುರುಗಳ ಅಸೀಮ ತ್ಯಾಗ ಎಲ್ಲೆ ಇಲ್ಲದ್ದು. ಲೋಕ ನನ್ನನ್ನು. ನನ್ನ ಪ್ರತಿಭೆ - ಸಾಮರ್ಥ್ಯಗಳನ್ನು ಅರಿತುಕೊಳ್ಳುವ ಮೊದಲೇ ಯಾರಾದರು ಗುರುತಿಸಿದ್ದರೆ ಪೂಜ್ಯ ಗುರೂಜಿಯವರೊಬ್ಬರೆ. ಎಲ್ಲ ಎಡರುಗಳ ವಿಗುರ್ಬಣೆಯ ಮಧ್ಯೆ ಅಚಲರಾಗಿದ್ದು, ಧೈರ್ಯ ತುಂಬಿ ನಿಮ್ಮ ಮೇಲೆ ಬಸವಣ್ಣನ ಭದ್ರ ರಕ್ಷಾ ಕವಚವಿದೆ. ಅಪೂರ್ವ ಸಾಮರ್ಥ್ಯವಿದೆ. ಮುನ್ನಡೆಯಿರಿ ಎಂದುಪ್ರೋತ್ಸಾಹಿಸಿದ ಮಹಾನ್ ಶಕ್ತಿ ಗುರೂಜಿ" ಎಂದರು.

ಶಾಸಕರಾದ ಸಭಾಧ್ಯಕ್ಷತೆ ವಹಿಸಿದ್ದ ಜನಾಲಿಯವರು ಕಾರ್ಯಕ್ರಮದಿಂದ ತುಂದಿಲರಾಗಿ ನುಡಿದರು: "ದೂರ ನಿಂತು ಆಡುವವರಿಗೆ ಈ ಸಂಸ್ಥೆಯ ಕಾರ್ಯ ವ್ಯಾಪ್ತಿ, ಈ ಮಹಾ ಶಕ್ತಿಗಳ ಅರಿವು ಏನೂ ಆಗದು. ಸಮೀಪಿಸಿ ನೋಡಿದಾಗ ತಿಳಿಯುತ್ತದೆ ಈ ಶತಮಾನದ ಅನುಭವ ಮಂಟಪವಿದೆಂದು ಮತ್ತು ಈ ಎರಡು ಮಹಾನ್ ಗುರುಗಳು ವ್ಯಕ್ತಿಗಳಲ್ಲ ಶಕ್ತಿಗಳು. ನಮ್ಮ ಸಮಾಜದ ಎರಡು ಕಣ್ಣುಗಳು" ಎಂಬುದಾಗಿ. ಪೂಜ್ಯ ಗುರುಗಳ ಭವ್ಯವ್ಯಕ್ತಿತ್ವದ ಬಗ್ಗೆ ಕೊಂಡಾಡಿದ್ದಲ್ಲದೇ. ಸಂಸ್ಥೆಯ ಮಹಾನ್ ಕಾರ್ಯದಲ್ಲಿ ತಮ್ಮ ಅಳಿಲು ಸೇವೆ ಎಂದೆಂದೂ ಸಲ್ಲಿಸುವುದಾಗಿ ನುಡಿದರು. ಪೂಜ್ಯ ಗುರೂಜಿಯವರ ಆಶೀರ್ವಚನ ಮಾರ್ಮಿಕವಾಗಿತ್ತು. ಗಿರಿ ಕೊಳ್ಳದಲ್ಲಿ ರಭಸದಿಂದ ಹರಿದ ಗಂಗೆ ಗಿರಿ ತೊರೆದು ಬಯಲಲ್ಲಿ ಹರಿವಾಗ ಪ್ರಶಾಂತವಾಗಿ ಪ್ರವಹಿಸುವಂತೆ, ಹೋರಾಟದ ವಯಸ್ಸನ್ನು ಕಳೆದು ಈಗ ಶಾಂತ ಜೀವನಕ್ಕೆ ಬಂದಿರುವುದಾಗಿಯೂ, ಸನ್ಯಾಸ ಸ್ವೀಕಾರದ ನಂತರ ಅನೇಕ ವರ್ಷಗಳ ಕಾಲ ಓರ್ವರೇ ಶ್ರಮಿಸಿದ್ದಾಗಿಯೂ. ಈಗ ಅವರ ಬಸವ ಕಾರ್ಯದಲ್ಲಿ ಹೆಗಲು ಕೊಡಲು ಮಾತೆಯವರ ದಿವ್ಯಶಕ್ತಿ ಇರುವುದಾಗಿಯೂ, ನುಡಿದರು. ಅಷ್ಟೇ ಅಲ್ಲ ಇಂದು ಅರ್ಥ ಪ್ರಾಣ ಅಭಿಮಾನಗಳನ್ನರ್ಪಿಸಿ ತನು ಮನ ಧನದಿಂದ ದುಡಿಯಲು ಅನೇಕರು ಸಿದ್ಧರಾಗಿ ಬಂದಿರುವುದಾಗಿಯೂ ಹೇಳಿದರು. "ಹೇಗೆ ಒಂದು ಹಸುವು ಹಾಲನ್ನು ಕೊಟ್ಟು. ಕರುಗಳನ್ನು ನೀಡುವುದೋ ಹಾಗೆ ನಾನು ಪ್ರವಚನಾಮೃತದ ಕ್ಷೀರವನ್ನು ಲೋಕಕ್ಕೆ ಕೊಡುವುದರ ಜೊತೆಗೆ ಮಾತಾಜಿಯಂತಹ ಶಿಷ್ಯೆಯೆಂಬ ಧೇನುವನ್ನು ಕೊಟ್ಟೆ. ಅವರು ಇನ್ನೂ ವ್ಯಾಪಕವಾಗಿ ಕಾರ್ಯ ಮಾಡುತ್ತ ಅಸಂಖ್ಯಾತ ಮುಮುಕ್ಷುಗಳೆಂಬ, ಪ್ರವಚನಕಾರರೆಂಬ ಕರುಗಳನ್ನು ನೀಡುತ್ತಿದ್ದಾರೆ. ಈ ಬಸವ ಸಂತತಿ ವೃದ್ಧಿಗೊಂಡು ಧರ್ಮ ಪ್ರಸಾರ ಪರಿಣಾಮಕಾರಿಯಾಗಿ ಆಗಲೆಂದು ನನ್ನ ಹಾರೈಕೆ. ನನ್ನ ಸಂಕಲ್ಪ ಈಡೇರಿದ್ದರಿಂದ ನನ್ನ ಬದುಕಿನಲ್ಲಿ ಅಪಾರ ಸಂತೃಪ್ತಿ ಇದೆ. ಎಂದು ನುಡಿದರು.

ಶರಣು ಸಮರ್ಪಣೆ, ಮಂಗಲಗಳೊಡನೆ ಕಾರ್ಯಕ್ರಮ ಮುಗಿಯಿತು. ಶ್ರೀಮತಿ ರುಕ್ಮಿಣಮ್ಮ ಮತ್ತು ಶ್ರೀಮತಿ ವನಜಾಕ್ಷಮ್ಮನವರು ಬೂಂದಿ ಪ್ರಸಾದ ಮಾಡಿಸಿ, ಸಭಿಕರಿಗೆಲ್ಲ ಹಂಚಿದರು. ನೆತ್ರಿ. ನಾಲಿಗೆ ಮತ್ತು ಹೃದಯಗಳೆಲ್ಲವನ್ನೂ ಸಿಹಿ ಮಾಡಿಕೊಂಡು ಶರಣ ವೃಂದ ಚದುರಿತು. ★

೩. ಮಾಗಡಿಯಲ್ಲಿ ಗಣೇಶೋತ್ಸವದಲ್ಲಿ

ಬೆಂಗಳೂರು ಜಿಲ್ಲೆಯ ಮಾಗಡಿಯಲ್ಲಿ ದಿ. ೭-೯-೧೯೭೮ ರಂದು ಗಣೇಶೋತ್ಸವಕ್ಕೆ ಪೂಜ್ಯ ಮಾತಾಜಿಯವರು ದಯಮಾಡಿಸಿದ್ದರು. ಶ್ರೀ ಬಸವೇಶ್ವರ ದೇವಾಲಯದಲ್ಲಿ ವೈಭವದಿಂದ ಸ್ವಾಗತಿಸಿ ಕಾಣಿಕೆ ಸಮರ್ಪಿಸಿದರು. ಸಾರ್ವಜನಿಕ ಗಣಪತಿ ಉತ್ಸವದಲ್ಲಿ ಭಾಗವಹಿಸಿದರು. ಪೂಜ್ಯ ಮಾತೆಯವರ ದರ್ಶನ ಪಡೆದು, ಅಮೃತವಾಣಿಯನ್ನು ಆಲಿಸಲು ಸಹಸ್ರಾರು ಜನರು ಆಗಮಿಸಿದ್ದರು. "ಬೇರಾವುದೇ ಕಾರ್ಯಕ್ರಮ ಮಾಡಿ ಎಷ್ಟೇ ಪ್ರಸಾರ ಮಾಡಿದರು ಜನರನ್ನು ಸೇರಿಸುವುದು ಕಷ್ಟ ಸಾಧ್ಯ. ಪೂಜ್ಯ ಮಾತೆಯವರ ಹೆಸರು ಕೇಳಿದರೆ ಸಾಕು ಜನರು ಕಿಕ್ಕಿರಿದು ನೆರೆಯುವರು. ಅವರ ವಾಣಿಯ ಮೋಡಿ ಅಸಾದೃಶ್ಯ" ಎಂದು ಪುರ ಪ್ರಮುಖರು ಉದ್ಗಾರ ತೆಗೆದು, ಗೌರವಿಸಿ ಕಾಣಿಕೆ ಸಲ್ಲಿಸಿದರು. ★

೪. ದಾವಣಗೆರೆಯಲ್ಲಿ ಭಾಷಣ

ಕರ್ನಾಟಕದ ಹೃದಯ ಭಾಗದಂತಿದ್ದು, ಧಾರ್ಮಿಕ ಚಟುವಟಿಕೆಯ ಜೇನುಗೂಡಾಗಿ ದೇವನಗರಿ ಎಂಬ ಬಿರುದು ಪಡೆದ ದಾವಣಗೇರಿಯ ಜನತೆಯು ವೈಭವಪೂರ್ಣ ಸ್ವಾಗತ ಬಯಸಿದರು ಆರತಿಯೊಡನೆ, ಪುಷ್ಪ ಮಾಲೆ, ವಾದ್ಯ ಘೋಷಣೆಯೊಡನೆ ಸಭೆಗೆ ಬರಮಾಡಿಕೊಂಡು ಪೂಜ್ಯ ಮಾತಾಜಿಯವರನ್ನು ಗೌರವಿಸಿದರು. ಧೀರೋದಾತ್ತ ಕಾರ್ಮಿಕ ಮುಖಂಡರು, ಜನಪ್ರಿಯ ಮುಂದಾಳುಗಳು, ದೀನರ ಬಂಧು ಎನ್ನಿಸಿಕೊಂಡಿರುವ ಶಾಸಕ ಕಾಮ್ರೇಡ್ ಪಂಪಾಪತಿಯವರು ಘನ ಅಧ್ಯಕ್ಷರಾಗಿರುವ ನಾಟ್ಯ ಸೇವಾ ಗಣಪತಿ ದೇವಸ್ಥಾನದ ಸಮಿತಿ ಆಶ್ರಯದಲ್ಲಿ ಅದ್ದೂರಿಯಾದ ಗಣೇಶೋತ್ಸವ ಸಮಾರಂಭಕ್ಕೆ ಪೂಜ್ಯ ಮಾತೆಯವರನ್ನು ಆಮಂತ್ರಿಸಿದ್ದರು. ಸಭಾಧ್ಯಕ್ಷತೆಯನ್ನು ಶ್ರೀ ಷ॥ಬ್ರ॥ ಸದ್ಯೋಜಾತ ಸ್ವಾಮಿಗಳು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶರಣ. ಕೆ. ಆರ್. ಲಿಂಗಪ್ಪನವರು ಆಗಮಿಸಿ ಮನೋಜ್ಞವಾಗಿ ಜನಪದ ಗೀತೆಗಳನ್ನು ಹಾಡಿದರು.

ಪೂಜ್ಯಶ್ರೀ ಮಾತಾಜಿಯವರ ಭಾಷಣ ನಿರರ್ಗಳವಾಗಿ ಒಂದೂ ಕಾಲು ಗಂಟೆಯ ವರೆಗೆ ಪ್ರವಹಿಸಿದಾಗ ಆ ಜ್ಞಾನ ಧಾರೆಯಲ್ಲಿ ಮಿಂದು ಎಲ್ಲರೂ ಆನಂದಿಸಿದರು. ಕಾರ್ಮಿಕರು - ಕೃಷಿಕರು, ವಿದ್ಯಾವಂತರು - ವ್ಯಾಪಾರಸ್ಥರು, ಅಧಿಕಾರಿಗಳು - ಅನಕ್ಷರಸ್ಥರು, ಮಹಿಳೆಯರು - ಮಕ್ಕಳು ಕುತೂಹಲ - ಸಂಭ್ರಮಗಳಿಂದ ಆಲಿಸಿದರು. ಒಂದು ಹೃದಯಂಗಮ ಘಟನೆ ನಡೆಯಿತು. ಓರ್ವ ಬಡವಿ. ಆದರೆ ಜ್ಞಾನಿ ಪೂಜ್ಯ ಮಾತೆಯವರ ಹೆಸರನ್ನು ಕೇಳಿ. ಅವರ ಸಾಹಿತ್ಯವನ್ನು ಅವರಿವರಿಂದ ಪಡೆದು ಓದಿದ್ದಳಂತೆ, ಹಿಗಾಗಿ ಅನನ್ಯವಾದ ಭಕ್ತಿ. ಅವರ ದರ್ಶನ ಎಂದಿಗಾದೀತೋ ಎಂದು ಪರಿತಪಿಸುತ್ತಿದ್ದು, ತನಗೆ ಸಾಧ್ಯವಾದಾಗ ಕೆಲವು ಪೈಸೆಗಳ ಮೀಸಲನ್ನು ತೆಗೆದಿರುಸುತ್ತಿದ್ದಳಂತೆ. ಅಂಥದೊಂದು ಗಂಟನ್ನು ತಂದು ವಿನಂತಿಸಿದಾಗ ಕಾರ್ಯಕರ್ತರು ಅನವಶ್ಯಕ ಗದ್ದಲ ಏಕೆಂದು ಬಿಡಲಿಲ್ಲ. ಆಗ ಆಕೆ ಯಾರೋ ಕೈಲಿ ಕಳಿಸಿದ್ದಳು ತನ್ನ ಬಿನ್ನಹದೊಡನೆ. ತೆರೆದು ನೋಡಿದರೆ ಹನ್ನೆರಡು ರೂಪಾಯಿ. ಈ "ಶಬರಿ ಭಕ್ತಿ"ಗೆ ಆಶ್ಚರ್ಯ-ಆನಂದ ಏಕಕಾಲಕ್ಕೆ ಉಂಟಾದವು.

ಸಭಿಕರೆಲ್ಲ ಪ್ರವಚನಾಮೃತ ಸರಸಿಯಲ್ಲಿ ಮಿಂದು ಆನಂದ ಪರವಶರಾಗಿ ಸಭೆ ಮುಗಿಸಿಕೊಂಡು ಮಾತೆಯವರು ಹೊರಟಾಗ ನಮಸ್ಕರಿಸಲು ಉದ್ಯುಕ್ತರಾದಾಗ ಕಾರ್ಯಕರ್ತರಿಗೆ ನಿಗ್ರಹಿಸುವುದೇ ಕಷ್ಟವಾಯಿತು. ಬಹು ದಿನದಿಂದ ತಪಿಸಿದ್ದ ಭಾಗ್ಯವನ್ನು ಕಂಡಂತಾಗಿತ್ತು, ಹಲವಾರು ಸಹೃದಯರಿಗೆ. ಶಾಸಕ ಪಂಪಾಪತಿಯವರು ಎಡಬಿಡದ ಕಾಯಗಳ ನಡುವೆಯೂ ಬಿಡುವು ಮಾಡಿಕೊಂಡು ಬಂದ ಪೂಜ್ಯ ಮಾತಾಜಿಯವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸಿದರು.

೫. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್.

ಮೇಲ್ಕಂಡ ಸಂಸ್ಥೆಯ ಆಶ್ರಯದಲ್ಲಿ ದಿ. ೨೦-೯-೭೮ ರಂದು ಸಂಜೆ ೫ ಗಂಟೆಗೆ ಪೂಜ್ಯ ಮಾತಾಜಿಯವರು "Science and Religion" ಎಂಬ ವಿಷಯವನ್ನು ಕುರಿತು ವಿದ್ವತ್‌ಪೂರ್ಣ ಭಾಷಣ ಮಾಡಿದರು. ಇಂಗ್ಲೀಷಿನಲ್ಲಿ ಒಂದೂ ಕಾಲು ಗಂಟೆಯವರೆಗೆ ಮಾಡಿದ ಭಾಷಣದಲ್ಲಿ ವೈಜ್ಞಾನಿಕ ಯುಗದಲ್ಲಿ ಧರ್ಮದ ಆವಶ್ಯಕತೆ, ದೇವರ ನಂಬುಗೆ ವಿಜ್ಞಾನ ವಿರೋಧಿಯೆ ? ವಿಜ್ಞಾನ ಮತ್ತು ಧರ್ಮಗಳು ಪರಸ್ಪರ ವಿರೋಧಿಗಳೇ ? ಅವೆರಡರ ಮಧ್ಯೆ ಸಮ್ಮಿಲನ ಸಾಧ್ಯವಿದೆಯೆ ? ಎಂಬ ಬಗ್ಗೆ ವೈಚಾರಿಕವಾಗಿ, ಸೋದಾಹರಣೆಗಳೊಂದಿಗೆ ವ್ಯಾಖ್ಯಾನ ಮಾಡಿದರು. ಶ್ರೋತೃಗಳು ಅತ್ಯಂತ ಹರ್ಷಪೂರಿತರಾದರು. ತಮ್ಮ ಅನೇಕ ಸಂದೇಹ - ಗೊಂದಲಗಳು ಪರಿಹಾರ

ವಾದವೆಂದು ನುಡಿದರು. ಪ್ರೊ || ವಾಸುರವರು ಹಾರ್ದಿಕ ಸ್ವಾಗತ ಬಯಸಿ ಕೃತಜ್ಞತಾ ಸಮರ್ಪಣೆ ಮಾಡಿದರು. ಬೆಂಗಾಲಿ ಸಂಶೋಧಕ ವಿದ್ಯಾರ್ಥಿ ಬಿಶ್ವಾಸ್ ಪುಷ್ಪ - ಫಲಗಳನ್ನು ಸಲ್ಲಿಸಿದರು.

೬. ಶಿವಮೊಗ್ಗಾದಲ್ಲಿ

ರಾಮಶೆಟ್ಟಿ ಸಾರ್ವಜನಿಕ ಉದ್ಯಾನದಲ್ಲಿ ನಡೆದ ವೈಭವದ ಗಣೇಶೋತ್ಸವದಲ್ಲಿ ದಿ.೨೩-೯-೧೯೭೮ ರಂದು ಭಾಗವಹಿಸಿ ಪೂಜ್ಯ ಮಾತಾಜಿ ತಮ್ಮ ಅಮೃತ ವಚನಗಳನ್ನು ಜನಸ್ತೋಮಕ್ಕೆ ನೀಡಿದರು. ಒಂದೂವರೆ ತಿಂಗಳ ಕಾಲ ನಡೆದ ವಿಶ್ವಧರ್ಮ ಪ್ರವಚನದ ಪ್ರಭಾವ ಇನ್ನೂ ಜನಮನದಲ್ಲಿ ಚೆನ್ನಾಗಿ ಅಚ್ಚೊತ್ತಿದ್ದು. ಚಾತಕ ಪಕ್ಷಿಗಳಂತೆ ಜನರು ಪೂಜ್ಯರ ಬರವಿಗಾಗಿ ನಿರೀಕ್ಷಿಸುತ್ತಿದ್ದರು. ದರ್ಶನ ಮತ್ತು ಪ್ರವಚನ ಪ್ರಸಾದ ಪಡೆದು ಆನಂದ ತುಂದಿಲರಾದರು.

೭. ಮಾಕನೂರುನಲ್ಲಿ

ರಾಣೇಬೆನ್ನೂರು ತಾಲ್ಲೂಕು ಮಾಕನೂರು ಗ್ರಾಮದ ಭರಮಪ್ಪ ಮೂಕಣ್ಣನವರು ಕಿರ್ಲೋಸ್ಕರ್ ಕಂಪೆನಿಯ ಕೆಲಸಗಾರರು. ತಮ್ಮ ತಂದೆಯವರ ಪುಣ್ಯತಿಥಿಯನ್ನು ವಿಶೇಷ ರೀತಿಯಲ್ಲಿ ಆಚರಿಸುವರು. ಅಂದು ಅನೇಕ ಅನುಭಾವಿಗಳನ್ನು, ವಿದ್ವಾಂಸರನ್ನು ಪ್ರವಚನಕಾರರನ್ನು ಕರೆಸಿ ಭಾಷಣ ಮಾಡಿಸುವುದಷ್ಟೇ ಅಲ್ಲದೆ ಆ ಗ್ರಾಮದಲ್ಲಿ ಏನಾದರೂ ವಿಶೇಷ ಸೇವೆ ಮಾಡಿದ ನಾಗರಿಕರನ್ನು ತಮ್ಮ ಶಕ್ತ್ಯಾನುಸಾರ ಸತ್ಕರಿಸುವರು. ಹೀಗಾಗಿ ಒಂದು ಸಣ್ಣ ಗ್ರಾಮ ಅನೇಕ ಮಹನೀಯರನ್ನು ಕಾಣುವ ಸುಯೋಗ ಹೊಂದಿದೆ. ಹೋದ ವರುಷ ಪೂಜ್ಯ ಮಾತಾಜಿಯವರನ್ನು ಬರಮಾಡಿಕೊಂಡಿದ್ದ ಭರಮಣ್ಣನವರು ಈ ಬಾರಿ ೨೫ ವರ್ಷಗಳ ಹಬ್ಬವಾಗಿರುವುದರಿಂದ ಮತ್ತೊಮ್ಮೆ ಬರಮಾಡಿಕೊಂಡು ಗೌರವಿಸಿ, ಪ್ರವಚನ ಮಾಡಿಸಿದರು. ಅದ್ದೂರಿಯಾದ ಸ್ವಾಗತ ಅದ್ಭುತವಾದ ಮೆರವಣಿಗೆಯೊಡನೆ ವೇದಿಕೆಗೆ ಕರೆತಂದರು. ಪ್ರವಚನಾನಂತರ ಸುತ್ತಲಿನ ಹಳ್ಳಿಯ ಜನಕ್ಕೆ ಅನ್ನದಾಸೋಹ ಸಹ ನಡೆಸಿ, ತಂದೆಯವರನ್ನು ಸಂಸ್ಮರಿಸಿಕೊಂಡರು. ★

ಸೆಪ್ಟೆಂಬರ್ ತಿಂಗಳಲ್ಲಿ ಕಲ್ಯಾಣ ಕಿರಣಕ್ಕೆ ೧೫೧ ರೂಗಳನ್ನು ಸಲ್ಲಿಸಿದ ಆಜೀವ ಸದಸ್ಯರ ಬಳಗ

೧. ಶರಣ. ಮುರಿಗೆಪ್ಪ, ಮಲ್ಲಿಕಾರ್ಜುನ ಸ್ಟೋರ್ಸ್, ಭದ್ರಾವತಿ.
೨. ಶರಣ. ಹೆಚ್.ಕೆ. ರುದ್ರಮುನಿ, ವಿಜಯನಗರ, ಬೆಂಗಳೂರು-೪೦.
೩. ಶರಣ. ಗವಿರಂಗಪ್ಪ, ಅರಳಿಕೆರೆ, ಜಿಲ್ಲೆ, ತುಮಕೂರು.
೪. ಶರಣ. ಎಂ.ಎಸ್. ಗುರುಸಿದ್ಧಯ್ಯ, ಹೊಂಬೆಗೌಡ ನಗರ, ಬೆಂಗಳೂರು.
೫. ಶರಣೆ. ಸುಶೀಲಾ ಕೃಷ್ಣಯ್ಯ. ಆಡಿಟರ್, ಕುಮಾರಪಾರ್ಕ್, ಬೆಂಗಳೂರು.

8) For deposits above 5 years — $9\frac{1}{4}\%$

9) Reserve Fund Deposits of Central Co-operative Banks & Societies — $9\frac{1}{4}\%$

IV. Call Deposits :

Rs. 25,000 and above (3 days notice)	We offer higher rate of interest to the Co-operative Institutions on negotiation depending upon local market rates.

V. Special Deposit Schemes :

1) Golden Jubilee Certificates.
2) Cumulative Deposits.
3) Sarvodaya Deposits (Pigmy Deposit)
4) Diamond Jubilee Jeevan Jyothi Deposits.
5) Anantha Deposits.
6) Janatha Personal Accident Insurance linked Deposit Scheme.
7) Pension Scheme.
8) Cumulative Deposit linked with Janatha Personal Accident Insurance Scheme.

G. L. Nallure Gowda
President

C. Gopala Reddy
Managing Director

G. W. Benignus
Secretary

ಕಲ್ಯಾಣ ಕಿರಣ
ಮಾಸಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :

ಪೂಜ್ಯ ಶ್ರೀ
ಜಗದ್ಗುರು ಮಾತೆ ಮಹಾದೇವಿ.

ಪ್ರಕಾಶಕರು :

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು.

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ
ಬಸವ ಮಂಟಪ, ನಂ. ೨೪, ಎರಡನೇ ವಿಭಾಗ, ಕಾರ್ಡ್‌ರೋಡ್, ರಾಜಾಜಿನಗರ
ಬೆಂಗಳೂರು-೫೬೦೦೧೦

ಕಲೆ :


ಬಿ. ಪಿ. ಕೃಷ್ಣಯ್ಯ

ಮುದ್ರಣ : ಸೂಪರ್ ಪ್ರಿಂಟರ್ಸ್
ಬೆಂಗಳೂರು-೫೩

ಚಂದಾ ವಿವರ

ಬಿಡಿ ಸಂಚಿಕೆ :	ರೂ.	೧-೦೦
ವಾರ್ಷಿಕ :	ರೂ.	೧೨-೦೦
ದ್ವೈವಾರ್ಷಿಕ :	ರೂ.	೨೩-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಒಂದರಂದು ಪ್ರಕಟವಾಗುವುದು.
* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.
* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.
* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.
* ಲೇಖಕರು ತಮ್ಮ ಹೆಸರು, ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.
* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನು ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.
* ಚಂದಾಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.
* ಹೊಸ ಚಂದಾದಾರರು ೧೨-೦೦ (ಹನ್ನೆರಡು) ರೂಪಾಯಿ ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ.)
* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.
* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನು ಕಳಿಸಲಾಗುವುದು.



Correspond to : Phone : 82335

BASAVA MANTAPA

No. 24, Chord Road, 2nd Block, Rajajinagar

Bangalore-560010